ಬೆಂಗಳೂರು
ಮಂಗಳವಾರ, 24 ಮಾರ್ಚ್ 2026
ಸಂಪುಟ 33, ಸಂಚಿಕೆ 142, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital
ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಅಯೋಧ್ಯೆಗೆ 450 ಕೆಜಿ ಪ್ರಸಾದ ರವಾನೆ | ೦೫
ರಾಹೆಗಳಲ್ಲಿ ಎಐ ಡ್ಯಾಶ್‌ಕ್ಯಾಮ್! | ೦೫
ರಷ್ಯಾ ಜತೆ ಪಾಲುದಾರಿಕೆ ಇನ್ನಷ್ಟು ದೃಢ | ೦೫

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ರೋಹಿಣಿ

ದಿನದ ಮಾತು

ಭವಿಷ್ಯ ಎದುರಿಸಲು ಸಿದ್ಧನಿರುವಾತ, ಯಾವುದೇ ಸಂದರ್ಭದಲ್ಲಿ ಜಾಣ್ಮೆಯಿಂದ ವರ್ತಿಸುವಾತ ಸುಖಿಗಳು. ಕೇವಲ ಅದೃಷ್ಟ ಅವಲಂಬಿಸಿ ಬದುಕುವವನು ಬೇಗ ಹಾಳಾಗುತ್ತಾನೆ.
▲ ಚಾಣಕ್ಯ ನೀತಿ

ಎಲ್‌ಪಿಜಿಗೆ ಪರ್ಯಾಯ- ಗೋಬರ್‌ಗ್ಯಾಸ್

ಧರಣಿ ಮಂಡಲ
• ಕೆ.ಎಸ್.ಶೈಲೇಶ್ ಹೊಳ್ಳ
• ಪುಟ ೬

ಕಿರುಸುದ್ದಿ

ಡಿಜಿಟಲ್ ಅರೆಸ್ಟ್ ಹೆಸರಲ್ಲಿ ಐದು ಕೋಟಿ ರೂ. ವಂಚನೆ

• **ಬೆಂಗಳೂರು:** ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಸೈಬರ್ ವಂಚಕರು ಅಮಾಯಕರಿಗೆ ಮೋಸ ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಇತ್ತೀಚೆಗಷ್ಟೇ ಉದ್ಯಮಿಯೊಬ್ಬರಿಗೆ 15 ಕೋಟಿ ರೂ. ವಂಚಿಸಿದ್ದ ಘಟನೆ



ಮಾಸುವ ಮುನ್ನವೇ, ಇದೀಗ 94 ವರ್ಷದ ನಿವೃತ್ತ ಸಂಶೋಧಕರೊಬ್ಬರಿಂದ ಬರೋಬ್ಬರಿ 4.91 ಕೋಟಿ ರೂ. ವಂಚಿಸಿರುವ ಆಘಾತಕಾರಿ ಪ್ರಕರಣ ಬೆಳಕಿಗೆ ಬಂದಿದೆ. ಸೈಬರ್ ವಂಚಕರು ನಿವೃತ್ತ ಸಂಶೋಧಕರೊಬ್ಬರ ಲ್ಯಾಂಡ್ ಲೈನ್‌ಗೆ ಕರೆ ಮಾಡಿ, ನಿಮ್ಮ ವಿರುದ್ಧ ಬಳ್ಳಾರಿಯಲ್ಲಿ ಮಾನವ ಕಳ್ಳಸಾಗಾಣಿಕೆ ಪ್ರಕರಣ ದಾಖಲಾಗಿದೆ ಎಂದು ಹೆದರಿಸಿದ್ದಾರೆ. ನಂತರ ಸಂದೀಪ್ ರಾವ್ ಎಂಬ ವ್ಯಕ್ತಿ ತಾನು ಸಿಬಿಐ ಅಧಿಕಾರಿ ಎಂದು ಪರಿಚಯಿಸಿಕೊಂಡು, ವೃದ್ಧರ ಆಧಾರ್ ವಿವರಗಳನ್ನು ವಾಟ್ಸ್‌ಆ್ಯಪ್ ಮೂಲಕ ಪಡೆದಿದ್ದಾನೆ. ➡ಪುಟ 9

ಹಳದಿ ಲೋಹ, ಬೆಳ್ಳಿ ದರದಲ್ಲಿ ಭಾರೀ ಕುಸಿತ

• **ಹೊಸದಿಲ್ಲಿ:** ಚಿನ್ನ ಮತ್ತು ಬೆಳ್ಳಿ ಬೆಲೆಗಳಲ್ಲಿ ಸೋಮವಾರ ತೀವ್ರ ಕುಸಿತ ಕಂಡುಬಂದಿದ್ದು, ಎ ದೇಶೀಯ ಚಿನ್ನದ ದರ ಶೇ.6.5 ರಷ್ಟು ಇಳಿಕೆಯಾಗಿ ಪ್ರತಿ 10 ಗ್ರಾಂಗೆ 1,35,100 ರೂ. ತಲುಪಿದೆ. ಇದರೊಂದಿಗೆ, ಜನವರಿ 29ರಂದು ದಾಖಲಾಗಿದ್ದ 1.93 ಲಕ್ಷ ರೂ.ಗಳ ಗರಿಷ್ಠ ಮಟ್ಟದಿಂದ ಶೇ.30 ರಷ್ಟು ಕುಸಿತ ಕಂಡಿದೆ. ಬೆಳ್ಳಿ ಬೆಲೆ ಶೇ. 8.97 ರಷ್ಟು ಕುಸಿದು ಪ್ರತಿ ಕೆಜಿಗೆ 2,06,441 ರೂ.ಗೆ ತಲುಪಿದ್ದು, ದಾಖಲೆಯ ಮಟ್ಟದಿಂದ ಒಟ್ಟು ಶೇ.50ಕ್ಕಿಂತ ಹೆಚ್ಚು ಕುಸಿತ ಕಂಡಿದೆ.

• ಪುಟ ೫

ಶಾಲಾ ವಿದ್ಯಾರ್ಥಿಗಳಿಗೆ ಮೊಬೈಲ್ ಬಳಕೆ ನಿಷೇಧ

• ಪುಟ ೩

ತುಳು ಅಧಿಕೃತ ಭಾಷೆಯಾಗಿ ಘೋಷಿಸಿ: ಉಮಾನಾಥ್

• ಪುಟ 9

ಸರ್ಕಾರಿ ಯೋಜನೆ ಅನುಷ್ಠಾನದಲ್ಲಿ ತಾಳಮೇಳವೇ ಬೆರೆಯುತ್ತಿಲ್ಲ: ಬಿಜೆಪಿ

• ಪುಟ ೩

ಮಾತುಕತೆ, ರಾಜತಾಂತ್ರಿಕತೆ ಮಾತ್ರ ಸಂಘರ್ಷಕ್ಕೆ ಪರಿಹಾರ: ಮೋದಿ

ಕೋವಿಡ್ ವೇಳೆ ತೋರಿದ ತಾಳ್ಮೆಯಂತೆ ಈ ಸಂಕಷ್ಟ ಎದುರಿಸೋಣ

ಏಕತೆಯಿಂದ ಎದುರಿಸಿ



ಶಾಂತಿ, ಸಹನೆ, ಜಾಗೃತಿ ಇರಲಿ

ಕೊನೆಯಲ್ಲಿ ಪ್ರಧಾನಿ ಮೋದಿ ಅವರು ದೇಶದ ಜನರಿಗೆ ಶಾಂತಿ, ಸಹನೆ ಮತ್ತು ಜಾಗೃತಿಯಿಂದ ಇರಲು ಕರೆ ನೀಡಿದರು. ನಾವು ಒಟ್ಟಾಗಿ ನಡೆದುಕೊಂಡರೆ ಯಾವುದೇ ಸವಾಲನ್ನೂ ಎದುರಿಸಬಹುದು ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಈ ಸಂಕಷ್ಟದ ಸಂದರ್ಭದಲ್ಲಿ ಭಾರತದಿಂದ ಏಕಮತದ ಧ್ವನಿ ಜಗತ್ತಿಗೆ ಕೇಳಿಸಬೇಕು ಎಂದು ಮೋದಿ ಹೇಳಿದರು.

ಹಡಗುಗಳ ಮೇಲೆ ದಾಳಿಗೆ ಖಂಡನೆ

ಅಂತಾರಾಷ್ಟ್ರೀಯ ಜಲಮಾರ್ಗಗಳಾದ ಹಾರ್ಮುಜ್



ಜಲಸಂಧಿಯಲ್ಲಿ ವ್ಯಾಪಾರ ಹಡಗುಗಳ ಮೇಲೆ ದಾಳಿಗಳು ನಡೆಯುತ್ತಿರುವುದು ಸ್ವೀಕಾರಾರ್ಹವಲ್ಲ ಎಂದು ಅವರು ಖಂಡಿಸಿದರು. ಜಗತ್ತಿನ ಸುಮಾರು ಶೇ.20 ಇಂಧನ ಸಾಗಾಣಿಕೆ ಈ ಮಾರ್ಗದ ಮೂಲಕ ನಡೆಯುವುದರಿಂದ ಇದರ ಭದ್ರತೆ ಅತ್ಯಂತ ಮುಖ್ಯವಾಗಿದೆ ಎಂದು ಹೇಳಿದರು.

• **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಪರಿಸ್ಥಿತಿ ದೀರ್ಘಕಾಲ ಮುಂದುವರಿಯುವ ಸಾಧ್ಯತೆ ಇದೆ ಎಂದಿರುವ ಪ್ರಧಾನಿ ನರೇಂದ್ರ ಮೋದಿ, ದೇಶವು ಕೊರೋನಾ ಸಂದರ್ಭದಲ್ಲಿ ತೋರಿಸಿದಂತೆ ಏಕತೆ ಮತ್ತು ತಾಳ್ಮೆಯಿಂದ ಈ ಸಂಕಷ್ಟವನ್ನೂ ಎದುರಿಸಬೇಕು ಎಂದು ಕರೆ ನೀಡಿದ್ದಾರೆ.

ಲೋಕಸಭೆಯಲ್ಲಿ ಸೋಮವಾರ ಹೇಳಿಕೆ ನೀಡಿರುವ ಅವರು, ಈ ಸಂಘರ್ಷವು ಇಂಧನ, ರಸಾಯನಿಕ



ಗೊಬ್ಬರ, ರಾಷ್ಟ್ರೀಯ ಭದ್ರತೆ ಸೇರಿದಂತೆ ಹಲವಾರು ಕ್ಷೇತ್ರಗಳ ಮೇಲೆ ಪರಿಣಾಮ ಬೀರುತ್ತಿದ್ದು, ಪಶ್ಚಿಮ ಏಷ್ಯಾದಲ್ಲಿ ನೆಲೆಸಿರುವ ಭಾರತೀಯರ ಸುರಕ್ಷತೆ ಕುರಿತು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಂಡಿದೆ ಎಂದರು.

ಮಾತುಕತೆಯಿಂದ ಪರಿಹಾರ: ಸಂಘರ್ಷಕ್ಕೆ ಅಂತಿಮ ಪರಿಹಾರ ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕವೇ ಸಾಧ್ಯ. ಎಲ್ಲಾ ಸಂಬಂಧಿತ ರಾಷ್ಟ್ರಗಳ ನಾಯಕರೊಂದಿಗೆ ಮಾತುಕತೆ ನಡೆಸಿರುವುದಾಗಿ ಪ್ರಧಾನಿ ಮೋದಿ ತಿಳಿಸಿದರು. ➡ಪುಟ 9

ಎಲ್ಲಾ ರಾಷ್ಟ್ರಗಳಿಗೂ ಸವಾಲು • ಪುಟ 9

ಭಾರತೀಯರ ಸುರಕ್ಷತೆಗೆ ವಿಶೇಷ ಕ್ರಮ

ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ವಾಸಿಸುವ ಸುಮಾರು ಒಂದು ಕೋಟಿ ಭಾರತೀಯರ ಸುರಕ್ಷತೆ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಮೋದಿ ಹೇಳಿದರು. ಯುದ್ಧ ಆರಂಭವಾದ ಬಳಿಕ 3.75 ಲಕ್ಷಕ್ಕೂ ಹೆಚ್ಚು ಭಾರತೀಯರನ್ನು ಸುರಕ್ಷಿತವಾಗಿ ಸ್ವದೇಶಕ್ಕೆ ಕರೆತರಲಾಗಿದೆ ಎಂದು ಮಾಹಿತಿ ನೀಡಿದರು. ಇರಾನ್‌ನಿಂದಲೇ ಸುಮಾರು 1,000 ಭಾರತೀಯರು, ಈ ಪೈಕಿ 700ಕ್ಕೂ ಹೆಚ್ಚು ವೈದ್ಯಕೀಯ ವಿದ್ಯಾರ್ಥಿಗಳು ಸುರಕ್ಷಿತವಾಗಿ ವಾಪಸ್ಸಾಗಿದ್ದಾರೆ ಎಂದು ಹೇಳಿದರು.

ಇಂಧನ ಭದ್ರತೆಗೆ ಯೋಜನೆ

ಇಂಧನ ಭದ್ರತೆಗಾಗಿ ಕಳೆದ ದಶಕದಲ್ಲಿ ಭಾರತ ಮಹತ್ವದ ಕ್ರಮಗಳನ್ನು ಕೈಗೊಂಡಿದೆ ಎಂದು ಮೋದಿ ವಿವರಿಸಿದರು.



27 ದೇಶಗಳಿಂದ ಇಂಧನ ಆಮದು ಮಾಡುತ್ತಿದ್ದ ಭಾರತ ಈಗ 41 ದೇಶಗಳಿಂದ ಇಂಧನ ಪಡೆಯುತ್ತಿದೆ ಎಂದು ಹೇಳಿದರು. ಭಾರತದ ಬಳಿ 5.3 ಮಿಲಿಯನ್ ಮೆಟ್ರಿಕ್ ಟನ್‌ಗಳಷ್ಟು ಸ್ಟ್ರಾಟೆಜಿಕ್ ಪೆಟ್ರೋಲಿಯಂ ಸಂಗ್ರಹವಿದ್ದು, ಇದನ್ನು 6.5 ಮಿಲಿಯನ್ ಟನ್‌ಗೆ ಹೆಚ್ಚಿಸಲು ಯೋಜನೆ ಇದೆ. ದೇಶೀಯ ತೈಲ ಕಂಪನಿಗಳಲ್ಲಿಯೂ ಸಾಕಷ್ಟು ಸಂಗ್ರಹವಿದೆ ಎಂದು ಹೇಳಿದರು.

ವಿದ್ಯುತ್ ವ್ಯವಸ್ಥೆ ಸಮರ್ಪಕ

ಬೇಸಿಗೆ ಆರಂಭವಾಗಿರುವುದರಿಂದ ವಿದ್ಯುತ್ ಬೇಡಿಕೆ



ಹೆಚ್ಚಾಗಿದೆ. ದೇಶದ ವಿದ್ಯುತ್ ಘಟಕಗಳಲ್ಲಿ ಸಾಕಷ್ಟು ಕಲ್ಲಿದ್ದಲು ಸಂಗ್ರಹವಿದೆ ಎಂದು ಹೇಳಿದರು. ಭಾರತವು 2ನೇ ವರ್ಷವೂ 1 ಬಿಲಿಯನ್ ಟನ್‌ಗಿಂತ ಹೆಚ್ಚು ಕಲ್ಲಿದ್ದಲು ಉತ್ಪಾದಿಸಿ ದಾಖಲೆ ನಿರ್ಮಿಸಿದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿಯೂ ದೇಶ ಮಹತ್ವದ ಸಾಧನೆ ಮಾಡಿದೆ ಎಂದು ಹೇಳಿದರು.

ಕಾಂಗ್ರೆಸ್-ಬಿಜೆಪಿಯಿಂದ ಶಕ್ತಿ ಪ್ರದರ್ಶನ

ರಂಗೇರಿದ ಉಪ ಕಣ



ದಾವಣಗೆರೆ ದಕ್ಷಿಣದಿಂದ ನಾಮಪತ್ರ ಸಲ್ಲಿಸಿದ ಸಮರ್ಥ್. ಸಿಎಂ, ಡಿಸಿಎಂ ಇದ್ದರು.



ಬಾಗಲಕೋಟೆಯಿಂದ ನಾಮಪತ್ರ ಸಲ್ಲಿಸಿದ ಚರಂತಿಮಠ. ಬಿಜೆಪಿ ನಾಯಕರು ಇದ್ದರು.

• **ಬಾಗಲಕೋಟೆ:** ಆಡಳಿತ ಕಾಂಗ್ರೆಸ್ ಮತ್ತು ವಿರೋಧ ಪಕ್ಷವಾದ ಬಿಜೆಪಿ ನಾಮಪತ್ರ ಸಲ್ಲಿಕೆಯ ಕೊನೆಯ ದಿನವಾದ ಸೋಮವಾರ ಭರ್ಜರಿಯಾಗಿ ನಾಮಪತ್ರ ಸಲ್ಲಿಕೆ ಮಾಡುವ ಮೂಲಕ ಬಾಗಲಕೋಟೆ ಉಪಸಮರ ಕಣಕ್ಕೆ ರಂಗೇರಿಸಿವೆ.

ಉಪ ಸಮರ

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ. ಶಿವ ಕುಮಾರ್ ಮತ್ತಿತರ ನಾಯಕರ ನೇತೃತ್ವದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ನಾಮಪತ್ರ ಸಲ್ಲಿಸಿದರೆ, ಇತ್ತ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಜಗದೀಶ ಶೆಟ್ಟರ, ಸಂಸದ ಗೋವಿಂದ ಕಾರ ಜೋಳ, ಮಾಜಿ ಸಚಿವ ಬಿ. ಶ್ರೀರಾಮುಲು ಮತ್ತಿತರ ನಾಯಕರ ನೇತೃತ್ವದಲ್ಲಿ ಭಾರೀ ಮೆರವಣಿಗೆ ನಡೆಸಿ ಬಿಜೆಪಿಯ ವೀರಣ್ಣ ಚರಂತಿಮಠ ತಮ್ಮ ನಾಮಪತ್ರ ಸಲ್ಲಿಸಿದರು.

> ಬಿಜೆಪಿಯವರು ಕೇವಲ ಹಿಂದುತ್ವ ವಾದವನ್ನು ಮುಂದಿಡುತ್ತಾರೆಯೇ ಹೊರತು, ಕೃಷ್ಣಾ ಮೇಲ್ದಂಡೆ ಹಂತ-3 ಯೋಜನೆಗೆ ಅವರ ಅಧಿಕಾರಾವಧಿಯಲ್ಲಿ ಯಾವುದೇ ಅಭಿವೃದ್ಧಿ ಮಾಡಲಿಲ್ಲ. ನಮ್ಮ ಸರ್ಕಾರ ಈ ಯೋಜನೆಯಿಂದ ಮುಳುಗಡೆಯಾಗುವ ಜಮೀನಿಗೆ ಸೂಕ್ತ ಪರಿಹಾರ ನೀಡುವ ನಿರ್ಣಯ ಕೈಗೊಂಡಿದೆ.
> ■ ಸಿದ್ದರಾಮಯ್ಯ, ಸಿಎಂ

ಬಿಜೆಪಿ ಚರಂತಿಮಠ, ಕಾಂಗ್ರೆಸ್‌ನಿಂದ ಉಮೇಶ್ ಅಖಾಡಕ್ಕೆ

• **ಬಾಗಲಕೋಟೆ:** ಬಿಜೆಪಿಯಿಂದ ವೀರಣ್ಣ ಚರಂತಿಮಠ ಅವರು ಮುಚಖಂಡಿ ವೀರಭದ್ರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಸಿದ ಬಳಿಕ ಹಳೆ ಬಾಗಲಕೋಟೆಯ ಕಾಶಿ ವೀರಭದ್ರೇಶ್ವರ ದೇವಸ್ಥಾನದ ಆವರಣದಿಂದ ಬಸವೇಶ್ವರ ವೃತ್ತದ ತನಕ ಭರ್ಜರಿ ಮೆರವಣಿಗೆ ನಡೆಸಿದರು. ➡ಪುಟ 9

ದಾವಣಗೆರೆಯಲ್ಲಿ ಬೃಹತ್ ಮೆರವಣಿಗೆ

• **ದಾವಣಗೆರೆ:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ನಾಮಪತ್ರ ಸಲ್ಲಿಕೆಯ ಅಂತಿಮ ದಿನವಾಗಿದ್ದ ಸೋಮವಾರ ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳು ತಮ್ಮ ನಾಯಕರೊಂದಿಗೆ ಬೃಹತ್ ಮೆರವಣಿಗೆ ನಡೆಸಿ ಶಕ್ತಿ ಪ್ರದರ್ಶಿಸುವ ಮೂಲಕ ನಾಮಪತ್ರ ಸಲ್ಲಿಸಿದರು. ➡ಪುಟ 9

ಇರಾನ್ ವಿದ್ಯುತ್ ಸ್ಥಾವರ ಮೇಲಿನ ದಾಳಿ ಮುಂದಕ್ಕೆ: ಟ್ರಂಪ್

ಕೊಲ್ಲಿ ಸಂಘರ್ಷಕ್ಕೆ ಕೊಂಚ ವಿರಾಮ

• **ದುಬೈ:** ಹಾರ್ಮುಜ್ ಜಲಸಂಧಿಗೆ ಸಂಬಂಧಿಸಿದ ಗಡುವನ್ನು ವಿಸ್ತರಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ನ ವಿದ್ಯುತ್ ಸ್ಥಾವರಗಳ ಮೇಲೆ



ನಡೆಸಲು ಉದ್ದೇಶಿಸಿದ್ದ ಮಿಲಿಟರಿ ದಾಳಿಯನ್ನು 5 ದಿನ ಮುಂದೂಡಿರುವುದಾಗಿ ಸೋಮವಾರ ಘೋಷಿಸಿದ್ದಾರೆ. ತಾವೇ ವಿಧಿಸಿಕೊಂಡಿದ್ದ ಗಡುವು ಮುಗಿಯುವ ಕೆಲವೇ ಗಂಟೆಗಳ ಮೊದಲು ಟ್ರಂಪ್ ಸಾಮಾಜಿಕ ಜಾಲತಾಣದ ಮೂಲಕ ಈ ಘೋಷಣೆ ಮಾಡಿದ್ದಾರೆ. ನಾಲ್ಕು ವಾರಗಳ ಈ ಸಂಘರ್ಷಕ್ಕೆ ಸಂಪೂರ್ಣ ಪರಿಹಾರದ ನಿಟ್ಟಿನಲ್ಲಿ ನಡೆಯುತ್ತಿರುವ ಚರ್ಚೆಗಳ ಯಶಸ್ಸಿನಿಂದ ನಿರ್ಧಾರ ತೆಗೆದುಕೊಳ್ಳಲಾಗಿದೆ ಎನ್ನಲಾಗಿದೆ.

ಇರಾನ್ ಎಚ್ಚರಿಕೆಗೆ ಮಣಿಯಿತೇ?: ಇರಾನ್‌ನ ಸರ್ಕಾರಿ ದೂರದರ್ಶನ ಈ ಕ್ರಮವನ್ನು ಟೆಹ್ರಾನ್‌ನ ಎಚ್ಚರಿಕೆಗೆ ಅಮೆರಿಕ ಮಣಿದಿದೆ ಎಂದು ಬಣ್ಣಿಸಿದೆ. ಇರಾನ್‌ನ ರೆವಲ್ಯೂಷನರಿ ಗಾರ್ಡ್‌ಗೆ ಸಂಬಂಧಿಸಿದ ಸುದ್ದಿ ಸಂಸ್ಥೆಗಳು, ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವೆ ಯಾವುದೇ ಮಾತುಕತೆ ನಡೆದಿಲ್ಲ ಎಂದು ಪ್ರತಿಪಾದಿಸಿವೆ. ➡ಪುಟ 9

ಇಂಧನ ಮಾರುಕಟ್ಟೆ ತಲ್ಲಣ

• **ಟೆಹ್ರಾನ್:** ಪಶ್ಚಿಮ ಏಷ್ಯಾದಲ್ಲಿ ಯುದ್ಧದ ತೀವ್ರತೆ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಇರಾನ್ ಸರ್ಕಾರ ಹಾರ್ಮುಜ್ ಜಲಸಂಧಿಯ ಮೂಲಕ ಸಂಚರಿಸುವ



ಆಯ್ದ ಹಡಗುಗಳಿಗೆ ಪ್ರತಿ ಪ್ರಯಾಣಕ್ಕೆ 2 ಮಿಲಿಯನ್ ಡಾಲರ್ (ಅಂದಾಜು 18.8 ಕೋಟಿ.ರೂ.) ಭಾರೀ ಸುಂಕ ವಿಧಿಸಲು ನಿರ್ಧರಿಸಿದೆ. ಈ ಕ್ರಮ, ಜಾಗತಿಕ ಹಡಗು ಸಾಗಣೆ ಮತ್ತು ಇಂಧನ ಮಾರುಕಟ್ಟೆಯಲ್ಲಿ ತಲ್ಲಣ ಸೃಷ್ಟಿಸಿದೆ. • ವಿವರ ಪುಟ ೫

ಗೇಲ್‌ನಲ್ಲಿ ನೋಂದಾಯಿಸಿಕೊಳ್ಳಲು 1 ವಾರ ಕಾಲಾವಕಾಶ

ವಾಣಿಜ್ಯ ಅನಿಲ ನೋಂದಣಿ ಕಡ್ಡಾಯ

• **ವಿಧಾನ ಪರಿಷತ್ತು:** ವಾಣಿಜ್ಯ ಎಲ್‌ಪಿಜಿ ಬಳಕೆದಾರರು ವಿಶೇಷವಾಗಿ ಹೋಟೆಲ್‌ಗಳು ಒಂದು ವಾರದೊಳಗೆ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿ(ಜಿಎಐಎಲ್) ಕಡ್ಡಾಯವಾಗಿ



ನೋಂದಾಯಿಸಿಕೊಳ್ಳಬೇಕು ಎಂದು ಆಹಾರ ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಮೇಲ್ಮನೆಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಪ್ರಮುಖವಾಗಿ ವಾಣಿಜ್ಯ ಉದ್ದೇಶ ಸಿಲಿಂಡರ್ ಪಡೆಯುವ ಸಂಸ್ಥೆಗಳು ಕಡ್ಡಾಯವಾಗಿ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ ನಲ್ಲಿ ನೋಂದಣಿ ಮಾಡಬೇಕಾಗಿರುವುದು ಅಗತ್ಯವಾಗಿದ್ದು, ಕೇಂದ್ರ ಸರ್ಕಾರ ಇದನ್ನು ಕಡ್ಡಾಯಗೊಳಿಸಿದೆ. ವಾರದಲ್ಲಿ ಈ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಿದರೆ, ಮುಂಬರುವ ದಿನಗಳಲ್ಲಿ ವಾಣಿಜ್ಯಿಕ ಸಿಲಿಂಡರ್ ಪೂರೈಕೆಗೆ ಅನುಕೂಲವಾಗಲಿದೆ ಎಂದರು. ➡ಪುಟ 9

ಮಧ್ಯಪ್ರವೇಶಕ್ಕೆ ಹೈ ನಿರಾಕರಣೆ

• **ಬೆಂಗಳೂರು:** ಅಡುಗೆ ಅನಿಲ ಪೂರೈಕೆಯಲ್ಲಿನ ವ್ಯತ್ಯಯ ಸರಿಪಡಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ



ಕೋರಿ ಬೆಂಗಳೂರು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಲು ಹೈಕೋರ್ಟ್ ಸೋಮವಾರ ನಿರಾಕರಿಸಿತು. ಹಾಲಿ ವಿಚಾರವನ್ನು ಸರ್ಕಾರಕ್ಕೆ ಬಿಡುವುದು ಒಳಿತು ಎಂಬ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರ ವಾದವನ್ನು ನ್ಯಾ.ಸುನಿಲ್ ಶಂಕರ್ ಮಗದುಮ್ ಅವರ ಪೀಠವನ್ನು ಪೀಠ ಪುರಸ್ಕರಿಸಿತು. ➡ಪುಟ 9

ವಿಧಾನಸೌಧಕ್ಕೆ ಬೀಟೆ ಬಾಗಿಲು

• **ಬೆಂಗಳೂರು:** ರಾಜ್ಯದ ಆಡಳಿತ ಮತ್ತು ಪ್ರಜಾಪ್ರಭುತ್ವದ ಶಕ್ತಿಸೌಧ ಈಗ ಮತ್ತಷ್ಟು



ಆಕರ್ಷಕವಾಗಿದೆ. ವಿಧಾನಸೌಧದ ಪಶ್ಚಿಮ ದ್ವಾರಕ್ಕೆ ಬೀಟೆ ಮರದ ಬಾಗಿಲನ್ನು ಅಳವಡಿಸಲಾಗಿದೆ. ಇದನ್ನು ಮಂಗಳವಾರ ಬೆಳಗ್ಗೆ 10 ಗಂಟೆಗೆ ಉದ್ಘಾಟಿಸಲಾಗುತ್ತಿದೆ.

ವಿಧಾನಸಭೆ ಸಭಾಂಗಣದ ಪಶ್ಚಿಮ ದ್ವಾರಕ್ಕೆ ಆಕರ್ಷಕವಾದ ಕೆತ್ತನೆಯುಳ್ಳ ನೂತನ ಬಾಗಿಲು ನಿರ್ಮಿಸಿದಂತೆ ಲೋಕೋಪಯೋಗಿ ಇಲಾಖೆಯ ಮೂಲಕ ವಿಧಾನಸೌಧದ ಸೌಂದರ್ಯಕ್ಕೆ ತಕ್ಕಂತೆ ನೆಲಮಹಡಿಯ ಪಶ್ಚಿಮ ದ್ವಾರದ ಕಬ್ಬಿಣದ ಗ್ರಿಲ್ ಬದಲಾಯಿಸಲಾಗಿದೆ. ಕುಸುರಿ ಕೆತ್ತನೆಯುಳ್ಳ ಬೀಟೆ ಮರದ ಬಾಗಿಲನ್ನು ಅಳವಡಿಸಲಾಗಿದೆ. ಬಾಗಿಲು ನಿರ್ಮಾಣಕ್ಕೆ ಜಿಎಸ್‌ಟಿ ಸೇರಿ ಒಟ್ಟು 84 ಲಕ್ಷ ರೂ. ವೆಚ್ಚವಾಗಿದೆ. ➡ಪುಟ 9



ಜೀವಂತ ವ್ಯಕ್ತಿಯನ್ನೇ ಸತ್ತಿದ್ದಾನೆಂದು ಘೋಷಣೆ | ಹೈ ಕಿಡಿ

ಬದುಕಿರುವವನಿಗೆ ಮರಣ ಪತ್ರ!

ಬೆಂಗಳೂರಿನ ಪ್ರಕರಣಕ್ಕೆ ನ್ಯಾಯಾಲಯ ತೀವ್ರ ಅಸಮಾಧಾನ

• **ಬೆಂಗಳೂರು:** ಒಬ್ಬ ಮನುಷ್ಯ ತಾನು ಜೀವಂತವಾಗಿದ್ದೇನೆ ಎಂದು ಸಾಬೀತುಪಡಿಸಲು ನ್ಯಾಯಾಲಯದ ಮೆಟ್ಟಿಲೇರಬೇಕಾದ ಪರಿಸ್ಥಿತಿ ಬಂದಿರುವುದು ವ್ಯವಸ್ಥೆಯ ಅತಿ ದೊಡ್ಡ ದುರಂತ. ಬದುಕಿರುವ ವ್ಯಕ್ತಿಯ ಹೆಸರಿನಲ್ಲಿ ಮರಣ ಪ್ರಮಾಣ ಪತ್ರ ನೀಡಿ, ಆತನಿಗೆ ಪಡಿತರವೂ ಸಿಗದೆ ಪರದಾಡುವಂತೆ ಮಾಡಿದ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಅರ್ಜಿದಾರರು ಜೀವಂತವಾಗಿದ್ದು, ಅವರ ಹೆಸರಿನಲ್ಲಿ ನೀಡಿರುವ ಮರಣ ಪ್ರಮಾಣ ಪತ್ರ ರದ್ದುಪಡಿಸುತ್ತಿಲ್ಲ ಎಂದರೆ ಹೇಗೆ? ಎಂದು ಕಿಡಿಕಾರಿರುವ ಹೈಕೋರ್ಟ್, ಬುಧವಾರದೊಳಗೆ ಮರಣ ಪ್ರಮಾಣ ಪತ್ರ ರದ್ದುಪಡಿಸಿರುವ ಹಿಂಬರಹ ಸಲ್ಲಿಸಬೇಕು ಎಂದು ಜಿಬಿಎಯ ಜನನ ಮತ್ತು ಮರಣ ನೋಂದಣಾಧಿಕಾರಿಗೆ ತಾಕೀತು ಮಾಡಿದೆ. ಬೆಂಗಳೂರಿನ ಚಿಕ್ಕಪೇಟೆಯ ವಲಯ ಕಚೇರಿಯ ಜನನ ಮತ್ತು ಮರಣ ನೋಂದಣಾಧಿಕಾರಿಯು 2025ರ ಏ.23ರಂದು ನೀಡಿರುವ ತಾತ್ಕಾಲಿಕ ಮರಣ ಪ್ರಮಾಣ ಪತ್ರವನ್ನು ರದ್ದುಪಡಿಸಲು ನಿರ್ದೇಶಿಸಬೇಕು ಎಂದು ಕೋರಿ ಡಿ.ಮೆಹಬೂಬ್ ಬಾಷಾ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾ.ಸುನಿಲ್ ಶಂಕರ್ ಮಗದುಮ್ ಅವರ ಏಕಸದಸ್ಯ ಪೀಠ ನಡೆಸಿತು. ➡ಪುಟ 9



ವಿವರಣೆ ಸಲ್ಲಿಸಲು ಗಡುವು

ಬುಧವಾರದೊಳಗೆ ಮರಣ ಪ್ರಮಾಣ ಪತ್ರ ನೀಡಿರುವುದನ್ನು ಹಿಂಪಡೆದು ನ್ಯಾಯಾಲಯಕ್ಕೆ ತಿಳಿಸಬೇಕು. ಜನನ ಮತ್ತು ಮರಣ ನೋಂದಣಾಧಿಕಾರಿಯು ಈ ಸಂಬಂಧ ವಿವರಣೆ ಸಲ್ಲಿಸಬೇಕು ಎಂದು ಆದೇಶಿಸಿದೆ. ಅಲ್ಲದೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಜಿಬಿಎ ಜನನ ಮತ್ತು ಮರಣ ನೋಂದಣಾಧಿಕಾರಿ, ಕಿದ್ವಾಯಿ ಸ್ಮಾರಕ ಆಸ್ಪತ್ರೆಯ ಆಡಳಿತಾಧಿಕಾರಿ, ಚಿಕ್ಕಪೇಟೆಯ ವೈದ್ಯಾಧಿಕಾರಿ, ಜಿಬಿಎಯ ಸಾಂಖ್ಯಿಕ ವಿಭಾಗದ ಜಂಟಿ ನಿರ್ದೇಶಕರಿಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಎಐಎಡಿಎಂಕೆ 178ರಲ್ಲಿ, ಬಿಜೆಪಿ 23ರಲ್ಲಿ ಸ್ಪರ್ಧೆ



• **ಚೆನ್ನೈ:** ತಮಿಳುನಾಡಿನ ಮುಂಬರುವ ವಿಧಾನಸಭಾ ಚುನಾವಣೆಗೆ ಸೀಟು ಹಂಚಿಕೆಯನ್ನು ಎನ್‌ಡಿಎ ಅಂತಿಮಗೊಳಿಸಿದೆ. ಇದರಂತೆ ವಿಧಾನಸಭೆ 234 ಕ್ಷೇತ್ರಗಳ ಪೈಕಿ 178 ಸ್ಥಾನಗಳಿಗೆ ಎಡಿಎಂಕೆ ಸ್ಪರ್ಧಿಸಲಿದೆ. ಬಿಜೆಪಿ 27 ಸ್ಥಾನಗಳಲ್ಲಿ ಸ್ಪರ್ಧಾ ಕಣಕ್ಕಿಳಿಯಲಿದೆ. ಇತರ ಮಿತ್ರಪಕ್ಷಗಳಲ್ಲಿ ಪಿಎಂಕೆ 18 ಸ್ಥಾನಗಳಿಗೂ, ಎಎಂಎಂಕೆ 11 ಸ್ಥಾನಗಳಿಗೂ ಸ್ಪರ್ಧಿಸಲಿದೆ. • ವಿವರ ಪುಟ ೫

ವಾಣಿಜ್ಯ ಅನಿಲ ನೋಂದಣಿ ಕಡ್ಡಾಯ

ಪುಟ ೧ರ ➜ ರಾಜ್ಯದಲ್ಲಿ ಹೋಟೆಲ್ ಮೊದಲಾದ ವಾಣಿಜ್ಯ ಬಳಕೆಯ ಉದ್ದೇಶಕ್ಕಾಗಿ ಶೇ.20ರಷ್ಟು ಸಿಲಿಂಡರ್ ಪೂರೈಕೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ್ದು, ರಾಜ್ಯಕ್ಕೆ ಪ್ರತಿದಿನ 16 ಸಾವಿರ ಸಿಲಿಂಡರ್‌ಗಳು ಪೂರೈಕೆಯಾಗುತ್ತಿವೆ. ಈ ಪೈಕಿ 10 ಸಾವಿರ ಸಿಲಿಂಡರ್‌ಗಳನ್ನು ಹೋಟೆಲ್, ರೆಸ್ಟೋರೆಂಟ್‌ಗಳು ಸೇರಿದಂತೆ ಮುಂತಾದ ಆಹಾರ ಸಂಬಂಧ ಉದ್ಯಮದಲ್ಲಿ ತೊಡಗಿರುವ ಸಂಸ್ಥೆಗಳಿಗೆ ಆದ್ಯತೆ ಮೇರೆಗೆ ಪೂರೈಕೆ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ಸಿಎಂ ಪತ್ರಕ್ಕೆ ಕೇಂದ್ರ ಸ್ಪಂದನೆ: ವಾಣಿಜ್ಯ ಉದ್ದೇಶದ ಸಿಲಿಂಡರ್ ಪೂರೈಕೆ ಪ್ರಮಾಣ ಹೆಚ್ಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬರೆದಿರುವ ಪತ್ರಕ್ಕೆ ಕೇಂದ್ರ ಸರ್ಕಾರ ಸ್ಪಂದಿಸಿರುವುದು ಸಂತೋಷ. ಈ ಸಂಬಂಧ ಸೋಮವಾರ ಬೆಳಗ್ಗೆ ತೈಲ ಕಂಪನಿಗಳ ಅಧಿಕಾರಿಗಳ ಜತೆಗೆ ಸಭೆ ನಡೆಸಲಾಯಿತು. ರಾಜ್ಯಕ್ಕೆ 45 ಸಾವಿರ ವಾಣಿಜ್ಯ ಸಿಲಿಂಡರ್‌ಗಳ ಅಗತ್ಯವಿದೆ. ಮೊದಲು ರಾಜ್ಯಕ್ಕೆ ಸುಮಾರು 9 ಸಾವಿರ ಸಿಲಿಂಡರ್‌ಗಳು ಪೂರೈಕೆಯಾಗುತ್ತಿದ್ದವು. ಇದೀಗ ಅದರ ಪ್ರಮಾಣ 16 ಸಾವಿರಕ್ಕೆ ಏರಿಕೆಯಾಗಿದೆ ಎಂದು ಮಾಹಿತಿ ನೀಡಿದರು.

ಸಿಲಿಂಡರ್ ಪೂರೈಕೆ ಮೂಲಕ ಹಾಸ್ಟೆಲ್‌ಗಳಿಗೆ ಪ್ರತಿ ದಿನದ ಲೆಕ್ಕದಂತೆ 4,200, ಕ್ಯಾಂಟೀನ್‌ಗಳಿಗೆ ಹಾಗೂ ಇತರೆ ಸಂಸ್ಥೆಗಳಿಗೆ 1,200 ಹಾಗೂ ಹೋಟೆಲ್, ಢಾಬಾ, ಸೇರಿದಂತೆ ಇತರೆ ಆಹಾರ ಸಂಸ್ಕರಣಾ ಉದ್ದಿಮೆಯಲ್ಲಿ ತೊಡಗಿರುವವರಿಗೆ ಸುಮಾರು 10 ಸಾವಿರ ಸಿಲಿಂಡರ್‌ಗಳನ್ನು ಪ್ರತಿದಿನ ಪೂರೈಸಲಾಗುತ್ತದೆ. ತುರ್ತು ಅಗತ್ಯತೆಗಳಿಗೆ ಸುಮಾರು 205 ಸಿಲಿಂಡರ್‌ಗಳನ್ನು ಕಾಯ್ದಿರಿಸಲಾಗಿದ್ದು, ಆದ್ಯತೆ ಮೇರೆಗೆ ಅವುಗಳನ್ನು ವಿತರಿಸಲಾಗುವುದು ಎಂದರು.

ಇದೇ ವೇಳೆ ಮೇಲ್ಮನೆ ಸದಸ್ಯ ಐವನ್ ಡಿಸೋಜಾ ಅವರು, ಕೇಂದ್ರ ಸರ್ಕಾರ ಶೇ.20 ರಷ್ಟು ಮಾತ್ರ ವಾಣಿಜ್ಯ ಸಿಲಿಂಡರ್ ಪೂರೈಕೆ ಹೆಚ್ಚಿಸಿದೆ. ಆದರೆ, ಇನ್ನೂ ಶೇ.80 ರಷ್ಟು ಹೋಟೆಲ್‌ಗಳು ಮುಚ್ಚಿದ್ದೇಕೆ? ಸಿಲಿಂಡರ್ ಇಲ್ಲದಿದ್ದಲ್ಲಿ ಸೌದೆ-ಕಟ್ಟಿಗೆಯಾದರೂ ಹೋಟೆಲ್‌ನವರಿಗೆ ಪೂರೈಸಿದರೆ ಅವರು ಹೋಟೆಲ್ ನಡೆಸುತ್ತಾರೆ ಎಂದು ಹೇಳಿದರು. ಆಗ ಪರಿಸರ ಸಚಿವ ಈಶ್ವರ ಖಂಡ್ರೆ, ಗಿಡ-ಮರಗಳನ್ನು ಕಡಿಯುವ ಹಾಗಿಲ್ಲ, ಈಗಾಗಲೇ ಸ್ಪಷ್ಟವಾದ ಆದೇಶವನ್ನು ಹೊರಡಿಸಲಾಗಿದೆ ಎಂದು ಹೇಳಿದರು.

ಮಧ್ಯಪ್ರವೇಶಕ್ಕೆ ಹೈ ನಿರಾಕರಣೆ

ಪುಟ ೧ರ ➜ ಬೇರೆ ದೇಶಗಳಿಗೆ ಹೋಲಿಕೆ ಮಾಡಿದರೆ ನಮ್ಮ ಸರ್ಕಾರವು ಶಕ್ತಿಮೀರಿ ಕೆಲಸ ಮಾಡುತ್ತಿದೆ. ಇದನ್ನು ನ್ಯಾಯಾಂಗ ಪರಿಶೀಲನೆಗೆ ಒಳಪಡಿಸಲಾಗದು. ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ ನ್ಯಾಯಾಲಯಗಳು ಈ ವಿಚಾರದಲ್ಲಿ ಭಾಗಿಯಾಗಬಾರದು. ಹೀಗಾಗಿ ಈ ಅರ್ಜಿ ಇತ್ಯರ್ಥಪಡಿಸಲಾಗಿದೆ ಎಂದು ಪೀಠ ಹೇಳಿತು. ಇದಕ್ಕೂ ಮುನ್ನ, ತುಷಾರ್ ಮೆಹ್ತಾ ಅವರು ಪರಿಸ್ಥಿತಿ ಬದಲಾಗುತ್ತಿದ್ದು, ಭಾರತದಲ್ಲಿ ಎಲ್‌ಪಿಜಿ ಪೂರೈಕೆ ವ್ಯತ್ಯಯ ಕಡಿಮೆ ಮಾಡಲು ಎಲ್ಲಾ ಪ್ರಯತ್ನ ಮಾಡಲಾಗುತ್ತಿದೆ. ನಮ್ಮ ನಿಯಂತ್ರಣದಲ್ಲಿಲ್ಲದ ಕೆಲವು ಬೆಳವಣಿಗೆಗಳಿಂದ ಈ ಪರಿಸ್ಥಿತಿ ನಿರ್ಮಾಣವಾಗಿದ್ದು, ಎಲ್‌ಪಿಜಿ ಪೂರೈಕೆಯಲ್ಲಿ ಕೊರತೆಯಾಗುವುದನ್ನು ತಪ್ಪಿಸಲು ಭಾರತ ಸರ್ಕಾರ ಕೆಲಸ ಮಾಡುತ್ತಿದೆ. ಈ ವಿಚಾರವನ್ನು ಕಾರ್ಯಾಂಗಕ್ಕೆ ಬಿಡಬೇಕು. ಪ್ರತಿದಿನ ಪರಿಸ್ಥಿತಿ ಬದಲಾಗುತ್ತಿದ್ದು, ಆದ್ಯತೆ ಬದಲಾಗಬೇಕಿದೆ. ಹೋಟೆಲ್‌ಗಳಿಗೆ ಎಲ್‌ಪಿಜಿ ಪೂರೈಸಬೇಕೋ ಅಥವಾ ಮನೆಗಳಿಗೋ ಎಂಬುದು ನಮಗೆ ತಿಳಿಯದಾಗಿದೆ. ಹಲವು ವಿಚಾರಗಳು ನಮ್ಮ ನಿಯಂತ್ರಣದಲ್ಲಿಲ್ಲ ಎಂದರು. ಆಗ ಪೀಠವು ಹೋಟೆಲ್‌ಗಳಿಗೆ ಶುಭ ಸುದ್ದಿ ಇದೆಯೇ? ಹೆಚ್ಚುವರಿ ಸೂಚನೆ ಏನಾದರೂ ಇದೆಯೇ ಎಂದು ಕೇಳಿತು. ಇದಕ್ಕೆ ಮೆಹ್ತಾ ಅವರು ಸದ್ಯಕ್ಕೆ ಇಲ್ಲ ಎಂದರು. ಒಂದು ಹಂತದಲ್ಲಿ ಪೀಠವು ರಾಜ್ಯಾದ್ಯಂತ ಎಲ್‌ಪಿಜಿ ಸಿಲಿಂಡರ್ ಹಂಚಿಕೆಯ ಕುರಿತು ಕಳವಳ ವ್ಯಕ್ತವಾಗಿರುವುದರ ಕುರಿತು ಪ್ರಸ್ತಾಪಿಸಿತು. ಇದಕ್ಕೆ ಮೆಹ್ತಾ ಅವರು ಇಂಥ ವಿಚಾರಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಜತೆ ಸಮಾಲೋಚನೆ ನಡೆಸುತ್ತದೆ. ಎರಡೂ ಕಡೆಯ ಸರ್ಕಾರಗಳು ಒಂದೇ ನಿಲುವು ತಳೆಯಬೇಕಾಗುತ್ತದೆ. ಹಂಚಿಕೆದಾರರಿಂದ ಎಲ್‌ಪಿಜಿ ಪೂರೈಕೆಯಲ್ಲಿ ವಂಚನೆ ಕಂಡುಬಂದರೆ ರಾಜ್ಯ ಸರ್ಕಾರವು ಕಠಿಣ ಕ್ರಮಕ್ಕೆಗೊಳ್ಳಬೇಕು ಎಂದರು.

ಮತಪತ್ರ ಬಳಕೆಗೆ ಬಿಜೆಪಿ-ಕೈ ಜಟಾಪಟಿ

• **ಬೆಂಗಳೂರು:** ಇವಿಎಂ ಬೇಡ, ಮತಪತ್ರ ಬೇಕು ಎಂಬ ವಿಚಾರದಲ್ಲಿ ವಿಧಾನಸಭೆಯಲ್ಲಿ ಆಡಳಿತ ಹಾಗೂ ವಿಪಕ್ಷದ ನಡುವೆ ತೀವ್ರ ಜಟಾಪಟಿ ನಡೆಯಿತು. ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ ಪರ್ಯಾಲೋಚನೆಗೆ ಬಿಜೆಪಿ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿ, ಸಭಾತ್ಯಾಗ ನಡೆಸಿದರು.

ವಿಧೇಯಕ ಪರ್ಯಾಲೋಚನೆಗೆ ಕೋರಿ ಮಾತನಾಡಿದ ಪ್ರಿಯಾಂಕ್ ಖರ್ಗೆ, ಎವಿಎಂ ಮೇಲೆ ವಿಶ್ವಾಸ ಕಡಿಮೆಯಾಗುತ್ತಿದೆ. ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಆಯೋಗದ ವರದಿ 58.22% ನಷ್ಟಿತ್ತು. ಆದರೆ, ರಾತ್ರಿ 11.30ಗೆ 68.02% ಆಗಿದೆ. ಅಂದರೆ ಐದು ಗಂಟೆಯಲ್ಲಿ 50 ಲಕ್ಷ ಮತ ಸೇರ್ಪಡೆಯಾಗುತ್ತದೆ. ಹರಿಯಾಣ ಮತ್ತು ಮಧ್ಯಪ್ರದೇಶದಲ್ಲಿ ಅದೇ ರೀತಿ ಆಗಿದೆ. ಹಲವಾರು ಸಂಸ್ಥೆಗಳು ಈ ಬಗ್ಗೆ ಪ್ರಶ್ನೆ ಮಾಡಿವೆ. ಆದರೆ ಚುನಾವಣಾ ಆಯೋಗ ಈ ಬಗ್ಗೆ ಸಮರ್ಪಕ ಉತ್ತರ ಕೊಟ್ಟಿಲ್ಲ ಎಂದರು. ಈ ಮಸೂದೆಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮತಪತ್ರದ ಮೂಲಕ ಮಾಡಲು ಈ ತಿದ್ದುಪಡಿ ತರುತ್ತಿದ್ದೇವೆ. ಮತಯಂತ್ರದ ಬದಲು ಮತಪತ್ರ ಬಳಕೆ ಮಾಡಲು ಈ ಮಸೂದೆ ತರಲಾಗುತ್ತಿದೆ. ಮಸೂದೆಯಲ್ಲಿ 6 ಬದಲಾವಣೆಗಳನ್ನು ತರಲಾಗುತ್ತಿದೆ ಎಂದು ವಿವರಿಸಿದರು.

ಶಾಸಕ ಸುನಿಲ್ ಕುಮಾರ್ ಮಾತನಾಡಿ, ಈ ಮಸೂದೆಯಲ್ಲಿ ಜನಸಾಮಾನ್ಯರಿಗೆ ಯಾವುದೇ ಲಾಭ ಇಲ್ಲ, ಇದರಿಂದ ಕಾಂಗ್ರೆಸ್‌ಗೆ ಮಾತ್ರ ಲಾಭ. ಬ್ರಾಂಡ್ ಬೆಂಗಳೂರು ಘೋಷಣೆ ಮಾಡುವ ನೀವು ಸ್ಥಳೀಯ ಸಂಸ್ಥೆಗಳಲ್ಲಿ ಇವಿಎಂ ಬಿಟ್ಟು ಮತಪತ್ರ ಬಳಕೆ ಮಾಡಲು ಮುಂದಾಗಿದ್ದೀರಿ. ಬೂತ್ ಕೇಂದ್ರಗಳಿಗೆ ಹೋಗಲು ಆಗುತ್ತಿರಲಿಲ್ಲ, ಅದನ್ನು ದೂರ ಮಾಡಲು ಇವಿಎಂ ತರಲಾಗಿತ್ತು. ಇದರ ಹಿಂದೆ ದೊಡ್ಡ ಹುನ್ನಾರ ಅಡಗಿದೆ. ಸರ್ಕಾರ ಆಡಳಿತ ವ್ಯವಸ್ಥೆಯನ್ನು ದುರುಪಯೋಗ ಮಾಡಲು ಮುಂದಾದಂತೆ ಕಂಡು ಬರುತ್ತಿದೆ ಎಂದರು.

ತುಘಲಕ್ ದರ್ಬಾರ್: ಅಶೋಕ



ವಿರೋಧ ವ್ಯಕ್ತಪಡಿಸಿದ ವಿಪಕ್ಷ ನಾಯಕ ಆರ್.ಅಶೋಕ, ಇದು ತುಘಲಕ್ ದರ್ಬಾರ್ ಆಗಿದೆ. ಇವಿಎಂ ತಂದವರು ಕಾಂಗ್ರೆಸ್‌ನವರೇ. ಅವರೇ ತಂದ ಇವಿಎಂನ್ನು ತೆಗೆದು ಹಾಕುತ್ತಿದ್ದಾರೆ. ಸುಪ್ರೀಂಕೋರ್ಟ್ ಈ ಇವಿಎಂನಲ್ಲೇ ಮತದಾನ ನಡೆಯಬೇಕು ಅಂದಿದೆ. ಕರ್ನಾಟಕದಲ್ಲಿ ಮತದಾನ ನಡೆಯುವಾಗ ಇವಿಎಂ ಸರಿ ಇತ್ತು. ತೆಲಂಗಾಣದಲ್ಲಿ ಇವಿಎಂ ಸರಿ ಇತ್ತು. ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೆ ಹಳ್ಳಿ ಹಿಡಿಯಿತು. ಆಗ ಚರ್ಚೆ ಆರಂಭವಾಯಿತು ಎಂದು ತಿರುಗೇಟು ನೀಡಿದರು.

ದಿನ ಭವಿಷ್ಯ

ಮೇಷ: ಕಾರ್ಯಸಿದ್ಧಿ, ಯಶಸ್ಸು ಸುಲಭದಲ್ಲಿ ಸಿಗಲಿದೆ. ವ್ಯವಹಾರದಲ್ಲಿ ಪ್ರಗತಿ. ವೃತ್ತಿ ಸಂಬಂಧ ವಾಗ್ವಾದಕ್ಕೆ ಇಳಿಯದಿರಿ. ಸಹನೆಯಿಂದ ವರ್ತಿಸಿ.

ವೃಷಭ: ನಾಯಕನ ರೀತಿ ಕಾರ್ಯಾಚರಿಸಿ. ಪ್ರತಿ ವಿಷಯದಲ್ಲಿ ಮುಂದಾಳತ್ವ ವಹಿಸಿ. ಅನುಕರಣೆ ಬೇಡ. ಕೌಟುಂಬಿಕ ಅಶಾಂತಿ ನಿವಾರಣೆ, ನಿರಾಳತೆ.

ಮಿಥುನ: ವೃತ್ತಿ ಮತ್ತು ಖಾಸಗಿ ವ್ಯವಹಾರದಲ್ಲಿ ಉನ್ನತಿ. ಪ್ರೀತಿಯ ವಿಷಯದಲ್ಲಿ ನಿರಾಳತೆ ತರುವ ಬೆಳವಣಿಗೆ. ಖರ್ಚು ನಿಯಂತ್ರಣ, ಸಮಾಧಾನ.

ಕಟಕ: ಇತರರಿಗೆ ನೆರವು ನೀಡುವಲ್ಲಿ ಖುಷಿ ಕಾಣುವಿರಿ. ಕೌಟುಂಬಿಕ ಉದ್ದೇಶವೊಂದು ಈಡೇರಲಿದೆ. ಆಪ್ತರ ಸಂಗದಲ್ಲಿ ಸಂತೋಷ.

ಸಿಂಹ: ನೀವು ತಳೆವ ನಿರ್ಧಾರ ನಿರೀಕ್ಷಿತ ಫಲ ನೀಡಲಾರದು. ಹಾಗಾಗಿ ಅತಿಯಾದ ನಿರೀಕ್ಷೆ ಬೇಡ. ಅನವಶ್ಯ ಖರ್ಚು ಚಿಂತೆಗೆ ಕಾರಣವಾದೀತು.

ಕನ್ಯಾ: ಕೆಲದಿನಗಳ ಅಶಾಂತಿ ನಿವಾರಣೆಯಾಗುವ ಕಾಲ ಬಂದಿದೆ. ನೆಮ್ಮದಿ ನೀಡುವಲ್ಲ ಬೆಳವಣಿಗೆ ಉಂಟಾಗಲಿದೆ. ಕೌಟುಂಬಿಕ ಸಹಕಾರ.

ತುಲಾ: ವೃತ್ತಿ ಒತ್ತಡ ಮರೆಯಲು ಮೆಚ್ಚಿನ ಕಾರ್ಯದಲ್ಲಿ ತೊಡಗಿ. ಕೆಲವು ಬೆಳವಣಿಗೆ ಹಿತ ತಾರದು. ಏನೋ ಬೇಸರ, ಅಸಮಾಧಾನ.

ವೃಶ್ಚಿಕ: ಇತರರ ಜತೆ ಚೆನ್ನಾದ ಸಂವಹನ ಸಾಧಿಸುವಿರಿ. ವಿಶ್ವಾಸ ವೃದ್ಧಿ. ಮಹತ್ವದ ಸುದ್ದಿ ನಿರೀಕ್ಷಿಸಿದ್ದರೆ ಇಂದು ಸಿಗದು. ಸ್ವಲ್ಪ ಕಾಲ ಕಾಯಬೇಕಾಗುತ್ತದೆ.

ಧನು: ವೃತ್ತಿಯಲ್ಲಿ ಉನ್ನತಿ. ಇತರರ ಸಹಕಾರ. ಭಿನ್ನಮತ ನಿವಾರಣೆ. ಅವಿವಾಹಿತರಿಗೆ ಸಂಗಾತಿ ಹುಡುಕಾಟದಲ್ಲಿ ಯಶ. ಆರ್ಥಿಕ ಪ್ರಗತಿ.

ಮಕರ: ಹಲವು ಬಗೆಯ ಒತ್ತಡ ಏಕಕಾಲದಲ್ಲಿ ಉಂಟಾದೀತು. ಸಹನೆ ಕಳೆಕೊಳ್ಳದೆ ನಿಭಾಯಿಸಿ. ದುಡುಕಿನ ಮಾತು, ವರ್ತನೆ ತಪ್ಪಿಸಿ.

ಕುಂಭ: ವೃತ್ತಿಪರವಾಗಿ ಯಶಸ್ವೀ ದಿನ. ಆದರೆ ಭಾವನಾತ್ಮಕವಾಗಿ ಅಶಾಂತಿ. ಆಪ್ತರ ಜತೆ ಮುನಿಸುವ ಸಂಭವ. ಆಧ್ಯಾತ್ಮದತ್ತ ಒಲವು.

ಮೀನ: ಅಂದುಕೊಂಡ ಕೆಲಸ ಸಾಧ್ಯವಾಗಲಿದೆ. ಹಣ ಗಳಿಕೆಯ ಹಾದಿ ಸುಗಮ. ಹೊಸ ವ್ಯವಹಾರದಲ್ಲಿ ಹಣ ಹೂಡಬಹುದು. ಕೌಟುಂಬಿಕ ಸಮಾಧಾನ.

ರಾಹುಕಾಲ: 3.00 - 4.30
ಗುಳಿಕಕಾಲ: 12.00 - 1.30

ಅದೃಷ್ಟ ಸಂಖ್ಯೆ: 4,0,3,7

ಕೊಲ್ಲಿ ಸಂಘರ್ಷಕ್ಕೆ ಕೊಂಚ ವಿರಾಮ

ಪುಟ ೧ರ ➜ ಅಮೆರಿಕ ಅಧಿಕಾರಿಗಳು ಮಾತ್ರ ಮಾತುಕತೆಗಳ ಮೂಲಕ ಪ್ರಗತಿ ಸಾಧಿಸುವ ಆಶಯ ವ್ಯಕ್ತಪಡಿಸಿದ್ದಾರೆ.

ಪ್ರಾದೇಶಿಕ ಮೂಲಸೌಕರ್ಯಗಳಿಗೆ ಬೆದರಿಕೆ: ಹಾರ್ಮುಜ್ ಜಲಸಂಧಿಯ ಮೂಲಕ ಅಂತಾರಾಷ್ಟ್ರೀಯ ಹಡಗು ಸಂಚಾರವನ್ನು ಪುನರಾರಂಭಿಸದಿದ್ದರೆ ಇರಾನ್‌ನ ವಿದ್ಯುತ್ ಜಾಲವನ್ನು ಧ್ವಂಸಗೊಳಿಸುವುದಾಗಿ ಅಮೆರಿಕ ಎಚ್ಚರಿಸಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಘರ್ ಕಲಿಬಾಫ್, ಅಮೆರಿಕದ ನೆಲೆಗಳಿಗೆ ಅಥವಾ ಪಾಶ್ಚಿಮಾತ್ಯ ಹಿತಾಸಕ್ತಿಗಳಿಗೆ ವಿದ್ಯುತ್ ಮತ್ತು ನೀರು ಸರಬರಾಜು ಮಾಡುವ ಮಧ್ಯಪ್ರಾಚ್ಯದ ಎಲ್ಲಾ ಸ್ಥಾವರಗಳ ಮೇಲೆ ಪ್ರತಿದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಯಾವುದೇ ಭೂಸೇನಾ ದಾಳಿ ನಡೆದರೆ ಪರ್ಷಿಯನ್ ಕೊಲ್ಲಿಯ ಎಲ್ಲಾ ಪ್ರವೇಶ ಮಾರ್ಗಗಳಲ್ಲಿ ಮೈನ್‌ಗಳನ್ನು (ಸುರಂಗ ಸ್ಫೋಟಕ) ಅಳವಡಿಸುವುದಾಗಿ ಇರಾನ್ ರಕ್ಷಣಾ ಮಂಡಳಿ ಎಚ್ಚರಿಕೆ ನೀಡಿದೆ.

ವಿಧಾನಸೌಧಕ್ಕೆ ಬೀಟೆ ಬಾಗಿಲು

ಪುಟ ೧ರ ➜ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವು ಈ ಬಾಗಿಲನ್ನು ಅಳವಡಿಸಿದೆ. ಬಾಗಿಲಿನಲ್ಲಿ ಮೈಸೂರು ಅರಮನೆಯಲ್ಲಿನ ಬಾಗಿಲುಗಳ ಮಾದರಿಯ ಕುಸುರಿ ಕೆತ್ತನೆ, ದ್ವಾರದ ಮೇಲ್ಭಾಗದಲ್ಲಿ ರಾಜ್ಯ ಲಾಂಛನ ಗಂಡಭೇರುಂಡ, ರಾಷ್ಟ್ರದ ಅಶೋಕ ಸ್ತಂಭ ಕಲಾಕೃತಿಗಳ ಕೆತ್ತನೆ ಮಾಡಲಾಗಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದ್ದಾರೆ.

1,448 ಸಿಲಿಂಡರ್ ವಶ

• **ಬೆಂಗಳೂರು:** ಗೃಹಬಳಕೆ ಸಿಲಿಂಡರ್ ಅನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಿದ 1,448 ಸಿಲಿಂಡರ್‌ಗಳನ್ನು ವಶಪಡಿಸಲಾಗಿದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಇಲಾಖೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. ಬಾಗಲಕೋಟೆ 64, ಶಿವಮೊಗ್ಗ 7, ಯಾದಗಿರಿ 100, ದಾವಣಗೆರೆ 68 ಸೇರಿದಂತೆ ರಾಜ್ಯದಲ್ಲಿ 1,448 ಗೃಹ ಬಳಕೆಯ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಕೆ ಮಾಡಿದವರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ 1955 ರ ಕಾಯ್ದೆ ಅಡಿ ಪ್ರಕರಣವನ್ನು ದಾಖಲಿಸಿ ವಶಪಡಿಸಿಕೊಳ್ಳಲಾಗಿದೆ. ರಾಜ್ಯದಲ್ಲಿ ಇದುವರೆಗೂ ಗೃಹಬಳಕೆಯ 30,51,045 ಸಿಲಿಂಡರ್, ವಾಣಿಜ್ಯ ಬಳಕೆಯ 67,641 ರಷ್ಟು ಸಿಲಿಂಡರ್‌ಗಳನ್ನು ವಿತರಣೆಯಾಗಿರುತ್ತದೆ. ಆಟೋ ಎಲ್‌ಪಿಜಿ ಸುಮಾರು 40,083 ವಾಣಿಜ್ಯ ಸಿಲಿಂಡರ್‌ಗಳಷ್ಟು (761.655 ಮೆ.ಟನ್.ಗಳು) ವಿತರಣೆಯಾಗಿರುತ್ತದೆ.

ಪ್ರತಿಪಕ್ಷ ನಾಯಕರಲ್ಲಿ ಸಚಿವ ಕೃಷ್ಣ ಬೈರೇಗೌಡ ಮನವಿ

ಅಪರಾಧೀಕರಿಸುವ ಕೃತ್ಯ ನಿಲ್ಲಿಸಿ

• **ವಿಧಾನಸಭೆ:** ಸಮಾಜದಲ್ಲಿ ತೀರಾ ಕೆಳ ಹಂತದಲ್ಲಿರುವ ಬಡ ಜನರಿಗೆ ನೀಡುವ ಸಬ್ಸಿಡಿಯನ್ನು ತುಚ್ಛಗೊಳಿಸುವ, ಅಪರಾಧೀಕರಿಸುವ ಕೃತ್ಯವನ್ನು ನಿಲ್ಲಿಸಿ ಎಂದು ಸಚಿವ ಕೃಷ್ಣ ಬೈರೇಗೌಡ ಪ್ರತಿಪಕ್ಷ ನಾಯಕರಲ್ಲಿ ಮನವಿ ಮಾಡಿದರು.

ಆಯವ್ಯಯದ ಮೇಲಿನ ಚರ್ಚೆಯ ವೇಳೆ ಬಿಜೆಪಿ ಶಾಸಕ ವಿ. ಸುನೀಲ್ ಕುಮಾರ್, ಸಬ್ಸಿಡಿ ಸಂಸ್ಕೃತಿಗೆ ರಾಜ್ಯವನ್ನು ತಳ್ಳುತ್ತಿದ್ದೀರಾ? ಆಯವ್ಯಯದ ಶೇ.14ರಷ್ಟು ಹಣ ಸಬ್ಸಿಡಿ ಯೋಜನೆಗಳಿಗೆ ಬಳಕೆಯಾಗುತ್ತಿದೆ. ಇದರಿಂದ ದೂರಗಾಮಿ ಯೋಜನೆಗಳಿಗೆ ಹೊಡೆತ ಬೀಳಲಿದೆ. ಸಬ್ಸಿಡಿ ಬಡವರ ಕಣ್ಣೀರು ಒರೆಸಬೇಕೇ ವಿನಾ ಚುನಾವಣೆಯ ಸರಕಾಗಬಾರದು ಎಂದು ಹೇಳಿದರು.

ಅವರ ಮಾತಿನ ನಡುವೆ ಆಕ್ಷೇಪ ವ್ಯಕ್ತಪಡಿಸಿದ ಸಚಿವರು, ಬಡವರಿಗೆ ನೀಡುವ ಸಬ್ಸಿಡಿಯನ್ನು ಭಾರತದಂತೆ ಬೇರೆ ದೇಶದಲ್ಲೂ ತುಚ್ಛವಾಗಿ ಕಾಣಲಾಗುತ್ತದೆ. ಆದರೆ, ಕಳೆದ 150 ವರ್ಷಗಳ ಆರ್ಥಿಕ ಚಿಂತನೆಗಳ ಕಡೆಗೆ ಒಮ್ಮೆ ಗಮನ ಹರಿಸಿದರೆ ದೇಶವೊಂದನ್ನು ಆರ್ಥಿಕ ಹಿಂಜರಿತದಿಂದ ಪ್ರಗತಿಪಥದತ್ತ ಮುನ್ನಡೆಸಲು ಬಡವರಿಗೆ ಸಬ್ಸಿಡಿ ನೀಡುವ ಮೂಲಕ ಬೇಡಿಕೆಯ ವಲಯವನ್ನು ಬಲಪಡಿಸುವುದೊಂದೇ ಪರಿಹಾರವಾಗಿ ಕಂಡುಬಂದಿದೆ ಎಂದು ವ್ಯಾಖ್ಯಾನಿಸಿದರು.

ಸ್ವಾಭಾವಿಕವಾಗ ಎರಡು ರೀತಿಯ ಆರ್ಥಿಕ ಚಿಂತನೆಗಳು ಕಾಣಸುತ್ತವೆ. ಮೊದಲನೆಯದು ಉತ್ಪಾದಕ ವಲಯದ ಅಭಿವೃದ್ಧಿಗೆ ಸಹಾಯ ಮಾಡುವುದು, ಮತ್ತೊಂದು ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ಹೆಚ್ಚಿಸಲು ಜನಸಾಮಾನ್ಯರ ಆರ್ಥಿಕ ಸ್ಥಿತಿ, ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದು. ಉತ್ಪಾದನಾ ವಲಯಕ್ಕೆ ತೆರಿಗೆ ಕಡಿತ ಮಾಡುವ ಮೂಲಕ ನೇರವಾಗಿ ಸಹಾಯ ಮಾಡಬಹುದು. ಹೀಗೆ ಮಾಡಿದಲ್ಲಿ ಅವರ ಉಳಿತಾಯ ಹೆಚ್ಚಾಗಿ ಆ ಹಣವನ್ನು ಅವರು ಮತ್ತೆ ಉತ್ಪಾದನಾ ವಲಯದಲ್ಲಿ ಹೂಡಿಕೆ ಮಾಡಲು ಅನುಕೂಲವಾಗುತ್ತದೆ. ಅದೇ ರೀತಿ ಜನರಿಗೆ ಕನಿಷ್ಠ ಆದಾಯ ಲಭ್ಯವಾಗುವುದನ್ನು ಖಾತರಿಪಡಿಸಿ, ಅವರೂ ಜೀವನ ಮಾಡಲು ಅವಕಾಶ ಮಾಡಿಕೊಡುವ ಮೂಲಕ ಆರ್ಥಿಕತೆಯನ್ನು ವೃದ್ಧಿಸಬಹುದಾಗಿದೆ ಎಂದು ವಿವರಿಸಿದರು.

ಒಬ್ಬ ವ್ಯಕ್ತಿ ಕೈಗೆ ಒಂದು ರೂಪಾಯಿ ಕೊಟ್ಟರೆ ಆ ಹಣ ಮಾರುಕಟ್ಟೆಯಲ್ಲಿ ಕನಿಷ್ಠ ಐದು ಬಾರಿ ಮರು ಚಲಾವಣೆಯಾಗುತ್ತದೆ. ಈ ಮೂಲಕ ಐದರಷ್ಟು ಆರ್ಥಿಕತೆಯನ್ನು ಸೃಷ್ಟಿಸುತ್ತದೆ. ಪರಿಣಾಮ ಆರ್ಥಿಕತೆಯೂ ವೃದ್ಧಿಸುತ್ತದೆ. ಬೇಡಿಕೆ ಜಾಸ್ತಿಯಾದಾಗ ಉತ್ಪಾದನಾ ವಲಯಕ್ಕೂ ಅನುಕೂಲವಾಗುತ್ತದೆ. ಉತ್ಪಾದನಾ ವಲಯವನ್ನು ಬಲಪಡಿಸಿ ಬೇಡಿಕೆ ಇಲ್ಲದೆ ಹೋದರೆ ಆರ್ಥಿಕ ಅಭಿವೃದ್ಧಿಯೂ ಕುಂಠಿತಗೊಳ್ಳುತ್ತದೆ. ಅಸಲಿಗೆ ಬೇಡಿಕೆ ಇಲ್ಲದೆ ಹೂಡಿಕೆ ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಸಮಾಜದ ಕೆಳ ಹಂತದಲ್ಲಿರುವವರು, ಬಡವರಿಗೆ ನೀಡುವ ಸಬ್ಸಿಡಿ ಅವರ ಉಳಿತಾಯ ಖಾತೆಯಲ್ಲಿ ಜಮೆಯಾಗುವುದಿಲ್ಲ, ಬದಲಾಗಿ ನಾವು ನೀಡುವ ಪ್ರತಿಯೊಂದು ರೂಪಾಯಿಯೂ ಪುನಃ ಮಾರುಕಟ್ಟೆಗೆ ಹಿಂತಿರುಗುತ್ತದೆ.



> ಹಿಮಾಚಲ ಪ್ರದೇಶದಲ್ಲಿ ಸಬ್ಸಿಡಿಗಳನ್ನು ನೀಡುವುದರಿಂದ ಅಲ್ಲಿನ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಶಾಸಕರ ವೇತನವನ್ನು ಕಡಿತಗೊಳಿಸಲಾಗಿದೆ. ಸರ್ಕಾರಿ ನೌಕರರ ವೇತನ ಕಂತಿನಲ್ಲಿ ನೀಡಲಾಗುತ್ತಿದೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಸಬ್ಸಿಡಿ ಬಗ್ಗೆ ಗಂಭೀರವಾಗಿ ಯೋಚಿಸಬೇಕಿದೆ.
> ■ **ಸುರೇಶ್ ಕುಮಾರ್**, ಬಿಜೆಪಿ ಶಾಸಕ

ಆ ಮೂಲಕ ಆರ್ಥಿಕತೆ ಮತ್ತಷ್ಟು ಬೆಳೆಯುತ್ತದೆ. ಇದು ನೂರಾರು ವರ್ಷಗಳ ಇತಿಹಾಸವಿರುವ ಜಾನ್ ಮೇನಾರ್ಡ್ ಕೇನ್ಸ್ ಪ್ರತಿಪಾದಿಸಿದ ಆರ್ಥಿಕತೆ.

ಯಾವ್ಯಾವ ದೇಶಗಳು ಆರ್ಥಿಕವಾಗಿ ಹಿಂದುಳಿದ್ದವೋ ಆ ಎಲ್ಲಾ ಈ ದೇಶಗಳು ಈ ಸಿದ್ಧಾಂತವನ್ನೇ ಅಳವಡಿಸಿಕೊಂಡು ಬೇಡಿಕಾ ವಲಯದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧಿಸುವ ಮೂಲಕ ಆರ್ಥಿಕ ಹಿಂಜರಿತ ದಿಂದ ಪ್ರಗತಿಯ ಪಥದತ್ತ ಹೆಜ್ಜೆ ಇಟ್ಟಿವೆ. ಹೀಗಾಗಿ ಸಬ್ಸಿಡಿ ಎಂಬ ವಿಚಾರವನ್ನು ತುಚ್ಛಗೊಳಿಸುವುದು ಮತ್ತು ಅಪರಾಧೀಕರಿಸುವುದನ್ನು ನಿಲ್ಲಿಸಿ ಎಂದು ಮನವಿ ಮಾಡಿದರು.

ಕರ್ನಾಟಕ ರಾಜ್ಯ ತಲಾ ಆದಾಯದಲ್ಲಿ ಹಾಗೂ ಜಿಎಸ್‌ಟಿ ತೆರಿಗೆ ಸಂಗ್ರಹದಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿರಲು ಸಬ್ಸಿಡಿಗಳೇ ಕಾರಣ. ಕೇಂದ್ರ ಸರ್ಕಾರ ಇತ್ತೀಚೆಗೆ ಜಿಎಸ್‌ಟಿ ತೆರಿಗೆಯನ್ನು ಸರಳೀಕರಣಗೊಳಿಸಿದಾಗ ಇತರೆ ಎಲ್ಲಾ ರಾಜ್ಯಗಳಿಗೂ ಹೋಲಿಸಿದರೆ ಕರ್ನಾಟಕದಲ್ಲಿ ಜಿಎಸ್‌ಟಿ ತೆರಿಗೆ ಸಂಗ್ರಹ ಅಷ್ಟೇನೂ ಕೊರತೆಯಾಗಿಲ್ಲ, ಗ್ಯಾರಂಟಿ ಯೋಜನೆಗಳು ಅಷ್ಟರ ಮಟ್ಟಿಗೆ ಕರ್ನಾಟಕದ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಿವೆ ಎಂದು ಕೃಷ್ಣ ಬೈರೇಗೌಡ ಅಭಿಪ್ರಾಯಪಟ್ಟರು.

2028ಕ್ಕೆ ನನ್ನ ಶಕ್ತಿ ತೋರಿಸುತ್ತೇನೆ

• **ವಿಧಾನಸಭೆ:** ರೇವಣ್ಣ ಮುಗಿದೇ ಹೋದ ಅಂದ್ಕೊಂಡಿದ್ದಾರೆ. 2028ಕ್ಕೆ ನನ್ನ ಶಕ್ತಿ ಏನೆಂಬುದನ್ನು ತೋರಿಸುತ್ತೇನೆ ಎಂದು ಜೆಡಿಎಸ್‌ನ ಹಿರಿಯ ಸದಸ್ಯ ಎಚ್.ಡಿ.ರೇವಣ್ಣ ಸವಾಲು ಹಾಕಿದರು.



ಆಯವ್ಯಯದ ಮೇಲಿನ ಚರ್ಚೆಯ ವೇಳೆ ಮಾತನಾಡಿದ ಅವರು, ದೇವೇಗೌಡರ ಕುಟುಂಬ ಪಾಪದ ಕೆಲಸ ಮಾಡಿಲ್ಲ, 2028ರ ವಿಧಾನಸಭೆ ಚುನಾವಣೆಯಲ್ಲಿ ನಮ್ಮ ಶಕ್ತಿ ತೋರಿಸುತ್ತೇವೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದಮೇಲೆ ರಾಜಕೀಯ ದ್ವೇಷ ಹೆಚ್ಚಾಗಿದೆ ಎಂದು ಆರೋಪಿಸಿದರು. ಪ್ರತಿಪಕ್ಷಗಳನ್ನು ಉದ್ದೇಶಪೂರ್ವಕವಾಗಿ ದಮನ ಮಾಡಲಾಗುತ್ತಿದೆ. ನೀವೇ ನಮಗೆ ದಾರಿ ತೋರಿದ್ದೀರಿ. ಯಾವುದೇ ಆಧಾರವಿಲ್ಲದೆ ನನ್ನ ಮೇಲೆ ಎಫ್‌ಐಆರ್ ಹಾಕಲಾಯಿತು. ನನ್ನ ವಿರುದ್ಧ ಎಫ್‌ಐಆರ್ ದಾಖಲಿಸಲು ನನ್ನ ಒಂದು ಫೋಟೋ ಇತ್ತಾ? ಆಡಿಯೋ ಇತ್ತಾ? ಬೆಂಗಳೂರಿನಲ್ಲಿ ಎಫ್‌ಐಆರ್ ಹಾಕಿಸಿದರು. ಗೃಹ ಸಚಿವರು ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ಹಾಸನ ಜಿಲ್ಲೆಯಲ್ಲಿ ಇರುವುದು ಎರಡೇ ಪಕ್ಷ. ಒಂದು ದೇವೇಗೌಡರದ್ದು ಮತ್ತು ಅವರ ವಿರೋಧಿಗಳ ಪಕ್ಷ ಎಂದರು.

ಆರು ಬಾರಿ ಶಾಸಕನಾಗಿ ಮೂವತ್ತು ವರ್ಷಗಳಿಂದ ರಾಜಕೀಯ ಜೀವನದಲ್ಲಿದ್ದೇನೆ. ಏನಾದರೂ ಮಾಡಿ ರೇವಣ್ಣ ಅವರನ್ನು ಮುಗಿಸಬೇಕೆಂಬ ಹುನ್ನಾರ ಮಾಡಲಾಗುತ್ತಿದೆ. ಇನ್ನೂ 10 ಕೇಸುಗಳನ್ನು ಹಾಕಲಿ ಎದುರಿಸುತ್ತೇನೆ. ನಮಗೂ ಎಲ್ಲವೂ ಗೊತ್ತಿದೆ, ಮುಂದೆ ನಾವು ಅಧಿಕಾರಕ್ಕೆ ಬಂದಾಗ ಏನು ಮಾಡಬೇಕೆಂದು ತೋರಿಸಿಕೊಡುತ್ತಿದ್ದಾರೆ. ಹಾಸನದಲ್ಲಿ ರೇವಣ್ಣ ನಾಲ್ಕೈದು ಶಾಸಕರನ್ನು ಗೆಲ್ಲಿಸುತ್ತಾನೆಂದು ನನ್ನ ವಿರುದ್ಧ ಪಿತೂರಿ ನಡೆಯಿತು ಎಂದು ಅವರು ದೂರಿದರು.

ಕಂದಾಯ ಸಚಿವರು ಬಹಳ ಪ್ರಾಮಾಣಿಕರು, ಅವರ ಬಗ್ಗೆ ಮಾತಾಡುವುದಿಲ್ಲ, ಕುಮಾರಸ್ವಾಮಿ ಅವರಿಗೆ 40 ವರ್ಷಗಳ ಅನುಭವವಿದೆ. ಅವರು ಏನೋ ಒತ್ತುವರಿ ಮಾಡಿದ್ದಾರೆಂದು ಅವರ ಮೇಲೆ ಪ್ರಕರಣ ದಾಖಲಿಸಿದರು. ಅದರ ತನಿಖೆಗಾಗಿ ವಿಶೇಷ ತನಿಖಾ ತಂಡವನ್ನೂ ರಚಿಸಲಾಯಿತು. ಈಗ ಹಾಸನ ಜಿಲ್ಲೆಯಲ್ಲಿ ಸರ್ಕಾರಿ ಭೂಮಿ ಒತ್ತುವರಿ ಮಾಡಲಾಗುತ್ತಿದ್ದು, ಕಂದಾಯ ಇಲಾಖೆಯಲ್ಲಿ ಲೂಟಿಯಾಗುತ್ತಿದೆ. ಇದರ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು. ಅಮಾನತ್ತು ಆದ ಅಧಿಕಾರಿಗಳನ್ನೇ ಹಾಸನ ಜಿಲ್ಲೆಗೆ ವರ್ಗಾಯಿಸಲಾಗುತ್ತಿದ್ದು, ಇದರಲ್ಲಿ ಸರ್ಕಾರವೂ ಶಾಮೀಲಾಗಿದೆಯೇ ಎಂಬ ಸಂಶಯವಿದೆ ಎಂದು ಟೀಕಿಸಿದರು.

ಏಕತೆಯಿಂದ ಎದುರಿಸಿ

ಪುಟ ೧ರ ➜ **ಭದ್ರತೆ ಬಲಪಡಿಸಿದ ಸರ್ಕಾರ:** ಆಂತರಿಕ ಭದ್ರತೆಯ ದೃಷ್ಟಿಯಿಂದಲೂ ಸರ್ಕಾರ ಎಚ್ಚರಿಕೆಯಿಂದಿದೆ ಎಂದು ಮೋದಿ ಹೇಳಿದರು. ಕರಾವಳಿ, ಗಡಿಭಾಗ, ಸೈಬರ್ ಹಾಗೂ ತಂತ್ರಜ್ಞಾನ ಮೂಲಸೌಕರ್ಯಗಳ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ಹೇಳಿದರು. ಈ ಸಂದರ್ಭವನ್ನು ದುರುಪಯೋಗಪಡಿಸಿಕೊಳ್ಳುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಲಾಗಿದೆ. ತಪ್ಪು ಮಾಹಿತಿ ಹರಡುವಿಕೆ, ಕಾಳಸಂತೆಯಲ್ಲಿ ಸಂಗ್ರಹಣೆ ಮುಂತಾದ ಚಟುವಟಿಕೆಗಳನ್ನು ತಡೆಯಲು ಕಠಿಣ ಕ್ರಮ ಅಗತ್ಯ ಎಂದರು.

ಸಾಕಷ್ಟು ಆಹಾರ ಧಾನ್ಯ ಸಂಗ್ರಹ: ಸಂಘರ್ಷದಿಂದ ಕೃಷಿ ಕ್ಷೇತ್ರಕ್ಕೂ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ಆದರೆ ದೇಶದಲ್ಲಿ ಸಾಕಷ್ಟು ಆಹಾರ ಧಾನ್ಯ ಸಂಗ್ರಹವಿರುವುದರಿಂದ ಆತಂಕ ಬೇಡ ಎಂದು ಭರವಸೆ ನೀಡಿದರು. ಖಾರಿಫ್ ಬಿತ್ತನೆ ಸುಗಮವಾಗಿ ನಡೆಯಲು ಅಗತ್ಯ ಗೊಬ್ಬರ ವ್ಯವಸ್ಥೆ ಮಾಡಲಾಗಿದೆ. ಹಿಂದೆ ಕೊರೊನಾ ಜಾಗತಿಕ ಸಂಕಷ್ಟಗಳು ರೈತರ ಮೇಲೆ ಪರಿಣಾಮ ಬೀರದಂತೆ ಸರ್ಕಾರ ಕ್ರಮ ತೆಗೆದುಕೊಂಡಿತ್ತು ಎಂದರು.

ಎಲ್ಲಾ ರಾಷ್ಟ್ರಗಳಿಗೂ ಸವಾಲು

ಪಶ್ಚಿಮ ಏಷ್ಯಾ ಸಂಘರ್ಷವು ಜಾಗತಿಕ ಆರ್ಥಿಕತೆಯ ಮೇಲೆ ತೀವ್ರ ಪರಿಣಾಮ ಬೀರಿದೆ ಎಂದು ಪ್ರಧಾನಿ ಒಪ್ಪಿಕೊಂಡರು. ಇಂಧನವು ಆರ್ಥಿಕತೆಯ ಬೆನ್ನೆಲುಬಾಗಿರುವುದರಿಂದ ಈ ಸಂಕಷ್ಟ ಎಲ್ಲ ದೇಶಗಳಿಗೂ ಸವಾಲಾಗಿದೆ ಎಂದು ಹೇಳಿದರು. ಈ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರವು ಅಲ್ಪಾವಧಿ, ಮಧ್ಯಾವಧಿ ಮತ್ತು ದೀರ್ಘಾವಧಿ ಯೋಜನೆಗಳನ್ನು ರೂಪಿಸಿದೆ. ಪ್ರತಿ ದಿನ ಸಭೆ ನಡೆಸುವ ವಿದೇಶಾಂಗ ಸಚಿವಾಲಯ ಸಮಿತಿ ಮೂಲಕ ಆಮದು-ರಫ್ತು ಸಮಸ್ಯೆಗಳನ್ನು ಪರಿಹರಿಸಲಾಗುತ್ತಿದೆ ಎಂದು ಹೇಳಿದರು.

ಡಿಜಿಟಲ್ ಅರೆಸ್ಟ್ ಹೆಸರಲ್ಲಿ ₹5 ಕೋಟಿ ವಂಚನೆ

ಪುಟ ೧ರ ➜ ಅಷ್ಟಕ್ಕೇ ನಿಲ್ಲದ ಖದೀಮರು, ಸಿಬಿಐ ಅಧಿಕಾರಿಗಳಂತೆ ವೇಷ ಧರಿಸಿ ವಿಡಿಯೋ ಕಾಲ್ ಮಾಡುವ ಮೂಲಕ ವೃದ್ಧನನ್ನು ಡಿಜಿಟಲ್ ಅರೆಸ್ಟ್ ಭೀತಿಯಲ್ಲಿ ಇರಿಸಿದ್ದರು. ನಕಲಿ ಎಫ್‌ಐಆರ್ ಪ್ರತಿಯನ್ನು ಕಳುಹಿಸಿ ಪೂರ್ಣವಾಗಿ ನಂಬಿಸಿದ್ದರು. ಪ್ರಕರಣದಿಂದ ಪಾರು ಮಾಡುವುದಾಗಿ ನಂಬಿಸಿದ ವಂಚಕರು, ಜ.17ರಿಂದ ಫೆ.23ರ ಅವಧಿಯಲ್ಲಿ ಹಂತ ಹಂತವಾಗಿ ಒಟ್ಟು 4.91 ಕೋಟಿ ರೂ.ಗಳನ್ನು ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದಾರೆ. ವೃದ್ಧನ ತಮ್ಮ ಜೀವನದ ಉಳಿತಾಯವನ್ನೆಲ್ಲಾ ಕಳೆದುಕೊಂಡರೂ ವಂಚಕರ ಹಸಿವು ನೀಗಿರಲಿಲ್ಲ, ಮತ್ತೆ ಹಣಕ್ಕಾಗಿ ಬೇಡಿಕೆ ಇಟ್ಟಾಗ ಅನುಮಾನಗೊಂಡು ಕೂಡಲೇ ಪೊಲೀಸರ ಮೊರೆ ಹೋಗಿದ್ದಾರೆ.

ಸೈಬರ್ ಪೊಲೀಸರ ಎಚ್ಚರಿಕೆ: ಈ ಸಂಬಂಧ ಸೆಂಟ್ರಲ್ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ತೀವ್ರಗೊಂಡಿದೆ. ಯಾವುದೇ ಸರ್ಕಾರಿ ಅಥವಾ ತನಿಖಾ ಸಂಸ್ಥೆಗಳು ವಿಡಿಯೋ ಕಾಲ್ ಮೂಲಕ ಯಾರನ್ನೂ ಬಂಧಿಸುವುದಿಲ್ಲ ಅಥವಾ ಹಣಕ್ಕೆ ಬೇಡಿಕೆ ಇಡುವುದಿಲ್ಲ, ಇಂತಹ ಕರೆಗಳು ಬಂದರೆ ಸಾರ್ವಜನಿಕರು ತಕ್ಷಣ 1930 ಸಹಾಯವಾಣಿಗೆ ಕರೆ ಮಾಡಬೇಕು ಎಂದು ಪೊಲೀಸರು ಮನವಿ ಮಾಡಿದ್ದಾರೆ.

ಬದುಕಿರುವವನಿಗೆ ಮರಣ ಪತ್ರ!

ಪುಟ ೧ರ ➜ ಅರ್ಜಿದಾರ ಬಾಬಾ ಪರ ವಕೀಲ ಓ.ಆಶ್ವಿನ್ ಅವರು ಅರ್ಜಿದಾರರು ಜೀವಂತವಾಗಿ ಬದುಕಿದ್ದರೂ ಮರಣ ಪ್ರಮಾಣ ಪತ್ರ ನೀಡಲಾಗಿದೆ. ಅರ್ಜಿದಾರರು ಬದುಕಿದ್ದಾರೆ ಅವರ ಪಾನ್, ಆಧಾರ್ ಕಾರ್ಡ್ ಎಲ್ಲವೂ ಇದೆ ಎಂದು ಜಿಬಿಎ ಆಸ್ಪತ್ರೆಗೆ ತಿಳಿಸಿದೆ. ಆಧಾರ್ ಕಾರ್ಡ್ ಅನ್ನು ವಸತಿತ ಚೀಟಿಗೆ ಸಂಪರ್ಕಿಸಲಾಗಿದೆ.

ಕಠಿಣ ಕ್ರಮದ ಎಚ್ಚರಿಕೆ: ಆಗ ಪೀಠವು ಜನನ ಮತ್ತು ಮರಣಗಳ ನೋಂದಣಾಧಿಕಾರಿ ಅವರು ಬುಧವಾರದೊಳಗೆ ಮರಣ ಪ್ರಮಾಣಪತ್ರ ರದ್ದುಪಡಿಸಿರುವ ಹಿಂಬರಹ ಸಲ್ಲಿಸಬೇಕು. ಇಲ್ಲವಾದಲ್ಲಿ ಸಂಬಂಧಿತ ಅಧಿಕಾರಿಗಳ ವಿರುದ್ಧ ಕ್ರಮಕ್ಕೆಗೊಳ್ಳಲಾಗುವುದು. ಮರಣ ಪ್ರಮಾಣ ಪತ್ರ ನೀಡಿರುವುದನ್ನು ರದ್ದುಪಡಿಸುವಂತೆ ಕಳೆದ ವರ್ಷ ಆದೇಶಿಸಲಾಗಿದೆ. ಇದನ್ನು ಪಾಲಿಸದೇ ಇರುವುದರಿಂದ ದಂಡ ಏಕೆ ವಿಧಿಸಬಾರದು ಎಂದು ಸರ್ಕಾರವನ್ನು ಪ್ರಶ್ನಿಸಿತು. ಸರ್ಕಾರದ ಪರ ವಕೀಲ ಆದಿತ್ಯ ಅವರು ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದರು. ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯವು, ಬದುಕಿರುವ ವ್ಯಕ್ತಿಯ ಹೆಸರಿನಲ್ಲಿ ನೀಡಲಾಗಿರುವ ಮರಣ ಪ್ರಮಾಣ ಪತ್ರವನ್ನು ಹಿಂಪಡೆಯದೇ ಇರುವುದರಿಂದ ಅವರು ಅನಿವಾರ್ಯವಾಗಿ ನ್ಯಾಯಾಲಯದ ಕದತಟ್ಟುವಂತಾಗಿದೆ.

ಕಾಡಾನೆ ದಾಳಿ ತಡೆಗೆ ಬ್ಯಾರಿಕೇಡ್ ನಿರ್ಮಾಣ

• **ವಿಧಾನಪರಿಷತ್:** ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಕಾಡಂಚಿನ ರೈತರ ಜಮೀನುಗಳಿಗೆ ಕಾಡಾನೆಯು ಸೇರಿದಂತೆ ಕಾಡು ಪ್ರಾಣಿಗಳು ಬಾರದಂತೆ ತಡೆಯಲು ರೈಲ್ವೆ ಹಳಿಗಳ ಬ್ಯಾರಿಕೇಡ್ ನಿರ್ಮಾಣ, ಸೋಲಾರ್ ತಂತಿಬೇಲಿ, ಆನೆ ನಿರೋಧಕ ಕಂದಕ ನಿರ್ಮಾಣ ಮಾಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು. ಸದಸ್ಯ ಎಸ್.ರವಿ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಬೆಂಗಳೂರು ದಕ್ಷಿಣ ಜಿಲ್ಲೆಗೆ ಮಾನವ - ಕಾಡಾನೆ ಸಂಘರ್ಷ ತಡೆಗಟ್ಟಲು 52.5 ಕಿ.ಮೀ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಅವಶ್ಯವಿದ್ದು, 89.35 ಕೋಟಿ ರೂ. ಅನುದಾನದ ಅಗತ್ಯವಿದೆ. ಆರ್ಥಿಕ ಸಂಪನ್ಮೂಲದ ಲಭ್ಯತೆಯ ಮೇರೆಗೆ ಕಾಮಗಾರಿಯನ್ನು ಹಂತ-ಹಂತವಾಗಿ ಅನುಷ್ಠಾನ ಮಾಡುತ್ತೇವೆ ಎಂದು ಹೇಳಿದರು.

ಬನ್ನೇರುಘಟ್ಟ ವಿಭಾಗ ವ್ಯಾಪ್ತಿಯಲ್ಲಿ ಆನೆ ಕಾರ್ಯಪಡೆ 24/7 ಕಾರ್ಯ ನಿರ್ವಹಿಸಲು ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದ್ದು, ನಿಯಂತ್ರಣ ಕೊಠಡಿಗೆ ಬರುವ ಕರೆಗಳಿಗೆ ಸ್ಪಂದಿಸಿ ಕೂಡಲೇ ಕ್ರಮವಹಿಸಲಾಗುತ್ತಿದೆ ಎಂದರು.

ತುಳು ಅಧಿಕೃತ ಭಾಷೆಯಾಗಿ ಘೋಷಿಸಿ

• **ವಿಧಾನಸಭೆ:** ತುಳು ಭಾಷೆಯನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯನ್ನಾಗಿ ಘೋಷಣೆ ಮಾಡಬೇಕು ಎಂದು ಬಿಜೆಪಿ ಶಾಸಕ ಉಮಾನಾಥ ಎ. ಕೋಟ್ಯಾನ್ ಆಗ್ರಹಿಸಿದರು.

ಆಯವ್ಯಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿ, ತಲಪಾಡಿಯಿಂದ ಕಾರವಾರದವರೆಗಿನ ಕಡಲ ಕಿನಾರೆಯಲ್ಲಿ ಪರ್ಯಾಲ ರಸ್ತೆ ನಿರ್ಮಿಸಲು ಕನಿಷ್ಠ 1500 ಕೋಟಿ ರೂ. ಅನುದಾನ ಒದಗಿಸಬೇಕು. ಕರಾವಳಿಯ ಕಡಲ ಕಿನಾರೆಯ ಬದಿಯಲ್ಲಿ ರಸ್ತೆ ನಿರ್ಮಿಸುವುದರಿಂದ ಪ್ರವಾಸೋದ್ಯಮ ಅಭಿವೃದ್ಧಿಯಾಗಲಿದೆ. ಮಾತ್ರವಲ್ಲ, ಕಡಲಕೊರೆತ ತಡೆಗಟ್ಟಲು ಸಹಾಯವಾಗಲಿದೆ. ಹೀಗಾಗಿ, ಸರ್ಕಾರ ಈ ವಿಷಯದ ಬಗ್ಗೆ ಆಸಕ್ತಿ ವಹಿಸಬೇಕು ಎಂದು ಮನವಿ ಮಾಡಿದರು.

ದೇವಸ್ಥಾನಗಳನ್ನು ಅಭಿವೃದ್ಧಿ ಮಾಡಬೇಕು. ಅಲ್ಲದೆ, ಕರಾವಳಿ ಪ್ರದೇಶದಲ್ಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಮೂಲಸೌಲಭ್ಯ ಅಭಿವೃದ್ಧಿಪಡಿಸಬೇಕು. ಕಂದಾಯ ಇಲಾಖೆಯಲ್ಲಿ ನಕ್ಷೆ ಪಡೆದುಕೊಳ್ಳಲು ಉಂಟಾಗುರುವ ತಾಂತ್ರಿಕ ಸಮಸ್ಯೆಯನ್ನು ಕೂಡಲೇ ಪರಿಹರಿಸಬೇಕು ಎಂದು ಒತ್ತಾಯಿಸಿದರು. ವಿತ್ತ ಸಚಿವರೂ ಆಗಿರುವ ಸಿಎಂ ಅವರು ಸಾಲ ಮಾಡಿ ಬಜೆಟ್ ಮಂಡನೆ ಮಾಡಿದ್ದಾರೆ. ಆದರೆ, ಶಾಸಕರಾಗಿ ಎರಡುವರೆ ವರ್ಷ ಕಳೆದರೂ 2 ಕೋಟಿ ರೂ.ಅನುದಾನ ನೀಡಿದ್ದನ್ನು ಬಿಟ್ಟರೆ ಮೂಲ ಸೌಕರ್ಯಕ್ಕೆ ಒಂದು ನಯಾಪೈಸೆ ಹಣ ಬಿಡುಗಡೆ ಮಾಡಿಲ್ಲ ಎಂದರು.

ಬಿಜೆಪಿ ಚರಂತಿಮಠ, ಕೈನಿಂದ ಉಮೇಶ್ ಅಖಾಡಕ್ಕೆ

ಪುಟ ೧ರ ➜ ತೆರೆದ ವಾಹನದಲ್ಲಿ ನಡೆದ ಮೆರವಣಿಗೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಅಭ್ಯರ್ಥಿ ವೀರಣ್ಣ ಚರಂತಿಮಠ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಜಗದೀಶ ಶೆಟ್ಟರ, ಮಾಜಿ ಉಪ ಮುಖ್ಯಮಂತ್ರಿ ಹಾಗೂ ಸಂಸದ ಗೋವಿಂದ ಕಾರಜೋಳ, ಸಂಸದ ಪಿ.ಸಿ. ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣ ಸಾ. ಭಾಂಡಗೆ, ಶಾಸಕ ಸಿದ್ದು ಸವದಿ, ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಮಾಜಿ ಸಚಿವ ಬಿ. ಶ್ರೀರಾಮುಲು, ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರುಗೇಶ ನಿರಾಣಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ವಿಪ ಸದಸ್ಯ ಪಿ.ಎಚ್.ಪೂಜಾರ ಮತ್ತಿತರರು ಸಾಗಿದರೆ, ಉರಿ ಬಿಸಿಲನ್ನು ಲೆಕ್ಕಿಸದೇ ಬಿಜೆಪಿ ಕಾರ್ಯಕರ್ತರು, ಮುಖಂಡರು ಕೈಯಲ್ಲಿ ಬಿಜೆಪಿ ಬಾವುಟ ಹಿಡಿದು ಘೋಷಣೆ ಕೂಗುತ್ತ ಸಾಗಿ ಪಕ್ಷದ ಶಕ್ತಿ ಪ್ರದರ್ಶನ ನಡೆಸಿದರು. ನಂತರ ನಡೆದ ಸಭೆಯಲ್ಲಿ ಮಾತನಾಡಿದ ಬಿ.ವೈ.ವಿಜಯೇಂದ್ರ ಸೂಕ್ತ ಪ್ರಮುಖರು ಅಭಿವೃದ್ಧಿಯೇ ನಮಗೆ ಮುಖ್ಯ ಆಧಾರ. ಅದನ್ನೇ ಆಧಾರವಾಗಿಟ್ಟುಕೊಂಡು ಮತ ಕೇಳುತ್ತೇವೆ. ನಿಶ್ಚಿತವಾಗಿ ಈ ಕ್ಷೇತ್ರದಲ್ಲಿ ನಾವು ಗೆಲುವು ಸಾಧಿಸಿ ತೋರಿಸುವುದಾಗಿ ಸವಾಲು ಹಾಕಿದರು.

ಕಾಂಗ್ರೆಸ್‌ನಿಂದ ಉಮೇಶ ಮೇಟಿ ನಾಮಪತ್ರ: ಕಾಂಗ್ರೆಸ್ ಅಭ್ಯರ್ಥಿ ಅಭ್ಯರ್ಥಿ ಉಮೇಶ ಮೇಟಿಯವರು ಸೋಮವಾರ ಭಾರೀ ಮೆರವಣಿಗೆಯೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೇತೃತ್ವದಲ್ಲಿ ನಾಮಪತ್ರ ಸಲ್ಲಿಸಿದರು. ಕಾಂಗ್ರೆಸ್ ಕಾರ್ಯಕರ್ತರು ಕೈಯಲ್ಲಿ ಕಾಂಗ್ರೆಸ್ ಬಾವುಟ ಹಿಡಿದುಕೊಂಡು ಪಕ್ಷದ ಅಭ್ಯರ್ಥಿ ಉಮೇಶ ಮೇಟಿಯವರ ಪರವಾಗಿ ಜೈ ಘೋಷಣೆಗಳನ್ನು ಕೂಗಿದರು.



ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ನಾಮಪತ್ರ ಸಲ್ಲಿಸಿದರು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಇದ್ದರು.

> ಕಾಂಗ್ರೆಸ್ ಸರ್ಕಾರದ ಆಡಳಿತ ಬಗ್ಗೆ ಜನರಲ್ಲಿ ಅಸಮಾಧಾನ ಹೆಚ್ಚುತ್ತಿದೆ. ಕುಟುಂಬ ರಾಜಕಾರಣದ ವಿರುದ್ಧ ಜನ ತೀರ್ಪು ನೀಡಲಿದ್ದು, ಬಾಗಲಕೋಟೆಯಲ್ಲಿ ಮೇಟಿಯವರ ಮಗ, ದಾವಣಗೆರೆಯಲ್ಲಿ ಮೊಮ್ಮಗನನ್ನು ಮನೆಗೆ ಕಳುಹಿಸುವ ಕಾಲ ಬಂದಿದೆ.
> ■ **ಪ್ರಲ್ಹಾದ ಜೋಶಿ**, ಕೇಂದ್ರ ಸಚಿವ

ದಾವಣಗೆರೆಯಲ್ಲಿ ಬೃಹತ್ ಮೆರವಣಿಗೆ

ಪುಟ ೧ರ ➜ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಮಾಜಿ ಸಚಿವ ಡಾ.ಜಿ.ಎಂ. ಸಿದ್ದೇಶ್ವರ್, ಮಾಜಿ ಸಚಿವ ರೇಣುಕಾಚಾರ್ಯ, ಜೆಡಿಎಸ್ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಜತೆಗೆ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ಟಿ. ದಾಸಕರಿಯಪ್ಪ ನಾಮಪತ್ರ ಸಲ್ಲಿಸಿದರು.



ಕಾಂಗ್ರೆಸ್‌ನಿಂದ ಸಮರ್ಥ ನಾಮಪತ್ರ: ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಎಂ. ಶಾಮನೂರು ನಾಮಪತ್ರ ಸಲ್ಲಿಕೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ವತಃ ಸಮರ್ಥ ಅವರ ಕೈ ಹಿಡಿದು ಕಚೇರಿಗೆ ಕರೆತಂದು ಬೆಂಬಲ ವ್ಯಕ್ತಪಡಿಸಿದರು. ಮೆರವಣಿಗೆಯಲ್ಲಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಶಾಸಕ ಪ್ರದೀಪ್ ಈಶ್ವರ್ ಸಾಥ್ ನೀಡಿದರು. ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವ ಹೆಚ್. ಆಂಜನೇಯ, ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಇನ್ನಿತರರಿದ್ದರು.

ಸಾದಿಕ್ ಪೈಲ್ವಾನ್ ಬಂಡಾಯ ಉಮೇದುವಾರಿಕೆ

ಕಾಂಗ್ರೆಸ್ ಟಿಕೆಟ್ ತಪ್ಪಿದ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತರ ಮುಖಂಡ ಸಾದಿಕ್ ಪೈಲ್ವಾನ್ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವ ಮೂಲಕ ಕಾಂಗ್ರೆಸ್ಸಿಗೆ ಬಂಡಾಯದ ಆಘಾತ ನೀಡಿದ್ದಾರೆ. ಅದ್ದೂರಿ ಮೆರವಣಿಗೆಯೊಂದಿಗೆ ಮಹಾ ನಗರ ಪಾಲಿಕೆಯ ಚುನಾವಣಾ ಕಚೇರಿಗೆ ಆಗಮಿಸಿದ ಸಾದಿಕ್ ಪೈಲ್ವಾನ್‌ಗೆ ಮುಸ್ಲಿಂ ಸಮುದಾಯದ ಮಹಿಳೆಯರು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಬೆಂಬಲ ತೋರಿದರು.

ತಡೆಯಾಜ್ಞೆ ತೆರವಿನ ನಂತರ ಕಾನೂನು ಕ್ರಮ: ಸುಧಾಕರ್



• **ವಿಧಾನಪರಿಷತ್:** ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಕಾಮಗಾರಿಗಳಲ್ಲಿ ಉಪ ಕುಲಪತಿ ಅವರು ಅಕ್ರಮ ನಡೆಸಿರುವುದು ಸಾಬೀತಾದರೆ ನ್ಯಾಯಾಲಯದ ತಡೆಯಾಜ್ಞೆ ತೆರವಾದ ನಂತರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಭೋಜೇಗೌಡ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದಲ್ಲಿ ನಡೆದ ಕಾಮಗಾರಿಯ ಟೆಂಡರ್‌ಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಕೇಳಿಬಂದಿದ್ದು, ಸರ್ಕಾರವೇ ಇದನ್ನು ರಕ್ಷಣೆ ಮಾಡಲಿದೆ ಎಂದರು.

ಕಾಮಗಾರಿ ಅಕ್ರಮ ನಡೆದ ಸಂಬಂಧ ಕುಲಪತಿಯೊಬ್ಬರು ನೇರವಾಗಿ ರಾಜ್ಯಪಾಲರಿಗೆ ದೂರು ಕೊಡಲಾಗಿತ್ತು. ಇದಕ್ಕೆ ಏಕ ನ್ಯಾಯಮೂರ್ತಿ ಸಮಿತಿಯನ್ನು ಮಾಡಿದ್ದರು. ಅದರ ವರದಿ ನೇರವಾಗಿ ಅವರಿಗೆ ಸಲ್ಲಿಕೆಯಾಗಿದೆ. ಈ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿಲ್ಲ. ನ್ಯಾಯಾಲಯದಲ್ಲಿ ಇದಕ್ಕೆ ತಡೆ ಹಿಡಿಯಲಾಗಿದೆ. ಪ್ರಕರಣ ನ್ಯಾಯಾಲಯದ ಹಂತದಲ್ಲಿರುವುದರಿಂದ ಹೆಚ್ಚು ಮಾತನಾಡಲಾಗುವುದಿಲ್ಲ ಎಂದರು.

ಇನ್ನು ಕುಲಪತಿಗಳನ್ನು ಬೇಕಂತಲೇ ಬದಲಾವಣೆ ಮಾಡಲಾಗಿದೆ. ಕೋಟ್ಯಂತರ ಭ್ರಷ್ಟಾಚಾರ ನಡೆದಿದೆ. ಹಳೆಯ ಕಟ್ಟಡ ಕಾಮಗಾರಿ ಬಗ್ಗೆ ಏಕೆ ಮಾತನಾಡಿಲ್ಲ, ಕುಲಪತಿಗಳನ್ನು ವರ್ಗಾವಣೆ ಮಾಡಿ, ಇನ್ನೊಬ್ಬರನ್ನು ತರಲಾಗಿದೆ ಎಂಬ ಭೋಜೇಗೌಡ ಆರೋಪಕ್ಕೆ ಉತ್ತರಿಸಿದ ಸಚಿವರು, ಕುಲಪತಿಗಳನ್ನು ನಾವು ಕಳುಹಿಸಿಲ್ಲ. ಅವರ ಸಮಯ 4 ವರ್ಷ ಅವಧಿ ಮುಗಿದಿತ್ತು. ಅದಕ್ಕೆ ಬದಲಾವಣೆಯಾಗಿದ್ದಾರೆ. ನ್ಯಾಯಾಲಯದಲ್ಲಿ ತಡೆಯಾಜ್ಞೆ ತೆರವಾದರೆ ಕ್ರಮ ವಹಿಸುತ್ತೇವೆ ಎಂದು ವಿವರಿಸಿದರು. ಇದಕ್ಕೆ ಮಧ್ಯ ಪ್ರವೇಶಿಸಿದ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಇದು ಭ್ರಷ್ಟಾಚಾರದ ವಿಚಾರವಾಗಿದೆ ಎಂದು ಹೇಳಿದರು.

ಕಲಾಪ ವೀಕ್ಷಣೆ



ವಿಧಾನಪರಿಷತ್‌ನಲ್ಲಿ ಸೋಮವಾರ ಶಾಲಾ - ಕಾಲೇಜು ವಿದ್ಯಾರ್ಥಿಗಳು ಕಲಾಪ ವೀಕ್ಷಿಸಿದರು.

ಬಜೆಟ್ ಭೀಷ್ಮ ಮಲಗಿದ್ದಾರೆ: ಪ್ರತಾಪ್ ಸಿಂಹ ನಾಯಕ



• **ವಿಧಾನಪರಿಷತ್:** 17 ಬಾರಿ ಬಜೆಟ್ ಮಂಡಿಸಿರುವ ಬಜೆಟ್ ಭೀಷ್ಮ ಮಲಗಿದ್ದಾರೆ. ಅವರಿಗೆ ತಮ್ಮವರೇ ಬಾಣ ಬಿಟ್ಟಿದ್ದಾರೆ. ದಾಖಲೆಯ ಬಜೆಟ್ ಮಂಡಿಸಿರುವ ಖ್ಯಾತಿ ಪಡೆದಿರುವ ಸಿದ್ದರಾಮಯ್ಯ, ತಮ್ಮದೇ ಸರ್ಕಾರ ಮಾಡಿರುವ ಸಾಲದಿಂದಾಗಿ ಇತಿಹಾಸದಲ್ಲಿ ಸಾಲದ ರಾಮಯ್ಯ ಆಗಿ ಉಳಿಯಲಿದ್ದಾರೆ ಎಂದು ಬಿಜೆಪಿ ಸದಸ್ಯ ಪ್ರತಾಪ್ ಸಿಂಹ ನಾಯಕ ಲೇವಡಿ ಮಾಡಿದರು.

ಮೇಲ್ಮನೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಇದು ನನ್ನ ಅವಧಿಯ ಕೊನೆಯ ಭಾಷಣ ಆರಂಭಿಸಿದ ಅವರು ಮಾತಿನುದ್ದಕ್ಕೂ ಕಾಂಗ್ರೆಸ್ ಸರ್ಕಾರದ ವೈಫಲ್ಯ ಹಾಗೂ ಬಜೆಟ್‌ನಲ್ಲಿರುವ ಲೋಪಗಳನ್ನು ಪ್ರಸ್ತಾಪಿಸಿದರು. 17 ಬಾರಿ ಬಜೆಟ್ ಮಂಡಿಸುವ ಸುದೈವ ಮತ್ಯಾರಿಗೂ ಸಿಗುವುದಿಲ್ಲ. ಹೀಗಾಗಿ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ಸಿಗರು ಬಜೆಟ್ ಭೀಷ್ಮ ಎಂದು ಹಾಡಿಹೊಗಳುತ್ತಿದ್ದಾರೆ. ಆದರೆ, ಬಜೆಟ್ ಮಂಡನೆ ವೇಳೆ ಕಾಂಗ್ರೆಸ್‌ನ ಯಾವೊಬ್ಬ ಶಾಸಕನೂ ಮೇಜು ಕುಟ್ಟಲಿಲ್ಲ, ಇದು ಬಜೆಟ್ ವಾಸ್ತವತೆ ಎಂದು ಟೀಕಿಸಿದರು.

ಸಿದ್ದರಾಮಯ್ಯ ಅವರು ಉತ್ತರಾಯಣ ಕಾಲ ಅಂದರೆ ಹೈಕಮಾಂಡ್ ಆದೇಶವನ್ನು ಕಾಯುತ್ತಾ ಮಲಗಿದ್ದಾರೆ, ಅವರಿಗೆ ಬಿಟ್ಟ ಬಾಣಗಳು ವಿರೋಧಿಗಳು ಅಲ್ಲ, ಸ್ವಪಕ್ಷದವರೇ. ಸಿಎಂ ಕುರ್ಚಿ ಕಿತ್ತಾಟದ ಮಾತುಗಳು ಸ್ವಪಕ್ಷೀಯರಿಂದಲೇ ಬಂದಿವೆ. ಹೇಗಾದರೂ ಮಾಡಿ ಅಧಿಕಾರ ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಕಳೆದ ಡಿಸೆಂಬರ್‌ನಲ್ಲಿ ವಿಶೇಷ ಅಧಿವೇಶನ ನಡೆಸಿ, ಸ್ವಪಕ್ಷದಲ್ಲಿ ಉಂಟಾಗಿದ್ದ ರಾಜಕೀಯ ಚಟುವಟಿಕೆಗಳನ್ನು ಹತ್ತಿಕ್ಕುವುದೇ ಆಗಿತ್ತು. ಆದರೆ, ಹೈಕಮಾಂಡ್ ಸೂಚನೆಯಂತೆ ವಿಬಿ ಜಿ ರಾಮ್ ಜಿ ಕುರಿತ ಅಧಿವೇಶನ ಎಂಬುದು ಹೇಳಿಕೊಂಡಿತು. ಸರ್ಕಾರಕ್ಕೆ ಅಂತಹ ಕಾಳಜಿಯಿದ್ದರೆ, ಮೋದಿ ಅವರ 10 ವರ್ಷ ಹಾಗೂ ಮನಮೋಹನ ಸಿಂಗ್ ಅವರ 10 ವರ್ಷದ ಆಡಳಿತದ ಬಗ್ಗೆ ಚರ್ಚೆಗೆ ಈಗ 3 ದಿನ ಅಧಿವೇಶನ ಕರೆಯಲಿ ಚರ್ಚಿಸೋಣ ಎಂದು ಸವಾಲು ಹಾಕಿದರು.

ಕಿರುಸುದ್ದಿ

ಸದನದಲ್ಲಿ ಸಂತಾಪ ಸೂಚನಾ ನಿರ್ಣಯ ಮಂಡನೆ

• **ವಿಧಾನಪರಿಷತ್ತು:** ಅಕಾಲಿಕವಾಗಿ ನಿಧನರಾದ ವಿಧಾನ ಪರಿಷತ್‌ನ ಮಾಜಿ ಶಾಸಕ ಕರಿಯಣ್ಣ ಎಚ್. ಸಂಗಟಿ ಅವರಿಗೆ ಸಂತಾಪ ವ್ಯಕ್ತಪಡಿಸಿ, ಸಭಾಪತಿ ಬಸವರಾಜ ಹೊರಟ್ಟಿ ಅವರು ಸದನದಲ್ಲಿ ಸಂತಾಪ ಸೂಚನಾ ನಿರ್ಣಯ ಮಂಡಿಸಿದರು. ಈ ವೇಳೆ ಮಾತನಾಡಿದ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಜ್ಜನ ರಾಜಕಾರಣಕ್ಕೆ ಉದಾಹರಣೆಯಾಗಿದ್ದ ಕರಿಯಣ್ಣ ಸಂಗಟಿ ಅವರನ್ನು ನಾನು ಅತ್ಯಂತ ಹತ್ತಿರದಿಂದ ಅವರನ್ನು ಬಲ್ಲೆ, ಅವರನ್ನು ರಾಗಿ ಮುದ್ದೆ ಎಂದೇ ತಮಾಷೆ ಮಾಡುತ್ತಿದ್ದೆವು. ಒಬ್ಬ ಸಜ್ಜನ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ ಎಂದು ಸಂತಾಪ ವ್ಯಕ್ತಪಡಿಸಿದರು. ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹ್ಮದ್ ಮಾತನಾಡಿ, ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿ ಹಿರಿಯ ನಾಯಕರಾಗಿದ್ದ ಕರಿಯಣ್ಣ ಸಂಗಟಿ ಅವರ ಅಕಾಲಿಕ ನಿಧನದಿಂದ ನಾವು ಓರ್ವ ಶ್ರೇಷ್ಠ ರಾಜಕಾರಣಿಯನ್ನು ಕಳೆದುಕೊಂಡಿದ್ದೇವೆ. ಯುವ ಕಾಂಗ್ರೆಸ್ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ ಅವರು ಜಿಲ್ಲಾ ಪಂಚಾಯತ್ ಸದಸ್ಯರಾಗಿ, ನಂತರ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ ಅನನ್ಯ ಎಂದು ಸ್ಮರಿಸಿದರು.

ವನ್ಯಜೀವಿ ಸಂರಕ್ಷಣಾ ಕಾಯ್ದೆ ತಿದ್ದುಪಡಿ ಸರ್ಕಾರಕ್ಕಿಲ್ಲ ಅಧಿಕಾರ

• **ವಿಧಾನಪರಿಷತ್:** ವನ್ಯ ಜೀವಿಗಳ ಅಂಗಾಂಗ, ಟ್ರೋಫಿಗಳನ್ನು ಸರ್ಕಾರಕ್ಕೆ ನೀಡಬೇಕು ಎಂಬುದು ಕೇಂದ್ರ ಸರ್ಕಾರದ ಕಾನೂನು. ಈ ಬಗ್ಗೆ ಉಲ್ಲೇಖಿಸುವ ವನ್ಯ ಜೀವಿ (ಸಂರಕ್ಷಣಾ) ಕಾಯ್ದೆ-1972 ಗೆ ತಿದ್ದುಪಡಿ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರವಿದೆ. ರಾಜ್ಯಕ್ಕೆ ಅಧಿಕಾರವಿಲ್ಲ ಎಂದು ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಖಂಡ್ರೆ ಹೇಳಿದರು. ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯ ಕುಶಾಲಪ್ಪ ಎಂ. ಪಿ. (ಸುಜಾ) ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಮಲೆನಾಡು ಭಾಗದ ರೈತರು ಮತ್ತು ಬೆಳೆಗಾರರು ಪಾರಂಪರಿಕವಾಗಿ ತಮ್ಮ ಬಳಿಯೇ ಇಟ್ಟುಕೊಂಡಿರುವ ವಸ್ತುಗಳನ್ನು ಅವರ ಬಳಿಯೇ ಇಟ್ಟುಕೊಳ್ಳಲು ಅವಕಾಶ ನೀಡುವಂತೆ ಈಗಾಗಲೇ 2 ಬಾರಿ ಕೇಂದ್ರ ಸಚಿವರನ್ನು ಭೇಟಿಯಾಗಿ ಮನವಿ ಮಾಡಲಾಗಿದೆ. ಮತ್ತೊಮ್ಮೆ ಕೇಂದ್ರ ಸಚಿವರನ್ನು ಭೇಟಿಯಾಗಲು ನಾನು ಸಿದ್ಧನಿದ್ದೇನೆ ಎಂದರು. ರಾಜ್ಯ ಸರ್ಕಾರವು ವನ್ಯ ಜೀವಿಗಳ ವಸ್ತುಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ 2024ರ ಜ.10 ರಂದು ಆದೇಶಿಸಿ, 90 ದಿನಗಳ ಕಾಲಾವಕಾಶ ನೀಡಲಾಗಿತ್ತು. ಈ ಅವಧಿಯಲ್ಲಿ 192 ಜನರು, 705 ವನ್ಯ ಜೀವಿ ಅಂಗಾಂಗ, ಟ್ರೋಫಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ ಎಂದರು.



ಅರಣ್ಯ ಭೂಮಿ ಮಂಜೂರು ಮಾಡಲ್ಲ: ಈಶ್ವರ ಖಂಡ್ರೆ

• **ವಿಧಾನಪರಿಷತ್:** ರಾಜ್ಯದಲ್ಲಿ ಮೀಸಲು ಅರಣ್ಯ, ಪರಿಭಾವಿತ ಅರಣ್ಯ ಸೇರಿದಂತೆ ಯಾವುದೇ ಅರಣ್ಯ ಭೂಮಿಯನ್ನು ಸಾರ್ವಜನಿಕರಿಗೆ ಮಂಜೂರು ಮಾಡಲು ಸಾಧ್ಯವಿಲ್ಲ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸ್ಪಷ್ಟಪಡಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಕಿಶೋರ್ ಕುಮಾರ್ ಪುತ್ತೂರ್ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಅಕ್ರಮ ಸಕ್ರಮದಡಿ ನಮೂನೆ 50, 53, 57ರಲ್ಲಿ ಜಮೀನು ಮಂಜೂರಾತಿ ಕೋರಿ ಅರ್ಜಿಗಳನ್ನು ಸಲ್ಲಿಸಲಾಗಿದೆ. ಆದರೆ ಕಂದಾಯ ಭೂಮಿ ಮಂಜೂರು ಮಾಡಲು ಬರುತ್ತದೆಯೇ ಹೊರತು ಅರಣ್ಯ ಭೂಮಿಯನ್ನು ಅಲ್ಲ ಎಂದು ತಿಳಿಸಿದರು.

ತಾತ್ಕಾಲಿಕವಾಗಿ ಶೇ.20 ಪೂರೈಕೆಗೆ ಅವಕಾಶ: ಕೆ.ಎಚ್.ಮುನಿಯಪ್ಪ

ವಾಣಿಜ್ಯ ಸಿಲಿಂಡರ್ ಪೂರೈಕೆ

• **ಬೆಂಗಳೂರು:** ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ಉಂಟಾದ ತೊಂದರೆ ಕುರಿತು ಈಗಾಗಲೇ ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದ್ದು, ಈ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಶೇ.20 ಪೂರೈಕೆಗೆ ಅವಕಾಶ ನೀಡಲಾಗಿದೆ ಎಂದು ಆಹಾರ ಇಲಾಖೆಯ ಸಚಿವ ಕೆ.ಎಚ್.ಮುನಿಯಪ್ಪ ಸೂಚಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ಉಂಟಾದ ತೊಂದರೆ ಕುರಿತು ಈಗಾಗಲೇ ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದ್ದು, ಈ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಶೇ.20 ಪೂರೈಕೆಗೆ ಅವಕಾಶ ನೀಡಲಾಗಿದೆ. ಇದರ ಜೊತೆಗೆ, ಹೋಟೆಲ್ ಹಾಗೂ ಸಂಬಂಧಿತ ಉದ್ಯಮಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಕನಿಷ್ಠ ಶೇ.50 ಪೂರೈಕೆ ಅಗತ್ಯವಿದ್ದು, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಪ್ರತಿದಿನ ಸುಮಾರು 7000 ಕಮರ್ಷಿಯಲ್ ಸಿಲಿಂಡರ್‌ಗಳನ್ನು ಹಂಚಿಕೆ ಮಾಡಲಾಗುತ್ತಿತ್ತು. ಪ್ರಸ್ತುತ ಆಟೋ ಗ್ಯಾಸ್ ಸೇರಿದಂತೆ ವಿವಿಧ ವಲಯಗಳನ್ನು ಸೇರಿಸಿ ಒಟ್ಟು 15,000-16,000 ಸಿಲಿಂಡರ್‌ಗಳ ವಿತರಣೆ ಮಾಡಲು ನಿರ್ಧರಿಸಿದ್ದು, ಇದರಲ್ಲಿ ಹೋಟೆಲ್, ರೆಸ್ಟೋರೆಂಟ್, ಡಾಬಾ, ಕ್ಯಾಂಟೀನ್, ಫುಡ್ ಪ್ರೊಸೆಸಿಂಗ್ ಘಟಕಗಳು ಸೇರಿದಂತೆ ವಿವಿಧ ಸೇವಾ ವಲಯಗಳಿಗೆ ಪ್ರತಿ ದಿನ 10 ಸಾವಿರ ವಾಣಿಜ್ಯ ಸಿಲಿಂಡರ್ ಪೂರೈಕೆಯನ್ನು ಮಾಡಲಾಗುವುದು. ಅಂದರೆ ಪ್ರಸ್ತುತ ಬಳಕೆ ಮಾಡುತ್ತಿರುವ ವಾಣಿಜ್ಯ ಸಿಲಿಂಡರ್‌ನಲ್ಲಿ ಶೇ.20ರಷ್ಟು ಪೂರೈಕೆ ಮಾಡಲಾಗುವುದು ಎಂದು ಹೇಳಿದರು.

ಇದರೊಂದಿಗೆ, ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳು, ಔಷಧ ಉದ್ಯಮಕ್ಕೆ, ಮೀನುಗಾರಿಕೆ, ರೇಷ್ಮೆ ಹಾಗೂ ಇತರೆ ಅಗತ್ಯ ವಲಯಗಳಿಗೆ ಪ್ರತ್ಯೇಕ ಆದ್ಯತೆ ನೀಡಿ ಸುಮಾರು 500 ಸಿಲಿಂಡರ್‌ಗಳನ್ನು ಮೀಸಲಿಡಲಾಗಿದೆ ಎಂದು ತಿಳಿಸಿದರು.

ಕಳ್ಳಸಂತೆ ನಿಯಂತ್ರಣ ಹಾಗೂ ಪಾರದರ್ಶಕತೆ ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಎಲ್ಲಾ ವಾಣಿಜ್ಯ ಅಡುಗೆ ಅನಿಲ ಬಳಕೆದಾರರು ಒಂದು ವಾರದೊಳಗೆ ಗೈಲ್‌ನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. ಇದರಿಂದ ಮುಂದಿನ ದಿನಗಳಲ್ಲಿ ಪೈಪ್‌ಲೈನ್ ಆಧಾರಿತ ಗ್ಯಾಸ್ ಪೂರೈಕೆಯನ್ನು ವಿಸ್ತರಿಸಲು ಸಹಾಯಕವಾಗಲಿದೆ ಎಂದರು. ವಾಣಿಜ್ಯ ಅಡಿಗೆ ಅನಿಲ ಬಳಸುವವರು ಒಂದು ವಾರದೊಳಗೆ ಕಡ್ಡಾಯವಾಗಿ ಗೇಲ್‌ನಲ್ಲಿ ನೊಂದಣಿ ಮಾಡಿಸಬೇಕು ಎಂದು ಮುನಿಯಪ್ಪ ತಿಳಿಸಿದರು.



25 ದಿನಗಳಿಗೊಮ್ಮೆ ಗೃಹ ಬಳಕೆ ಸಿಲಿಂಡರ್

ನಗರದ ಭಾಗದಲ್ಲಿ ಸುಮಾರು 25 ದಿನಗಳಿಗೊಮ್ಮೆ ಗೃಹ ಬಳಕೆ ಸಿಲಿಂಡರ್ ಹಾಗೂ ಗ್ರಾಮೀಣ ಭಾಗದಲ್ಲಿ 45 ದಿನಗಳಲ್ಲಿ ಸಿಲಿಂಡರ್ ಪೂರೈಕೆ ಮಾಡಲಾಗುತ್ತದೆ. ಯಾಕೆಂದರೆ ಗ್ರಾಮೀಣ ಭಾಗದಲ್ಲಿ ಜನರಿಗೆ ಸೌದೆ ಸೇರಿದಂತೆ ಇತರ ವ್ಯವಸ್ಥೆಗಳಿರುತ್ತದೆ. ಹಾಗಾಗಿ ಗ್ರಾಮೀಣ ಭಾಗದವರಿಗೆ 45 ದಿನಕ್ಕೊಮ್ಮೆ ಅನಿಲ ಪೂರೈಕೆ ಮಾಡಲಾಗುತ್ತದೆ. ಅದಕ್ಕೂ ಮೊದಲು ಗ್ರಾಹಕರು ಅನಿಲದ ಅಂಗಡಿಗೆ ಬರುವ ಅಗತ್ಯವಿಲ್ಲ, ಫೋನ್ ಮಾಡಿದರೆ ಮನೆ ಬಾಗಿಲಿಗೆ ಸಿಲಿಂಡರ್ ಬರಲಿದೆ ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ

ಉದ್ಯೋಗ ಸೃಷ್ಟಿಗೆ ಒತ್ತು



• **ವಿಧಾನಪರಿಷತ್:** ಹೊಸ ಹುದ್ದೆಗಳ ಸೃಷ್ಟಿ ಸೇರಿದಂತೆ ಹಲವಾರು ಸಮಸ್ಯೆಗಳ ಮಧ್ಯೆಯೂ ನಾವು ವೈದ್ಯ, ನೇಮಕಾತಿ ಪಾರದರ್ಶಕತೆಗೆ ಸ್ವರೂಪ ನೀಡಲು ಪ್ರಯತ್ನಿಸಲಾಗುತ್ತಿದೆ. ಇನ್ನೆರಡು ತಿಂಗಳಲ್ಲಿ ಕಳೆದ 40 ವರ್ಷಗಳಲ್ಲಿ ಆಗದಿರುವ ಕೆಲಸ ಪೂರ್ಣಗೊಳ್ಳಲಿದೆ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಎಸ್.ವಿ. ಸಂಕನೂರ ಅವರ ಆರೋಗ್ಯ ಇಲಾಖೆಯ ವೈದ್ಯರ ಸಮಸ್ಯೆಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಬಿ, ಸಿ, ಡಿ ದರ್ಜೆಯ ಜೇಷ್ಠತಾ ಪಟ್ಟಿಯನ್ನು ಈಗಾಗಲೇ ಮಾಡಲಾಗಿದ್ದು, ಎ ವರ್ಗದ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಇದು ಕಳೆದ 13 ವರ್ಷಗಳಿಂದ ಬಾಕಿ ಉಳಿದಿತ್ತು. ಗ್ರಾಮೀಣ ಸೇವೆ ಸಲ್ಲಿಸಿದ ಕುರಿತು ವಿವರಗಳು ಸೇರಿದಂತೆ ಹಲವಾರು ಮಾಹಿತಿಗಳ ಕೊರತೆ ಇತ್ತು. ಅವನ್ನೆಲ್ಲ ಸರಿ ಪಡಿಸಿ ಪಟ್ಟಿ ಬಿಡುಗಡೆ ಮಾಡಲಾಗಿದ್ದು, ಪಟ್ಟಿಯಲ್ಲಿ ದೋಷ ಇದ್ದರೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದರು.

ವರ್ಗಾವಣೆಗೆ ಕೌನ್ಸಿಲಿಂಗ್ ಮುಖಾಂತರ ಆಗಬೇಕು ಎಂದು ದಶಕಗಳ ಹಿಂದೆಯೇ ಕಾನೂನು ಮಾಡಿದ್ದರೂ ಜಾರಿಗೆ ಬಂದಿರಲಿಲ್ಲ, ಮೆಡಿಕಲ್, ಶಿಫಾರಸ್ಸಿನ ಮುಂತಾದ ರೀತಿಯಲ್ಲಿ ವರ್ಗಾವಣೆ ನಡೆಯುತ್ತಿತ್ತು. ಕಳೆದ ವರ್ಷ 5,700 ವರ್ಗಾವಣೆ ಕೌನ್ಸಿಲಿಂಗ್ ಮೂಲಕ ಮಾಡಿದ್ದೇವೆ. ಈಗ ಮತ್ತೆ ಮುಂದಿನ ತಿಂಗಳು ಕೌನ್ಸಿಲಿಂಗ್ ಮೂಲಕವೇ ಪಾರದರ್ಶಕವಾಗಿ ಮಾಡುತ್ತೇವೆ. ನಮ್ಮ ಇಲಾಖೆ ಪಾರದರ್ಶಕವಾಗಿ ಮುನ್ನಡೆಸಲು ಎಲ್ಲ ರೀತಿಯಲ್ಲಿ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದರು.

ಔಷಧ ಖರೀದಿಗೆ ಟೆಂಡರ್ ಕರೆಯಲು ನಿರ್ಧಾರ

ರಾಜ್ಯದ ಔಷಧ ಉಗ್ರಾಣಗಳಲ್ಲಿ ಔಷಧಗಳ ಕೊರತೆ ಅಭಾವ ನೀಗಿಸಲು 2026-27ನೇ ಸಾಲಿನ ಔಷಧಿಗಳ ಖರೀದಿ ಸಂಬಂಧ ಬರುವ ಜೂನ್‌ನಲ್ಲಿ ಟೆಂಡರ್ ಕರೆಯಲು ನಿರ್ಧರಿಸಲಾಗಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ಮಾಹಿತಿ ನೀಡಿದರು. ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯೆ ಹೇಮಲತಾ ನಾಯಕ್ ಅವರು ಕಲ್ಯಾಣ ಕರ್ನಾಟಕ ಭಾಗದ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆ ಉಂಟಾಗಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಕಳೆದ ವರ್ಷ 534 ಔಷಧಿಗಳ ಖರೀದಿ ಪೈಕಿ 234 ಔಷಧಿಗಳ ಟೆಂಡರ್ ಕರೆದು ಖರೀದಿಸಿ, ಆಸ್ಪತ್ರೆಗಳಿಗೆ ಔಷಧಿಗಳ ಸರಬರಾಜು ಮಾಡಲಾಗಿದೆ ಎಂದರು.

ಅಂತಿಮ ಕಂತಿನ ಬೇಡಿಕೆಗೆ ಸದನ ಒಪ್ಪಿಗೆ



• **ವಿಧಾನಸಭೆ:** ರಾಜ್ಯ ಸರ್ಕಾರ 2025-26ನೇ ಸಾಲಿನ ಪೂರಕ ಅಂದಾಜುಗಳ ವರದಿ ಮಂಡಿಸಿದ್ದು, ಮೂರನೇ ಮತ್ತು ಅಂತಿಮ ಕಂತಿನ ಬೇಡಿಕೆಗಳ ಪ್ರಸ್ತಾವಗಳಿಗೆ ಒಟ್ಟು 14,767.89 ಕೋಟಿ ರೂ.ಗಳ ಪೂರಕ ಅಂದಾಜು ಮಂಡಿಸಲಾಗಿದೆ.

2025-26ನೇ ಸಾಲಿನ ಪೂರಕ ಅಂದಾಜುಗಳ ಮೂರನೇ ಮತ್ತು ಅಂತಿಮ ಕಂತಿನ ಬೇಡಿಕೆಗಳ ಪ್ರಸ್ತಾವಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸದನದಲ್ಲಿ ಮಂಡಿಸಿದರು.

2026ನೇ ಮಾರ್ಚ್ 31ರ ಅಂತ್ಯದೊಳಗಾಗಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಿಗೆ ಸಂಬಂಧಿಸಿದಂತೆ 467.7 ಕೋಟಿ ರೂ.ಗಳನ್ನು ಮಂಜೂರು ಮಾಡಬೇಕು. ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗೆ 12.5 ಕೋಟಿ ರೂ., ಆರ್ಥಿಕ ಇಲಾಖೆಗೆ 32 ಕೋಟಿ ರೂ., ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆಗೆ 50.10 ಕೋಟಿ ರೂ., ಒಳಾಡಳಿತ ಮತ್ತು ಸಾರಿಗೆ ಇಲಾಖೆಗಳಿಗೆ 1,024.61 ಕೋಟಿ ರೂ., ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ 415.66 ಕೋಟಿ ರೂ.ಗಳನ್ನು ಮಂಜೂರು ಮಾಡಲು ಪ್ರಸ್ತಾಪಿಸಲಾಗಿದೆ.

ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ ಇಲಾಖೆಗೆ 300.38 ಕೋಟಿ ರೂ., ಸಹಕಾರ ಇಲಾಖೆಗೆ 120.32 ಕೋಟಿ ರೂ., ಸಮಾಜ ಕಲ್ಯಾಣ ಇಲಾಖೆಗೆ 699.77 ಕೋಟಿ ರೂ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ 106.7 ಕೋಟಿ ರೂ., ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳ ಇಲಾಖೆಗೆ 207 ಕೋಟಿ ರೂ., ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ 113 ಕೋಟಿ ರೂ., ಕಂದಾಯ ಇಲಾಖೆಗೆ 860.97 ಕೋಟಿ ರೂ., ಶಿಕ್ಷಣ ಇಲಾಖೆಗೆ 68 ಕೋಟಿ ರೂ., ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ 753.97 ಕೋಟಿ ರೂ., ನಗರಾಭಿವೃದ್ಧಿ ಮತ್ತು ವಸತಿ ಇಲಾಖೆಗೆ 975.5 ಕೋಟಿ ರೂ., ಲೋಕೋಪಯೋಗಿ ಇಲಾಖೆಗೆ 533 ಕೋಟಿ ರೂ.ಗಳನ್ನು ಮಂಜೂರು ಮಾಡುವಂತೆ ಪ್ರಸ್ತಾವ ಸಲ್ಲಿಸಲಾಗಿದೆ.

ಅನುದಾನಕ್ಕೆ ಬೇಡಿಕೆ

ನೀರಾವರಿ ಇಲಾಖೆಗೆ 1,227 ಕೋಟಿ ರೂ., ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 431.27 ಕೋಟಿ ರೂ., ಕಾರ್ಮಿಕ ಮತ್ತು ಕೌಶಲಾಭಿವೃದ್ಧಿ ಇಲಾಖೆಗಳಿಗೆ 537 ಕೋಟಿ ರೂ., ಇಂಧನ ಇಲಾಖೆಗೆ 5764 ಕೋಟಿ ರೂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 31 ಕೋಟಿ ರೂ.ಗಳನ್ನು ಮಂಜೂರು ಮಾಡುವಂತೆ ಪ್ರಸ್ತಾಪಿಸಲಾಗಿದೆ.

ಶಾಲಾ ವಿದ್ಯಾರ್ಥಿಗಳಿಗೆ ಮೊಬೈಲ್ ಬಳಕೆ ನಿಷೇಧ

• **ವಿಧಾನಪರಿಷತ್ತು:** ರಾಜ್ಯದಲ್ಲಿ 16 ವರ್ಷದೊಳಗಿನ ಶಾಲಾ ವಿದ್ಯಾರ್ಥಿಗಳಿಗೆ ಸಾಮಾಜಿಕ ಜಾಲತಾಣಗಳನ್ನು, ಮೊಬೈಲ್ ಬಳಕೆಯನ್ನು ನಿಷೇಧಿಸಲು ಸರ್ಕಾರ ಮಹತ್ವದ ಹೆಜ್ಜೆ ಇರಿಸಿದ್ದು, ಇದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಪಾಲಕರ ಸಲಹೆ ಆಧರಿಸಿ ಶೀಘ್ರ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಮೇಲ್ಮನೆ ಬಿಜೆಪಿ ಸದಸ್ಯ ಪ್ರತಾಪ್ ಸಿಂಹ ನಾಯಕ ಹಾಗೂ ಜೆಡಿಎಸ್ ಸದಸ್ಯ ಟಿ.ಎನ್. ಜವರಾಯಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಇತ್ತೀಚೆಗೆ ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳು ಒಂದೊಳ್ಳೆ ರೀತಿಯಲ್ಲಿ ಉಪಯೋಗವಾದರೆ ಸರಿ. ಆದರೆ ಹೆಚ್ಚಾಗಿ ಇದು ದುರಂತವಾಗಿ ಕಾಡುತ್ತಿದೆ. ಅಲ್ಲದೇ, ಮಕ್ಕಳ ಮನಸ್ಸಿನ ಮೇಲೆ ಘೋರ ಪರಿಣಾಮ ಬೀರುತ್ತಿದೆ ಎಂದರು.

ಇಡೀ ಭಾರತ ದೇಶದಲ್ಲಿ ಮೊದಲು ನಮ್ಮ ರಾಜ್ಯದಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಯ ಮೂಲಕ ಹದಿಹರೆಯದ ವಿದ್ಯಾರ್ಥಿಗಳಲ್ಲಿ ಜೀವನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಮಾನಸಿಕ ಒತ್ತಡವನ್ನು ನಿಭಾಯಿಸುವ ಸಾಮರ್ಥ್ಯವನ್ನು ವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದರು.

ಮುಂಬರುವ ಅಧಿವೇಶನದಲ್ಲಿಯೂ ಈ ವಿಷಯವಾಗಿ ಸಮಗ್ರ ಚರ್ಚೆ ನಡೆಯಬೇಕು. ಈ ಸಂಬಂಧ ಪಾಲಕರ ಜತೆಯೂ ಸಮಾಲೋಚನೆ ನಡೆಸಿದರು.

ಮೌಲ್ಯಮಾಪನ ನಡೆಸುವ ಪ್ರಸ್ತಾವನೆ ಇಲ್ಲ: ಸಚಿವ



• **ವಿಧಾನಪರಿಷತ್:** ತಾಲೂಕು ಮಟ್ಟದಲ್ಲಿ ಮಕ್ಕಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಡೆಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು. ಸಿಂಧನೂರಿನಲ್ಲಿ ಪರೀಕ್ಷಾ ಮೌಲ್ಯಮಾಪನ ಕೇಂದ್ರ ತೆರೆಯುವಂತೆ ಬಸನಗೌಡ ಬಾದರ್ಲಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಗುಣಮಟ್ಟ ಮತ್ತು ಗೌಪ್ಯತೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ತಾಲೂಕು ಮಟ್ಟದಲ್ಲಿ ಮೌಲ್ಯಮಾಪನ ಕೇಂದ್ರ ತೆರೆಯುವ ಚಿಂತನೆ ಇಲ್ಲ ಎಂದು ತಿಳಿಸಿದರು. ತಾಲೂಕು ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ ಮೌಲ್ಯಮಾಪಕರಿಗೆ ತೆರಳಲು ಸಮಸ್ಯೆ ಆಗುತ್ತದೆ. ಸಾರಿಗೆ ಖರ್ಚು ಹೆಚ್ಚಾಗುತ್ತದೆ. ಸಮಯ ವ್ಯರ್ಥವಾಗುತ್ತದೆ ಎಂಬ ಕಾರಣಕ್ಕೆ ಮೌಲ್ಯಮಾಪನವನ್ನು ತಾಲೂಕು ಕೇಂದ್ರಗಳಲ್ಲಿ ಸ್ಥಾಪಿಸಲು ಸಾಧ್ಯವಿಲ್ಲ. ನಮಗೆ ಗೌಪ್ಯತೆ ಕಾಪಾಡಿ ಕೊಳ್ಳುವುದು ಮುಖ್ಯ ಎಂದು ಸಚಿವರು ಸ್ಪಷ್ಟಪಡಿಸಿದರು.

ಬುಡಕಟ್ಟು ಜನರಿಗೆ ಹಕ್ಕು ಪತ್ರ ಸಿಕ್ಕಿಲ್ಲ: ಶಾಂತಾರಾಮ್

• **ವಿಧಾನಪರಿಷತ್:** ಆಳುವ ಸರ್ಕಾರಗಳ ನಿರ್ಲಕ್ಷ್ಯದಿಂದಾಗಿ ಬುಡಕಟ್ಟು ಜನರು ಬಲವಂತವೋ, ಆಮಿಷಕ್ಕೋಳಗಾಗಿಯೋ ಮತಾಂತರಕ್ಕೆ ಒಳಗಾಗುತ್ತಿದ್ದಾರೆ. ಪರಿಣಾಮ ಅವರು ತಮ್ಮ ಬುಡಕಟ್ಟು ಸಂಸ್ಕೃತಿಯಿಂದ ವಿಮುಖರನ್ನಾಗಿಸುವ ಪ್ರಯತ್ನಗಳು ನಿರಂತರವಾಗಿದ್ದು, ಸರ್ಕಾರ ಅದಕ್ಕೆ ಕಡಿವಾಣ ಹಾಕಬೇಕು ಎಂದು ಬಿಜೆಪಿ ಸದಸ್ಯ ಶಾಂತಾರಾಮ್ ಬುಡ್ನ ಸಿದ್ದಿ ಒತ್ತಾಯಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಅವರು, ದೇಶ ಸ್ವತಂತ್ರಗೊಂಡು ದಶಕಗಳು ಕಳೆದರೂ ಬುಡಕಟ್ಟು ಜನರಿಗೆ ಅರಣ್ಯ ಹಕ್ಕು ಕಾಯ್ದೆಯ ಅಡಿ ಹಕ್ಕು ಪತ್ರಗಳು ಸಿಕ್ಕಿಲ್ಲ. ಈ ಕಾಯ್ದೆಯ ಅಡಿ ಕೆಲವರಿಗೆ ಅರಣ್ಯ ಹಕ್ಕು ಸಿಕ್ಕಿದ್ದರೂ, ಅವರ ಹೆಸರಲ್ಲಿ ಪಹಣಿ ಬಂದಿಲ್ಲ. ಪರಿಣಾಮ ಗಂಗಾ ಕಲ್ಯಾಣ ಯೋಜನೆ, ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಯೋಜನೆಗಳಿಂದ ವಂಚಿತರಾಗುತ್ತಿದ್ದಾರೆ. ಸೂಕ್ತ ದಾಖಲೆಗಳಿಲ್ಲದ ಕಾರಣ ಪಕ್ಕಾ ಮನೆಗಳೂ ಸಿಗದೇ ಅವರು, ಇಂದಿಗೂ ಟಾರ್ಪಲಿನ್ ಟೆಂಟ್‌ಗಳಲ್ಲಿ ಜೀವನ ಸಾಗಿಸುವಂತಾಗಿದೆ ಎಂದರು.

ರಾಜ್ಯದ ಅಭಿವೃದ್ಧಿಗೆ ಬಜೆಟ್‌ನಲ್ಲಿ ಹಣ ಮೀಸಲಿಟ್ಟಿಲ್ಲ | ಸರ್ಕಾರದ ವಿರುದ್ಧ ಬಿಜೆಪಿ ಶಾಸಕ ಸುನೀಲ್ ಕುಮಾರ್ ಟೀಕೆ

ಸರ್ಕಾರಿ ಯೋಜನೆ ಅನುಷ್ಠಾನದಲ್ಲಿ ತಾಳಮೇಳವೇ ಬರುತ್ತಿಲ್ಲ

• **ವಿಧಾನಸಭೆ:** ರಾಜ್ಯ ಸರ್ಕಾರದಲ್ಲಿ ಯೋಜನೆ, ಅನುದಾನ ಮತ್ತು ಅನುಷ್ಠಾನದ ನಡುವೆ ತಾಳಮೇಳವೇ ಬರುತ್ತಿಲ್ಲ, ಒಂದಕ್ಕೊಂದು ಸಂಬಂಧವೇ ಇಲ್ಲದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಯವ್ಯಯ ಮಂಡಿಸಿದ್ದಾರೆ ಎಂದು ಬಿಜೆಪಿ ಶಾಸಕ ಸುನೀಲ್ ಕುಮಾರ್ ಟೀಕಿಸಿದರು.

ಆಯವ್ಯಯದ ಮೇಲಿನ ಚರ್ಚೆಯ ವೇಳೆ ಮಾತನಾಡಿ, ಆಯವ್ಯಯದಲ್ಲಿರುವ ಅಂಕಿ ಅಂಶಗಳ ಬಗ್ಗೆಯೇ ಅನುಮಾನವಿದೆ. ಮುಖ್ಯಮಂತ್ರಿಯವರು ಒಂದು ಲೆಕ್ಕ ಹೇಳಿದರೆ, ಮಾಧ್ಯಮದಲ್ಲಿ ಇನ್ನೊಂದು ಸಂಖ್ಯೆ ಬಂದಿದೆ. ಅದಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ನೀಡಿದ ಸ್ಪಷ್ಟೀಕರಣದಲ್ಲಿ ಬೇರೆಯದೇ ಸಂಖ್ಯೆಯಿದೆ. ಆದ್ದರಿಂದ ಈ ಅಂಕಿ ಅಂಶಗಳ ಬಗ್ಗೆ ಗೊಂದಲವಿದೆ ಎಂದರು.

ಆಯವ್ಯಯದಲ್ಲಿ 74,000 ಕೋಟಿ ರೂ.ಗಳನ್ನು ಬಂಡವಾಳ ವೆಚ್ಚಕ್ಕೆ ಖರ್ಚು ಮಾಡುವುದಾಗಿ ಹೇಳಿದ್ದಾರೆ. ಅದೇ ರೀತಿ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವ ಘೋಷಣೆ ಮಾಡಲಾಗಿದೆ. ಆದರೆ, ಅದಕ್ಕೆ ಅನುದಾನ ಮೀಸಲಿಟ್ಟಿಲ್ಲ, ಹೋರಾಟದ ದಿಕ್ಕು ತಪ್ಪಿಸುವುದಕ್ಕಾಗಿ ಈ ಭರವಸೆ ನೀಡಲಾಗಿದೆ. ಅನುದಾನ ನೀಡದ್ದನ್ನು ನೋಡಿದರೆ ನೇಮಕಾತಿ ಮಾಡುವುದರ ಬಗ್ಗೆ ಅನುಮಾನ ಬರುತ್ತಿದೆ. ಅದೇ ರೀತಿ ವೇತನ ಆಯೋಗದ ಶಿಫಾರಸ್ಸು ಒಪ್ಪುತ್ತೇವೆ ಎನ್ನುವವರು ಅದಕ್ಕೆ ಬೇಕಾಗಿರುವ 20,000 ಕೋಟಿ ರೂ.ಗಳನ್ನು ಎಲ್ಲಿ ಹೊಂದಾಣಿಕೆ ಮಾಡುತ್ತೀರಿ ಎಂದು ಹೇಳಿಲ್ಲ. ಕೇಂದ್ರದ ವಿಬಿ ಜಿ ರಾಮ್ ಜಿ ಯೋಜನೆಯನ್ನು ವಿರೋಧಿಸುವ ರಾಜ್ಯ ಸರ್ಕಾರ ಮನರೇಗಾ ಯೋಜನೆಗೆ ಅನುದಾನ ಮೀಸಲಿಟ್ಟಿಲ್ಲ ಎಂದು ಉಲ್ಲೇಖಿಸಿದರು.

ರಾಜ್ಯದಲ್ಲಿ ಸುಮಾರು 38,000 ಕೋಟಿ ರೂ. ಬಾಕಿ ಬಿಲ್ ಪಾವತಿಸಬೇಕಿದೆ. ಅದಕ್ಕೆ ಅನುದಾನ ಎಲ್ಲಿದೆ? ಎರಡು ತಿಂಗಳು ಬಿಟ್ಟು ಹೋಗಿರುವ ಗೃಹಲಕ್ಷ್ಮಿ ಯೋಜನೆಯ ಹಣವನ್ನು ಎಲ್ಲಿ ಜೋಡಿಸುತ್ತೀರಿ ಎಂದು ತಿಳಿಸಿಲ್ಲ. ಮೇಲ್ದರ್ಜೆಗೇರಿಸಿದ ಹತ್ತಾರು ಯೋಜನೆಗಳಿಗೆ ಅನುದಾನ ಇಟ್ಟಿಲ್ಲ. ಆದ್ದರಿಂದ ನೀವು ಇಂದಿರಾ ಕಿಟ್ ಜೊತೆಗೆ ಎಲ್ಲರಿಗೂ ಒಂದೊಂದು ಚೊಂಬು ಕೊಡ ನೀಡಿ ಎಂದು ಲೇವಡಿ ಮಾಡಿದರು.

ಸಾಮಾನ್ಯ ಜನರಿಗೆ ಆಯವ್ಯಯ ಎಂದರೆ ಸಾಲ, ಲೆಕ್ಕಾಚಾರ ಇದನ್ನೆಲ್ಲ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಈ ಸರ್ಕಾರದ ಯೋಜನೆಗಳೇನು? ಅದಕ್ಕೆಷ್ಟು ಅನುದಾನ ಇಟ್ಟಿದ್ದಾರೆ? ಅದರಲ್ಲಿ ಎಷ್ಟು ಅನುಷ್ಠಾನವಾಗಿದೆ ಇದನ್ನಷ್ಟೇ ಅರ್ಥ ಮಾಡಿಕೊಳ್ಳುತ್ತಾರೆ. ಆದರೆ, ಇದಕ್ಕೆ ಒಂದಕ್ಕೊಂದು ಸಂಬಂಧ ಇಲ್ಲದ ವಾತಾವರಣ ಸೃಷ್ಟಿ ಮಾಡಿದೆ. ಸರ್ಕಾರ ತರಾತುರಿಯಲ್ಲಿ ಜಾತಿಗಣತಿ ಮಾಡಲು ಆಯೋಗ ರಚಿಸಿ ಒಂದು ತಿಂಗಳೊಳಗೆ ಸಮೀಕ್ಷೆ ಮುಗಿಸಿ ವರದಿ ನೀಡಲು ಸೂಚಿಸಿತು. ಏಳು ತಿಂಗಳಾದರೂ ವರದಿ ನೀಡಿಲ್ಲ, ಈ ಬಗ್ಗೆ ಆಯವ್ಯಯ ದಲ್ಲಿ ಅಥವಾ ರಾಜ್ಯಪಾಲರ ಭಾಷಣದಲ್ಲಿ ಒಂದು ಸಾಲೂ ಉಲ್ಲೇಖಿಸಿಲ್ಲ. 500 ಕೋಟಿ ರೂ. ವೆಚ್ಚ ಮಾಡಿ ಮಾಡಿದ ಸಮೀಕ್ಷೆಯ ವರದಿಯನ್ನು ಮತ್ತೆ 50 ರೂ. ಹೆಚ್ಚುವರಿ ಇಟ್ಟು ಕಸದ ಬುಟ್ಟಿಗೆ ಸೇರಿಸಲಾಗುತ್ತದೆ ಎಂದು ಟೀಕಿಸಿದರು.



ವ್ಯಾಕರಣತಜ್ಞ ಸಿದ್ದರಾಮಯ್ಯ

ಸಿದ್ದರಾಮಯ್ಯ ಅವರನ್ನು ಆರ್ಥಿಕ ತಜ್ಞ ಎಂದು ಕರೆಯಲಾಗುತ್ತದೆ. ಅವರನ್ನು ಆರ್ಥಿಕ ತಜ್ಞ ಎಂದು ಹೇಳುವ ಜೊತೆಗೆ ವ್ಯಾಕರಣ ತಜ್ಞ ಎಂದೂ ಕರೆಯಬಹುದು. ಯಾಕೆಂದರೆ ಈ ಬಾರಿ ಆಯವ್ಯಯದಲ್ಲಿ ಅವರು ಹೊಸ ಹೊಸ ಶಬ್ದಗಳನ್ನು ಉಲ್ಲೇಖಿಸಿದ್ದಾರೆ. ತೆರಿಗೆಯ ಟ್ರಿಕ್ಸ್, ಟ್ರೋಟಿಂಗ್ ಎಕಾನಮಿ, 11ಜಿ, ಫಲಧಾರೆ, ಭೀಷ್ಮ ತತ್ತ್ವ, ಬೆಂಕಿಯನ್ನು ಬೇಕಾಗಿಸುವುದು ಎಂಬಿತ್ಯಾದಿ ಪದಗಳಿವೆ. ಮುಂದಿನ ಬಾರಿ ಆಯವ್ಯಯ ಮಂಡಿಸುವಾಗ ನಮಗೆ ಡಿಕ್ಷನರಿ ಕೊಟ್ಟುಬಿಡಿ ಎಂದು ಕಾಲೆಳೆದರು.

> ರಾಷ್ಟ್ರೀಯ ಶಿಕ್ಷಣ ನೀತಿಯನ್ನು ತಿರಸ್ಕರಿಸಿರುವ ಸರ್ಕಾರ ರಾಜ್ಯ ಶಿಕ್ಷಣ ನೀತಿಯನ್ನು ತರುವುದಾಗಿ ಹೇಳಿ ಮೂರು ವರ್ಷಗಳಾದರೂ ಇನ್ನೂ ಜಾರಿಗೆ ತಂದಿಲ್ಲ. ರಾಜ್ಯದ ವಿದ್ಯಾರ್ಥಿಗಳು ಯಾವ ನೀತಿಯ ಆಧಾರದಲ್ಲಿ ಶಿಕ್ಷಣ ಪಡೆಯಬೇಕೆಂಬ ಸ್ಪಷ್ಟತೆ ಇಲ್ಲದಂತಾಗಿದೆ.
>
> ■ **ಸುನೀಲ್ ಕುಮಾರ್,** ಬಿಜೆಪಿ ಶಾಸಕ

ಜಾಹೀರಾತು ನೀತಿ ಮರು ಪರಾಮರ್ಶಿಸಲಿ

• **ವಿಧಾನಪರಿಷತ್:** ಹೊಸ ಜಾಹೀರಾತು ನೀತಿಗೆ ಒಪ್ಪಿಗೆ ಸೂಚಿಸಿರುವ ಸಚಿವ ಸಂಪುಟ ನಿರ್ಣಯವನ್ನು ಮರು ಪರಿಶೀಲಿಸಬೇಕು ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಶಿವಕುಮಾರ್ ಕೆ. ಒತ್ತಾಯಿಸಿದರು. ಮೇಲ್ಮನೆಯಲ್ಲಿ ಆಯವ್ಯಯದ ಕುರಿತು ಮಾತನಾಡಿ, ಇಂದಿನ ದಿನಗಳಲ್ಲಿ ವಸ್ತು ನಿಷ್ಠ ಹಾಗೂ ಪ್ರಾಮಾಣಿಕವಾಗಿ ಮುದ್ರಣ ಮಾಧ್ಯಮಗಳ ನಿರ್ವಹಣೆ ಕಷ್ಟಕರ. ಹೀಗಾಗಿ ಸರ್ಕಾರ ರೂಪಿಸಿರುವ ಹೊಸ ಜಾಹೀರಾತು ನೀತಿಯಿಂದಾಗಿ ಸಮಾಜವನ್ನು ಜಾಗೃತಗೊಳಿಸುವಲ್ಲಿ ಪ್ರಾಮಾಣಿಕವಾಗಿ ದುಡಿಯುತ್ತಿರುವ ಪತ್ರಿಕೆಗಳಿಗೆ ಸಮಸ್ಯೆಯಾಗುತ್ತದೆ. ಈ ಕುರಿತಂತೆ ಸರ್ಕಾರ ತನ್ನ ನಿರ್ಧಾರವನ್ನು ಮತ್ತೊಮ್ಮೆ ಪರಾಮರ್ಶಿಸಬೇಕು. ಹಿರಿಯ ಪತ್ರಕರ್ತರಿಗೆ ಮಾಶಾಸನಕ್ಕೆ ಅನೇಕ ನಿಬಂಧನೆಗಳನ್ನು ವಿಧಿಸಲಾಗಿದೆ. ಮಾಶಾಸನಕ್ಕೆ ಸ್ವಂತ ಮನೆ ಇರಬಾರದು ಎಂಬ ಷರತ್ತು ವಿಧಿಸಿದೆ. ಹಾಗಾದರೆ ಪತ್ರಕರ್ತರು ಜೋಪಡಿಯಲ್ಲಿರಬೇಕೇ? ಈ ಹಿಂದೆ ನೋಡಿದರೂ, ಇಂದಿರಾ ಗಾಂಧೀ ಅವರ ಆಡಳಿತದಲ್ಲಿ ಅನೇಕ ಪತ್ರಕರ್ತರಿಗೆ ನವದೆಹಲಿಯಲ್ಲಿ ಮನೆ ನೀಡಲಾಗಿತ್ತು ಎಂದರು.

[illegible]

IN THE COURT OF THE PRL. CIVIL JUDGE AND JMFC AT SIRA
CRL. MIS. No. 52/2026.

Petitioners: 1. **Narasimharaju**, S/o Late. Rangappa, aged about 43 years, 2. **Kadgiyappa** S/o Late. Rangappa, aged about 55 years, 3. **Kariyanna**, S/o Late Rangappa, aged about 50 years. All are R/at, Dobbasavanahalli Village, Kallambella Hobli, Sira Taluk. -V/s-

Respondent: 1. **The Deputy Tahasildar, Nadakacheri**, Kallambella Hobli, Sira Taluk.

NOTICE

The petitioners has filed the above said petition under section 13(3) of the Registration of Birth and Death Act to obtain the Death certificate of the petitioners mother by name "DODDATIMMAKKA W/o LATE RANGAPPA" was died on 20.09.2019 at Dobbasavanahalli, Kallambella Hobli, Sira Taluk. If anybody has any objection or right with respect to the above said fact and petition may file objection in the said case by personally or by counsel. The case is posted on **27/04/2026** at **11:00 AM**. Otherwise the matter will be disposed in accordance with law.

Given under my hand and the seal of the court on this 10/03/2026 at Tumkur

By order of the Court, Chief Ministerial Officer, C.J. & JMFC Court, Sira

Advocate for Petitioner: **JAYARAMAIAH** Gollaranahalli, Hallidoddkeri post, Kallambella Hobli, Sira Taluk, Mob: 9743174418

IN THE COURT OF THE III ADDL. CIVIL JUDGE AND JMFC AT ANEKAL
C.MIS. No. 428/2026

BETWEEN: 1. Smt. Seeramma, W/o Late Venkatappa, aged about 80 years, 2. Sri.Krishnappa, S/o Late Venkatappa aged about 58 years, 3. Smt. Sharada, D/o Late Venkatappa, aged about 40 years, Petitioners No. 1 to 3 are R/at Bidaraguppe village, Attibele Hobli, Anekal Taluk, Bangalore District. 4. Smt. Amaravathi, D/o Late Venkatappa, aged about 48 years, R/at Hosahalli village, Malur Taluk, Kolar District. 5. Smt. Nagamma, D/o Late Venkatappa, aged about 38 years, R/at ... village, ... Hobli, Bangalore District. ... **PETITIONERS**

AND: **THE TAHASILDAR**, Anekal, Anekal Taluk. ... **RESPONDENT**

PUBLIC NOTICE

Whereas the petitioners have filed the above petition seeking a direction the respondent to make necessary entries in the concerned records regarding the death of the husband of petitioner No. 1 and father of petitioners No. 2 to 5, namely VENKATAPPA S/o LATE MUNIYAPPA, died on ... at Bidaraguppe village, Attibele Hobli, Anekal Taluk, and Bangalore District, the petitioners have filed the above petition in C.MISC. NO. 428/2026, on the file of the Hon'ble III Additional civil judge and JMFC at Anekal. Therefore Any person having any objection to the relief sought in the above petition is hereby called upon to appear before the Hon'ble court either in person or through a duly instructed Advocate on dated: **02/05/2026** at **11:00 A.M** and file their objections, if any. Take notice that default of appearance on the date mentioned above, the matter will be heard and decided in accordance with law in their absence.

Given under my hand and seal of this court on this 17/03/2026.

By order of the Court, Sheristedar, Civil Judge Jr.Dvn and J.M.F.C Court, Anekal

M. NAGARAJU, Advocate

ಸಾರ್ವಜನಿಕ ಪ್ರಕಟಣೆ

[illegible]

ದಾಖಲೆಗಳು ಕಳೆದುಹೋಗಿವೆ

[illegible] ARO(J)B10PR.266/1980-81 [illegible] 9535893668 [illegible]

IN THE COURT OF THE XXX ADDL. CITY CIVIL JUDGE AT BENGALURU (CCH-31)
O.S. No. 4025/2019

BETWEEN: **SMT. M. KALAIVANI**, aged about 58 years, W/o G.Seelan, Residing at No.8, 3rd Main Road, Pipeline West, Kasturba Nagar, Mysore Road, Bengaluru-560026.... **PLAINTIFF**

AND: 1. **SRI. PRAKASH EDWIN**, aged about 56 years, S/o Sri. Chinnappa.

2. **SRI. ANTHONY GEROGE**, aged about 54 years, S/o Sri. Chinnappa, Both are residing at No.53 3rd B-Cross, Anandapura T.C.Palya Post, K.R.Puram Bengaluru-560036.... **DEFENDANTS**

NOTICE TO PROPOSED DEFENDANT No.3 ON IA-6 U/O 1 RULE 10 CPC.
UNDER ORDER V RULE 20 OF CODE OF CIVIL PROCEDURE

To, **Sri. C. Subbanna**, S/o Chandra Mohan, aged about 45 years, Residing at old Syndicate Bank Road K.R.Puram, Bengaluru, Also at No.173/23, 3rd Main Road, 3rd Cross, T.C.Palya Main Road, Anandapuram, Bengaluru-560 036

The plaintiff has filed the above suit seeking direction to hand over original documents in respect of the suit schedule property. Take notice that in the above case that you have been made as proposed Defendant No.3 as stated above and the above case is posted for your appearance on **15-06-2026** at 11:00 A.M. before the Addl. City Civil Judge, at Bengaluru (CCH-31) and failing to appear on that day, the case will be proceeded and determined in your absence.

SCHEDULE

All that piece and parcel of the property bearing Site No.23, formed in Sy.No.14, Khatha No.173/23, measuring East to West: 30 feet and North to South 40 feet situated at Anandapura, Sonnathammanahalli @ Thambuchetty Palya, K.R.Puram Hobli, Bengaluru East Taluk, earlier comes under K.R.Puram CMC Limits, Bangalore and bounded on: **East by:** Road, **West by:** Site No.22, **North by:** Private property, **South by:** Site No.24.

Given under my hand and seal of the court on this 18-03-2026.

By order of the Court, Senior Sheristedar, City Civil Court, Bengaluru.

SMT. PATTU. M. GOPAL, Advocate
No.4/5, 10th Cross, Karmchand Layout, Lingarajapuram, Bengaluru 560084.

[illegible]

ದಿನಾಂಕ : 23.03.2026.

BEFORE THE JOINT DIRECTOR OF LAND RECORDS (JDLR) BANGALORE RURAL DISTRICT AT BANGALORE
Revision Petition No. 56/2025-26

BETWEEN:- Sri. Ramesh S.D. and others ...Petitioners

AND:- DDLR and others. ...Respondents

To, **R-5. SRI. NARAYANAPPA**, S/o Narayanappa Aged about 80 years, **R-6. M.S GOVIDARAJA SHETTY**, S/o Subbaraysshetty, Aged about 78 years, **R-7. SRI. SIDDAPPA**, S/o Chikkarangaiah, Aged about 85 years, All are residing at Kodagibommanahalli Village, Thyamagondlu Hobli, Nelamangala Taluk Bangalore Rural District -562111

...Respondents No. 5 to 7

NOTICE

Take notice that, the petitioners have filed the above petition against you and others to set aside the order passed by the DDLR in APL/902/2024 dated 11/06/2025 in respect of the property bearing Survey No.12 which was Phoded as Survey No.12/1 to 12/22 situated at Kodagibommanahalli Village, Thyamagondlu Hobli, Nelamangala Taluk, Bangalore Rural District and such other directions and reliefs etc.,

Therefore, take notice/summons that you are hereby called upon to appear before this court at 11-00 'O' clock on 24-03-2026 the forenoon of either in person or through a duly constituted pleader, failing which the matter will be heard in your absence and the decided ex parte.

Given under my hand and seal of the court on this date 17-03-2026

By Order of the Court
Sd/- The Joint Director of Land Records (JDLR)
Bangalore Rural District At Bangalore

Advocate for Petitioners B. GANGARAJ, BA. LLB., Devanga Street, Nelamangala Town, Bangalore Rural District -562123

Bluspring

ಬ್ಲೂಸ್ಪ್ರಿಂಗ್ ಎಂಟರ್‌ಪ್ರೈಸಸ್ ಲಿಮಿಟೆಡ್

Corporate Identity Number (CIN): L81100KA2024PLC184648

[illegible] +91 80 6105 6001

ವೆಬ್‌ಸೈಟ್: www.bluspring.com; ಇ-ಮೇಲ್: corporatesecretarial@bluspring.com

ಅಂಚೆ ಮತಪತ್ರದ ಸೂಚನೆ ಮತ್ತು ರಿಮೋಟ್ ಇ-ಮತದಾನದ ಮಾಹಿತಿ

[illegible] 2013ರ ಸೆಕ್ಷನ್ 108, 110 [illegible] 2014ರ ನಿಯಮಗಳು 20 ಮತ್ತು 22 [illegible] ಸೆಪ್ಟೆಂಬರ್ 22, 2025ರ [illegible] 03/2025 [illegible] 2015ರ ನಿಯಮ 44 [illegible] ಮಾರ್ಚ್ 20, 2026ರಂತೆ [illegible] ಮಾರ್ಚ್ 23, 2026ರಂದು [illegible]

ಕ್ರ. ಸಂ.	ಅಂಚೆ ಮತದಾನದ ಮೂಲಕ ಷೇರುದಾರರ ಅನುಮೋದನೆ ಕೋರುವ ನಿರ್ಣಯ	ನಿರ್ಣಯದ ವಿಧಾನ
1	'ಬ್ಲೂಸ್ಪ್ರಿಂಗ್ ಎಂಟರ್‌ಪ್ರೈಸಸ್ ಲಿಮಿಟೆಡ್ – ಉದ್ಯೋಗಿ ಸ್ಟಾಕ್ ಆಪ್ಷನ್ ಯೋಜನೆ 2026' [illegible]	ವಿಶೇಷ
2	'ಬ್ಲೂಸ್ಪ್ರಿಂಗ್ ಎಂಟರ್‌ಪ್ರೈಸಸ್ ಲಿಮಿಟೆಡ್ – ಉದ್ಯೋಗಿ ಸ್ಟಾಕ್ ಆಪ್ಷನ್ ಯೋಜನೆ 2026' [illegible]	ವಿಶೇಷ
3	'ಬ್ಲೂಸ್ಪ್ರಿಂಗ್ ಎಂಟರ್‌ಪ್ರೈಸಸ್ ಲಿಮಿಟೆಡ್ – ಉದ್ಯೋಗಿ ಸ್ಟಾಕ್ ಆಪ್ಷನ್ ಯೋಜನೆ 2026' [illegible]	ವಿಶೇಷ
4	'ಬ್ಲೂಸ್ಪ್ರಿಂಗ್ ಎಂಟರ್‌ಪ್ರೈಸಸ್ ಲಿಮಿಟೆಡ್ – ಉದ್ಯೋಗಿ ಸ್ಟಾಕ್ ಆಪ್ಷನ್ ಯೋಜನೆ 2026' [illegible]	ವಿಶೇಷ
5	'ಬ್ಲೂಸ್ಪ್ರಿಂಗ್ ಎಂಟರ್‌ಪ್ರೈಸಸ್ ಲಿಮಿಟೆಡ್ – ಉದ್ಯೋಗಿ ಸ್ಟಾಕ್ ಆಪ್ಷನ್ ಯೋಜನೆ 2026' [illegible]	ವಿಶೇಷ

[illegible]

[illegible]	ಬುಧವಾರ, ಮಾರ್ಚ್ 25, 2026 ರಂದು 09:00 ಗಂಟೆಗೆ (ಐಎಸ್‌ಟಿ)
[illegible]	ಗುರುವಾರ, ಏಪ್ರಿಲ್ 23, 2026 ರಂದು 05:00 ಗಂಟೆಗೆ (ಐಎಸ್‌ಟಿ)
[illegible]	ಶುಕ್ರವಾರ, ಮಾರ್ಚ್ 20, 2026
[illegible]	[illegible]

[illegible] www.bluspring.com [illegible] www.evoting.nsdl.com [illegible] helpdesk.evoting@nsdl.com [illegible] 022 4886 7000 [illegible] evoting@nsdl.com [illegible] 080 23460815/816/817/818 [illegible]

ಬ್ಲೂಸ್ಪ್ರಿಂಗ್ ಎಂಟರ್‌ಪ್ರೈಸಸ್ ಲಿಮಿಟೆಡ್ ಪರವಾಗಿ
ಸಹಿ/-
[illegible]
ACS 29253

ಸ್ಥಳ : ಬೆಂಗಳೂರು
ದಿನಾಂಕ : ಮಾರ್ಚ್ 23, 2026

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ,
ಲೋ.ಇ., ಉಡುಪಿ ವಿಭಾಗ – ಉಡುಪಿ – 576101.
ದೂರವಾಣಿ & ಫ್ಯಾಕ್ಸ್: (0820) 2531802

ನಂ : [illegible] 55:2025-26: [illegible] ದಿ: 23.03.2026

ಅಲ್ಪಾವಧಿ ಸರ್ವೀಸ್ ಟೆಂಡರ್ ಪ್ರಕಟಣೆ

2025-26ನೇ [illegible] ರೂ. 46.00 ಲಕ್ಷದ (ಜಿ.ಎಸ್.ಟಿ ಹೊರತುಪಡಿಸಿ) DPR [illegible] Registered Empanelled Consultant for DPR under KPWD [illegible] "ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್" "kppp.karnataka.gov.in" [illegible] – 2023ರಲ್ಲಿ [illegible] "kppp.karnataka.gov.in" [illegible] 02.04.2026ರ ಸಂಜೆ 5.30ರ ವರೆಗೆ, [illegible]

[illegible] 25-26 ದಿ: 23.03.2026

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಕಸಂ-1/ಟೆಂಡರ/2025-26/8841 ದಿನಾಂಕ: 20/03/2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - [illegible] ರೂ. 400.00 ಲಕ್ಷ [illegible] ಟೆಂಡರ್ ಆಹ್ವಾನಿಸಲಾಗಿದೆ.

[illegible] 1) [illegible] : 26-03-2026 ರಂದು (11.00 ಗಂಟೆಗೆ) 2) [illegible] : 27-03-2026 (ಸಾಯಂಕಾಲ 5.30 ಗಂಟೆಯವರೆಗೆ) 3) [illegible] : 30-03-2026 (ಸಾಯಂಕಾಲ 5.00 ಗಂಟೆಯವರೆಗೆ) 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 01-04-2026 (ಸಾಯಂಕಾಲ 4.30 ಗಂಟೆಗೆ) 5) [illegible] (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" 6) [illegible]

[illegible] kppp.karnataka.gov.in [illegible] www.kpwd.gov.in [illegible]

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

ನಮೂನೆ ಸಂಖ್ಯೆ URC-2

[illegible] XXI [illegible] 374(ಬ) [illegible] 2014 [illegible] 4(1) [illegible]

1. [illegible] 2013 [illegible] 366 [illegible] LLP [illegible] 2013 [illegible] XXI [illegible] (CRC) [illegible]

[illegible]

ಅರ್ಜಿದಾರರ ಹೆಸರು(ಗಳು):
1. [illegible]
2. [illegible]
3. [illegible]
4. [illegible]

ದಿನಾಂಕ: ಮಾರ್ಚ್ 23, 2026.

IN THE COURT OF THE HON'BLE DEPUTY COMMISSIONER AT KOLAR.
R.A.P. NO: 109/2025.

APPELLLANT : Sri Chandrappa & another.
V/s
RESPONDENTS : The Assistant Commissioner Kolar, Sub-Division Kolar. And others.

NOTICE TO RESPONDENT NO 4,5,6,7,8,10,11,14 and THROUGH PAPER PUBLICATION AS PER UNDER ORDER 5 RULE 20 READ WITH SECTION 151 OF CPC.

CORRECT ADDRESS OF THE RESPONDENT NO. 4, 5, 6, 7, 8, 10, 11, 14.

R-4 : Syed Akram S/o Syed Kaleem ulla, aged about 50 years, R/at Jahangeer Mohalla Palya Kasaba Hobli, Mulbagal Town, Mulbagal. **R-5 : Smt. R. Shakunthalamma** W/o Papegowda, Aged about 56 years, R/at Yadahalli Village, Thayalur Hobli Mulbagal taluk. **R-6 : B Suramanyam Reddy**, S/O LateVenkataramareddy, Aged about35 years, R/at Nernahalli Village, Thayalur Hobli, Mulbagal taluk, **R-7 : Smt. Sowmya** D/o G.R. Vinod Krishnaeddy, Aged about 47 years, R/at Budadimittu Village, Bangarpet taluk, Kolar District. **R-8 : Sri.K. Anilkumar**, S/o Poolchand, Aged about 40 years, R/at Old Hospital Street, Mulbagal Town, Mulbagal. **R.10 : A. Kishanlal**, S/o Anuraj Jain, Aged about 52 years R/at Bazar Street, Mulbagal Town, Mulbagal. **R.11 : H.N. Srinivasa**, S/o Dodda Narayanappa Aged about 70 years R/at Hanumanahalli Village, Duggasandra Hobli, Mulbagal taluk, **R.14 : H.V Ramesh** S/o Venkataramaiah, Aged about 45 years R/at Ramasandra Road Mulbagal Town.

Whereas, the appellant had instituted the above appeal against impugned mutation order passed by the 1st respondent in favour of RA No. 211/2009-10, Dated26/12/3/2014 in favour of respondents no:4, 5, 6, 7, 8, 10, 11, 14 with respect to the land bearing sy no: 639 measuring to an extent of 3 acres 3 guntas including 5 guntas karab situated at mulbagal, kasaba Hobli, mulbagal Taluk are you the respondent no: 4, 5, 6, 7, 8, 10, 11, 14 and evading to receiving the notice to issued by the this Hon'ble court. Hence you are hereby noticed to appear on in person or by an advocate **on : 24.03.2026** at 3 pm to answer the same. Failing which the appeal will be disposed as experte.

By order of this Hon'ble court.
Deputy Commissioner kolar.
T.M Shivanna, Advocate, Kolar.

[illegible]

ಸಹಾಯಕ ನಿರ್ದೇಶಕರ ಕಾರ್ಯಾಲಯ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ
ಗದಗ ರಸ್ತೆ, ಜಿಲ್ಲಾ ಕ್ರೀಡಾಂಗಣ, ಕೊಪ್ಪಳ

ದೂರವಾಣಿ :08539-230121 email :adysskoppal@gmail.com

ಸಂಖ್ಯೆ: [illegible]/2025-26/1008 ದಿನಾಂಕ: 23.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

[illegible]

ಟೆಂಡರ್‌ನ ವಿವರ : (1) [illegible] ರೂ.58,50,000-00 [illegible] ರೂ.1,17,000/- (2) [illegible] ದಿನಾಂಕ : 24.03.2026 ಸಮಯ: 12.00 [illegible] (3) [illegible] ದಿನಾಂಕ : 07.04.2026 ಸಮಯ: 4.00 [illegible] (4) [illegible] ದಿನಾಂಕ : 09.04.2026 ಸಮಯ: 4.00 [illegible] (5) [illegible]

ಕ್ರ. ಸಂ	ವಿವರಗಳು	[illegible] ಸಂಖ್ಯೆ	[illegible]	[illegible] 325 ದಿನಗಳಿಗೆ [illegible]
1	[illegible]	80	225/-	58,50,000-00
	ಒಟ್ಟು	80		58,50,000-00

[illegible] https://kppp.karnataka.gov.in [illegible]

ಸಹಿ/- ಸಹಾಯಕ ನಿರ್ದೇಶಕರು
[illegible]
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಕೊಪ್ಪಳ ಜಿಲ್ಲೆ

[illegible]/2025-26

ಇರಾನ್‌ನಿಂದ ಹಾರ್ಮುಜ್ ಜಲಸಂಧಿ ದಾಟುವ ಹಡಗುಗಳಿಗೆ 2 ಮಿಲಿಯನ್ ಡಾಲರ್ ಸುಂಕ ವಸೂಲಿ!

ಇಂಧನ ಮಾರುಕಟ್ಟೆಯಲ್ಲಿ ತಲ್ಲಣ

• **ಟೆಹ್ರಾನ್:** ಪಶ್ಚಿಮ ಏಷ್ಯಾದಲ್ಲಿ ಯುದ್ಧದ ತೀವ್ರತೆ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಇರಾನ್ ಸರ್ಕಾರ ಹಾರ್ಮುಜ್ ಜಲಸಂಧಿಯ ಮೂಲಕ ಸಂಚರಿಸುವ ಆಯ್ದ ಹಡಗುಗಳಿಗೆ ಪ್ರತಿ ಪ್ರಯಾಣಕ್ಕೆ 2 ಮಿಲಿಯನ್ ಡಾಲರ್ (ಅಂದಾಜು 18.8 ಕೋಟಿ.ರೂ.) ಭಾರೀ ಸುಂಕ ವಿಧಿಸಲು ನಿರ್ಧರಿಸಿದೆ. ಈ ಕ್ರಮ, ಜಾಗತಿಕ ಹಡಗು ಸಾಗಣೆ ಮತ್ತು ಇಂಧನ ಮಾರುಕಟ್ಟೆಯಲ್ಲಿ ತಲ್ಲಣ ಸೃಷ್ಟಿಸಿದೆ.

ಹೊಸ ಕಡಲ ನಿಯಮ, ಸಾರ್ವಭೌಮ ಆಡಳಿತ: ಇರಾನ್ ಸಂಸತ್ತಿನ ರಾಷ್ಟ್ರೀಯ ಭದ್ರತಾ ಸಮಿತಿಯ ಸದಸ್ಯರಾದ ಅಲಾದ್ದೀನ್ ಬೊರೌಜೆರ್ದಿ, ದಶಕಗಳ ನಂತರ ಜಲಸಂಧಿಯಲ್ಲಿ ಹೊಸ 'ಸಾರ್ವಭೌಮ ಆಡಳಿತ' ಜಾರಿಗೆ ತರಲಾಗಿದೆ ಎಂದು ತಿಳಿಸಿದ್ದಾರೆ. ನಡೆಯುತ್ತಿರುವ ಯುದ್ಧದ ವೆಚ್ಚಗಳನ್ನು ಸರಿದೂಗಿಸಲು ಮತ್ತು ಜಲಸಂಧಿಯ ಮೇಲಿನ ತನ್ನ ಭೌಗೋಳಿಕ ಅಧಿಕಾರ ಪ್ರದರ್ಶಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇರಾನ್‌ನ ಶಕ್ತಿಯನ್ನು ಜಗತ್ತಿಗೆ ತೋರಿಸಲು ಇದು ಅನಿವಾರ್ಯ ಎಂದಿದ್ದಾರೆ.

ಜಲಸಂಧಿಯ ಕಾರ್ಯಾಚರಣೆ ಹೇಗಿದೆ?: ಇರಾನ್ ವಿದೇಶಾಂಗ ಸಚಿವ ಸೆಯ್ಯದ್ ಅಬ್ಬಾಸ್ ಅರಾಘ್ಚಿ, ಸಾಮಾಜಿಕ ಜಾಲತಾಣಗಳಲ್ಲಿ ಸ್ಪಷ್ಟನೆ ನೀಡಿ, ಹಾರ್ಮುಜ್ ಜಲಸಂಧಿಯನ್ನು ಅಧಿಕೃತವಾಗಿ ಮುಚ್ಚಲಾಗಿಲ್ಲ ಎಂದು ತಿಳಿಸಿದ್ದಾರೆ. ಅಂತಾರಾಷ್ಟ್ರೀಯ ವಿಮಾ ಕಂಪನಿಗಳು ಯುದ್ಧದ ಭೀತಿಯಿಂದಾಗಿ ಹಡಗುಗಳಿಗೆ ವಿಮೆ ನೀಡಲು ಹಿಂದೇಟು ಹಾಕುತ್ತಿರುವುದರಿಂದ ಸಂಚಾರ ತಗ್ಗಿದೆಯೇ ಹೊರತು ಇರಾನ್‌ನಿಂದಲ್ಲ ಎಂದು ಅವರು ವಾದಿಸಿದ್ದಾರೆ. ಆದರೆ ಅಮೆರಿಕ, ಇರಾನ್‌ನ ಇಂಧನ ಅಥವಾ ಪರಮಾಣು ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಿದರೆ ಜಲಸಂಧಿಯನ್ನು ತಕ್ಷಣವೇ ಸಂಪೂರ್ಣವಾಗಿ ಮುಚ್ಚಲಾಗುವುದು ಎಂದು ಟೆಹ್ರಾನ್ ಎಚ್ಚರಿಕೆ ನೀಡಿದೆ.

ಜಾಗತಿಕ ಇಂಧನ ಬಿಕ್ಕಟ್ಟು, ಭಾರತದ ಮೇಲಿನ ಪರಿಣಾಮ: ಹಾರ್ಮುಜ್ ಜಲಸಂಧಿ ಜಗತ್ತಿನ ಕಚ್ಚಾ ತೈಲ ಪೂರೈಕೆಯ ಶೇ.20 ರಷ್ಟು ಭಾಗವನ್ನು ನಿರ್ವಹಿಸುವ ಅತ್ಯಂತ ನಿರ್ಣಾಯಕ ಮಾರ್ಗ. ಪ್ರಸ್ತುತ ಸಂಘರ್ಷದಿಂದಾಗಿ ಜಾಗತಿಕ ತೈಲ ಬೆಲೆಗಳಲ್ಲಿ ತೀವ್ರ ಏರಿಕೆ ಕಂಡುಬಂದಿದೆ. ವಿಶೇಷವಾಗಿ ಇರಾನ್‌ನ ದಾಳಿಯಿಂದಾಗಿ ಕತಾರ್‌ನ ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ರಫ್ತು ಸಾಮರ್ಥ್ಯದ ಶೇ.17 ರಷ್ಟು ಹಾನಿಯಾಗಿದೆ ಎಂದು ವರದಿಯಾಗಿದೆ.

ಕತಾರ್ ಮೇಲಿನ ಅವಲಂಬನೆ: ಭಾರತ ತನ್ನ ಅನಿಲ ಅಗತ್ಯದ ಸುಮಾರು ಶೇ.47ರಷ್ಟು ಪಾಲನ್ನು ಕತಾರ್ ನಿಂದಲೇ ಆಮದು ಮಾಡಿಕೊಳ್ಳುತ್ತದೆ. ಈ ಮಾರ್ಗದಲ್ಲಿನ ಅಡೆತಡೆಗಳು ಭಾರತದ ರಸಗೊಬ್ಬರ ಉತ್ಪಾದನೆ ಮತ್ತು ಕೈಗಾರಿಕಾ ಇಂಧನ ಪೂರೈಕೆಯ ಮೇಲೆ ನೇರ ಪರಿಣಾಮ ಬೀರುತ್ತಿವೆ. ಈಗಾಗಲೇ ದೇಶದ ಹಲವು ಯೂರಿಯಾ ಸ್ಥಾವರಗಳು ಅನಿಲ ಕೊರತೆಯಿಂದಾಗಿ ಅರ್ಧ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಇರಾನ್ ನಿಲುವೇನು?: ಫೆಬ್ರವರಿ 28 ರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ನಡೆಸಿದ ನಂತರ ಈ ಯುದ್ಧ ಆರಂಭವಾಯಿತು. ಅಂದಿನಿಂದ ಇರಾನ್ ಪ್ರತಿರೋಧ ತೋರುತ್ತಿದ್ದು, ಜಾಗತಿಕ ಪೂರೈಕೆ ಸರಪಳಿಯ ಮೇಲೆ ತನ್ನ ನಿಯಂತ್ರಣ ಸಾಧಿಸಲು ಪ್ರಯತ್ನಿಸುತ್ತಿದೆ. ಮುಕ್ತ ನೌಕಾಯಾನಕ್ಕೆ ಮುಕ್ತ ವ್ಯಾಪಾರದ ಗೌರವ ಸಿಗಬೇಕು ಎಂಬುದು ಇರಾನ್‌ನ ನಿಲುವಾಗಿದೆ.



ಮಿಲಿಟರಿ ಕಾರ್ಯಾಚರಣೆ, ಸಾವು-ನೋವು

ಹಾರ್ಮುಜ್ ಜಲಸಂಧಿಗೆ ಸಂಬಂಧಿಸಿದ ಗಡುವನ್ನು ವಿಸ್ತರಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ನ ವಿದ್ಯುತ್ ಸ್ಥಾವರಗಳ ಮೇಲೆ ನಡೆಸಲು ಉದ್ದೇಶಿಸಿದ್ದ ಮಿಲಿಟರಿ ದಾಳಿಯನ್ನು ಐದು ದಿನಗಳ ಕಾಲ ಮುಂದೂಡಿರುವುದಾಗಿ ಸೋಮವಾರ ಘೋಷಿಸಿದ್ದಾರೆ.ವಿದ್ಯುತ್ ಸ್ಥಾವರಗಳ ಮೇಲಿನ ದಾಳಿಗೆ ವಿರಾಮ ನೀಡಲಾಗಿದ್ದರೂ, ಇಸ್ರೇಲ್ ಟೆಹ್ರಾನ್‌ನ ಮೂಲಸೌಕರ್ಯ ಗುರಿಗಳ ಮೇಲೆ ವ್ಯಾಪಕ ದಾಳಿ ಮುಂದುವರಿಸಿದೆ. ಅದೇ ವೇಳೆ, ಇರಾನ್ ನಡೆಸಿದ ದಾಳಿಯನ್ನು ತಡೆಯಲು ತನ್ನ ವಾಯು ರಕ್ಷಣಾ ವ್ಯವಸ್ಥೆ ಪ್ರಯತ್ನಿಸುತ್ತಿದೆ ಎಂದು ಯುನೈಟೆಡ್ ಅರಬ್ ಎಮಿರೇಟ್ಸ್ ವರದಿ ಮಾಡಿದೆ. ಫೆಬ್ರವರಿ 28 ರಂದು ಸಂಘರ್ಷ ಆರಂಭವಾದಾಗಿನಿಂದ ಇರಾನ್‌ನಲ್ಲಿ 1,500 ಮತ್ತು ಲೆಬನಾನ್‌ನಲ್ಲಿ 1,000 ಕ್ಕೂ ಹೆಚ್ಚು ಜನರು ಸೇರಿದಂತೆ ಒಟ್ಟು 2,000 ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಕನಿಷ್ಠ 13 ಅಮೆರಿಕನ್ ಸೈನಿಕರು ಸಹ ಪ್ರಾಣ ಕಳೆದುಕೊಂಡಿದ್ದಾರೆ.

ಜಾಗತಿಕ ಆರ್ಥಿಕ ಪರಿಣಾಮ

ಜಾಗತಿಕ ತೈಲ ಸಾಗಣೆಯ ಶೇ. 20 ರಷ್ಟು ಪಾಲನ್ನು ನಿರ್ವಹಿಸುವ ಹಾರ್ಮುಜ್ ಜಲಸಂಧಿಯ ದಿಗ್ಬಂಧನದಿಂದಾಗಿ ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇ. 55 ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ ಸುಮಾರು 113 ಡಾಲರ್ ತಲುಪಿದೆ. ಇದು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಆಹಾರ ಮತ್ತು ಇಂಧನ ಬೆಲೆಗಳ ಏರಿಕೆಗೆ ಕಾರಣವಾಗಿದೆ. ಪೆಟ್ರೋಲಿಯಂ ಉತ್ಪನ್ನಗಳ ಪೂರೈಕೆ ಕೊರತೆಯಿಂದಾಗಿ ದಕ್ಷಿಣ ಕೊರಿಯಾದ ಎಲ್‌ಜಿ ಕೆಮ್ ನಂತಹ ಪ್ರಮುಖ ಕಂಪನಿಗಳು ಕೈಗಾರಿಕಾ ಘಟಕಗಳನ್ನು ಮುಚ್ಚಿವೆ.

ನ್ಯಾಟೋ ನಿಲುವು

ಇಂಧನ ಮಾರ್ಗಗಳನ್ನು ಸುರಕ್ಷಿತಗೊಳಿಸಲು ದಕ್ಷಿಣ ಕೊರಿಯಾ ಅಮೆರಿಕ ನೇತೃತ್ವದ ಕಡಲ ಒಕ್ಕೂಟವನ್ನು ಸೇರಿಕೊಂಡಿದೆ ಮತ್ತು ಹಾರ್ಮುಜ್ ಜಲಸಂಧಿಯ ಬಳಿ ನೌಕಾಪಡೆಗಳನ್ನು ನಿಯೋಜಿಸಿದೆ. ಇದರೊಂದಿಗೆ, ಗುಪ್ತಚರ ಮಾಹಿತಿ ಮತ್ತು ಗಸ್ತಿನಲ್ಲಿ ಅಮೆರಿಕದೊಂದಿಗೆ ಸಮನ್ವಯ ಸಾಧಿಸಲು ನ್ಯಾಟೋ ಸಮ್ಮತಿಸಿದೆ.

ಭಾರತೀಯ ಎಲ್‌ಪಿಜಿ ಟ್ಯಾಂಕರ್‌ಗಳ ಸಂಚಾರ



• **ಹೊಸದಿಲ್ಲಿ:** ಶಿಪ್ ಟ್ರ್ಯಾಕಿಂಗ್ ದತ್ತಾಂಶಗಳ ಪ್ರಕಾರ, 'ಪೈನ್ ಗ್ಯಾಸ್' ಮತ್ತು 'ಜಗ್ ವಸಂತ್' ಎಂಬ ಎರಡು ಭಾರತೀಯ ಧ್ವಜದ ಎಲ್‌ಪಿಜಿ ಟ್ಯಾಂಕರ್‌ಗಳು ಸೋಮವಾರ ಹಾರ್ಮುಜ್ ಜಲಸಂಧಿಯ ಮೂಲಕ ತಮ್ಮ ಪ್ರಯಾಣ ಆರಂಭಿಸಿವೆ.

ಸಂಚಾರ ವಿವರ: ಇರಾನ್ ಅಧಿಕಾರಿಗಳಿಂದ ಗುರುತು ಪರಿಶೀಲನೆಯನ್ನು ಸುಗಮಗೊಳಿಸಲು ಈ ಹಡಗುಗಳು ಇರಾನ್‌ನ ಲಾರಾಕ್ ಮತ್ತು ಕೇಶ್ ದ್ವೀಪಗಳ ಬಳಿ ಸಂಚರಿಸುತ್ತಿರುವುದು ಕಂಡುಬಂದಿದೆ. ಪ್ರಾದೇಶಿಕ ಸಂಘರ್ಷದ ಕಾರಣ ಪರ್ಷಿಯನ್ ಕೊಲ್ಲಿಯಲ್ಲಿ ಸಿಲುಕಿಕೊಂಡಿದ್ದ 22 ಭಾರತೀಯ ಧ್ವಜದ ಹಡಗುಗಳಲ್ಲಿ ಇವೂ ಸೇರಿವೆ. ಈ ಹಿಂದೆ 'ಎಂಟಿ ಶಿವಾಲಿಕ್' ಮತ್ತು 'ಎಂಟಿ ನಂದಾದೇವಿ' ಹಡಗುಗಳು ಗುಜರಾತ್ ಬಂದರುಗಳಿಗೆ ಯಶಸ್ವಿಯಾಗಿ ಆಗಮಿಸಿ ಸುಮಾರು 92,712 ಟನ್ ಇಂಧನ ತಲುಪಿಸಿದ್ದವು. ಅಲ್ಲದೆ, ಮಾರ್ಚ್ 18 ರಂದು 'ಜಗ್ ಲಾಡ್ಕಿ' ತೈಲ ಟ್ಯಾಂಕರ್ 80,886 ಟನ್ ಕಚ್ಚಾ ತೈಲದೊಂದಿಗೆ ಮುಂದ್ರಾ ಬಂದರು ತಲುಪಿತ್ತು.

ಉಳಿದಿರುವ ಹಡಗುಗಳು : ಪ್ರಸ್ತುತ 24 ಭಾರತೀಯ ಹಡಗುಗಳು ಯುದ್ಧ ವಲಯದಲ್ಲಿ ಉಳಿದುಕೊಂಡಿವೆ. ಇವುಗಳಲ್ಲಿ 22 ಹಡಗುಗಳು ಜಲಸಂಧಿಯ ಪಶ್ಚಿಮ ಭಾಗದಲ್ಲಿದ್ದು, 611 ನಾವಿಕರನ್ನು ಹೊಂದಿವೆ. ಉಳಿದ ಹಡಗುಗಳಲ್ಲಿ ಕಚ್ಚಾ ತೈಲ ಟ್ಯಾಂಕರ್‌ಗಳು, ಎಲ್‌ಎನ್‌ಜಿ ವಾಹಕಗಳು ಮತ್ತು ಕಂಟೇನರ್ ಹಡಗುಗಳು ಸೇರಿವೆ. ಒಟ್ಟಾರೆಯಾಗಿ ಸುಮಾರು 500 ಜಾಗತಿಕ ಟ್ಯಾಂಕರ್‌ಗಳು ಪ್ರಸ್ತುತ ಪರ್ಷಿಯನ್ ಕೊಲ್ಲಿಯೊಳಗೆ ಸಿಲುಕಿಕೊಂಡಿವೆ. ಭಾರತ ತನ್ನ ಶೇ.85-95 ರಷ್ಟು ಎಲ್‌ಪಿಜಿ ಮತ್ತು ಶೇ.30 ರಷ್ಟು ನೈಸರ್ಗಿಕ ಅನಿಲ ಆಮದಿಗಾಗಿ ಈ ಜಲಸಂಧಿಯನ್ನೇ ಅವಲಂಬಿಸಿದೆ. ಕಚ್ಚಾ ತೈಲದ ವ್ಯತ್ಯಯವನ್ನು ಇತರ ಮೂಲಗಳಿಂದ ಭಾಗಶಃ ಸರಿದೂಗಿಸಲಾಗಿದ್ದರೂ, ಕೈಗಾರಿಕಾ ಮತ್ತು ವಾಣಿಜ್ಯ ಬಳಕೆದಾರರಿಗೆ ಅನಿಲ ಪೂರೈಕೆ ಕಡಿತಗೊಂಡಿದೆ.

ಕಾಶ್ಮೀರದಿಂದ ಚಿನ್ನ, ಬೆಳ್ಳಿ ಆಭರಣ ರವಾನೆ

• **ಕಾಶ್ಮೀರ :** ಸಮರಸಂತ್ರಸ್ತ ಇರಾನ್‌ನ ಜನರಿಗೆ ಕಾಶ್ಮೀರದಿಂದ ಹಣ ಮಾತ್ರವಲ್ಲ,ಚಿನ್ನ, ಬೆಳ್ಳಿ ಆಭರಣಗಳು, ಜಾನುವಾರುಗಳು, ಸಾಂಪ್ರದಾಯಿಕ ತಾಮ್ರದ ವಸ್ತುಗಳ ಸಹಿತ ನೆರವಿನ ಮಹಾಪೂರ ಹರಿಯತೊಡಗಿದೆ. ಕಾಶ್ಮೀರದ ಬಡ್ಗಾಮ್ ಹಾಗೂ ಬಾರಾಮುಲ್ಲಾ ಜಿಲ್ಲೆಗಳ ಜನರು ಪಶ್ಚಿಮ ಏಷ್ಯಾ ಸಂಘರ್ಷದಿಂದ ಸಂತ್ರಸ್ತ ಇರಾನಿಯರಿಗೆ ಈ ರೀತಿ ನೆರವಿನ ಹಸ್ತ ಚಾಚಿದ್ದಾರೆ. ಭಾರತದ ಕಾಶ್ಮೀರವಾಸಿಗಳ ದಯಾಳುತನವನ್ನು ನಾವು ಯಾವತ್ತೂ ಮರೆಯೆವು ಎಂದು ಟೆಹ್ರಾನ್ ಕೃತಜ್ಞತೆ ವ್ಯಕ್ತಪಡಿಸಿದೆ. ಈದುಲ್ ಫಿತರ್ ಹಬ್ಬಾಚರಣೆ ಸಂದರ್ಭ , ಶಿಯಾ ಬಾಹುಳ್ಯದ ಬಡ್ಗಾಮ್, ಬಾರಾಮುಲ್ಲಾ ಜಿಲ್ಲೆಗಳ ಸ್ವಯಂಸೇವಕರ ತಂಡವೊಂದು, ಮಿಲಿಟರಿ ದಾಳಿಗಳಿಂದ ಸಂತ್ರಸ್ತ ಇರಾನ್‌ನ ಜನತೆಗೆ ನೆರವಾಗುವನ್ನಾಯ ಮನೆ ಮನೆ ಭೇಟಿ ನೀಡಿದೆ. ಜನರು ಕೂಡ ಹಣ ಮಾತ್ರವಲ್ಲ, ಚಿನ್ನ-ಬೆಳ್ಳಿ ಆಭರಣಗಳು, ಗೋವುಗಳು ಮತ್ತು ಸಾಂಪ್ರದಾಯಿಕ ತಾಮ್ರದ ವಸ್ತುಗಳನ್ನೂ ಸಂತ್ರಸ್ತರ ನಿಧಿಗೆ ದಾನ ಮಾಡಿದ್ದಾರೆ. ಇರಾನ್‌ನ್ನು ಮತ್ತೆ ಕಟ್ಟುವುದಕ್ಕಾಗಿ ಹಣ, ಬಂಗಾರಗಳ ಕೊಡುಗೆಯಾಗಿ ನೀಡಿರುವ ಭಾರತೀಯರ ಮಾನವೀಯತೆ, ದಯಾಪರತೆಗೆ ಭಾರತದಲ್ಲಿನ ಇರಾನ್ ರಾಯಭಾರಿ ಸಾಮಾಜಿಕ ಜಾಲತಾಣದಲ್ಲಿ ಫೋಟೋ ಸಹಿತ ಕೃತಜ್ಞತೆ ಸಲ್ಲಿಸಿದ್ದಾರೆ.



ಗಂಡನ ನೆನಪಿನ ಸ್ಮರಣಿಕೆ ದಾನ

ಪಿಟಿಐ ಮೂಲಗಳ ಪ್ರಕಾರ ಮನೆ ಮನೆ ಭೇಟಿ ಅಭಿಯಾನದಲ್ಲಿ ಉಭಯ ಜಿಲ್ಲೆಗಳ ಹೆಂಗಸರು, ಗಂಡಸರು ,ಮಕ್ಕಳು ಪಾಲ್ಗೊಂಡಿದ್ದರು. ಈ ಸಂದರ್ಭ ಹಲವು ಮಹಿಳೆಯರು ತಮ್ಮ ಬಂಗಾರದೊಡವೆಗಳನ್ನೇ ಸ್ವಯಂಸೇವಕರ ದಾನ ಸಂಗ್ರಹ ಡಬ್ಬಿಗಳಿಗೆ ಸುರಿದಿದ್ದಾರೆ. ಕಾಶ್ಮೀರಿ ವಿಧವೆಯೋರ್ವರು ತಮ್ಮ ಗತ ಪತಿಯ ನೆನಪಿಗಾಗಿ 28ವರ್ಷಗಳಿಂದ ಜೋಪಾನ ಕಾಯ್ದುಕೊಂಡು ಬಂದಿದ್ದ ಬಂಗಾರದ ಸ್ಮರಣಿಕೆಯನ್ನೂ ಸಂತ್ರಸ್ತ ಇರಾನಿಯರಿಗೆ ದಾನ ಮಾಡಿದ್ದಾರೆ. ಪ್ರತಿಯಾಗಿ, ಗೌರವಾನ್ವಿತ ಸೋದರಿಯ ಕಣ್ಣೀರು ಮತ್ತು ಪರಿಶುದ್ಧ ಭಾವನೆಗಳು ಇರಾನ್‌ನ ಜನತೆ ಪಾಲಿಗೆ ಮಹಾನ್ ನೆಮ್ಮದಿಯ ಸೆಲೆಯಾಗಲಿದೆ ಮತ್ತು ಯಾವತ್ತೂ ಅವಿಸ್ಮರಣೀಯವಾಗಿರುವುದು ಎಂದು ರಾಯಭಾರಿಯ ಪೋಸ್ಟ್‌ನಲ್ಲಿ ಬಣ್ಣಿಸಲಾಗಿದೆ. ಕೆಲವು ಜನರು ತಮ್ಮ ಜಾನುವಾರುಗಳನ್ನು ಕೊಡುಗೆಯಾಗಿ ನೀಡಿದರೆ, ಮಕ್ಕಳು ತಮ್ಮ ಉಳಿತಾಯಗಳು ಮತ್ತು ಈದ್ ಹಣವನ್ನೂ ದಾನ ಮಾಡಿದ್ದಾರೆ. ಬಡ್ಗಾಮ್ ಶಾಸಕ ಮುಂತಝಿರ್ ಮೆಹ್ದಿ ತಮ್ಮ ಒಂದು ತಿಂಗಳ ವೇತನವನ್ನು ಪರಿಹಾರ ಪ್ರಯತ್ನಗಳಿಗೆ ದಾನ ನೀಡಿದ್ದಾರೆ. ಇಸ್ರೇಲ್ ಮತ್ತದರ ಬೆಂಬಲಿಗ ರಾಷ್ಟ್ರಗಳು ಇರಾನ್ ವಿರುದ್ಧ ಸಾರಿರುವ ಆಕ್ರಮ ಸಮರದಿಂದ ಅಪಾರ ಹಾನಿ ಸಂಭವಿಸಿದೆ. ಇಂತಹ ಸಂಕಷ್ಟ ಸನ್ನಿವೇಶದಲ್ಲಿ ನಾಗರಿಕ ಜಗತ್ತು ಇರಾನ್‌ನ ಸಂತ್ರಸ್ತ ಜನರಿಗೆ ನೆರವಾಗಬೇಕು, ಅದಷ್ಟೆ ಸಾಧ್ಯ ಎಂದು ಶ್ರೀನಗರದ ರೈನವಾರಿ ಪ್ರದೇಶದ ನಿವಾಸಿ ಬಶಾರತ್ ಅಹಮದ್ ಹೇಳುತ್ತಾರೆ.

ಇರಾನ್ ಮಾಧ್ಯಮಗಳಿಂದ ತೀವ್ರ ವ್ಯಂಗ್ಯ

• **ಟೆಹ್ರಾನ್:** ಇರಾನ್‌ನ ವಿದ್ಯುತ್ ಜಾಲದ ಮೇಲೆ ದಾಳಿ ನಡೆಸುವ ನಿರ್ಧಾರವನ್ನು ಅಮಾನತುಗೊಳಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕ್ರಮವನ್ನು ಅಮೆರಿಕದ ಹಿಂಜರಿಕೆ ಎಂದು ಇರಾನ್‌ನ ಸರ್ಕಾರಿ ಮಾಧ್ಯಮಗಳು ಕರೆದು ವ್ಯಂಗವಾಡಿದೆ.

ಇದು ರಾಷ್ಟ್ರೀಯ ಪ್ರತಿರೋಧಕ್ಕೆ ಸಂದ ಜಯ ಎಂದು ವ್ಯಾಖ್ಯಾನಿಸಿವೆ.

ಮಿಲಿಟರಿ ಪ್ರತಿರೋಧದ ಪ್ರತಿಪಾದನೆ: ಇರಾನ್‌ನ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ಮಾಡುವುದನ್ನು ಐದು ದಿನಗಳ ಕಾಲ ಮುಂದೂಡುವುದಾಗಿ ಅಮೆರಿಕ ಘೋಷಿಸಿರುವುದನ್ನು ಟೆಹ್ರಾನ್‌ನ ಮಾಧ್ಯಮಗಳು ಅಪಹಾಸ್ಯ ಮಾಡಿವೆ. ಪ್ರೆಸ್ ಟಿವಿ ಮತ್ತು ಐಆರ್‌ಐಬಿ ವರದಿಗಳ ಪ್ರಕಾರ, ಈ ಮುಂದೂಡುವಿಕೆ ರಾಜತಾಂತ್ರಿಕ ಸೌಜನ್ಯದಿಂದ ಬಂದಿದ್ದಲ್ಲ, ಬದಲಿಗೆ ಇರಾನ್‌ನ ಪ್ರಬಲ ಮಿಲಿಟರಿ ಎಚ್ಚರಿಕೆಯಿಂದಾಗಿ ಅಮೆರಿಕ ಅನಿವಾರ್ಯವಾಗಿ ಈ ನಿರ್ಧಾರ ತೆಗೆದುಕೊಂಡಿದೆ.

ಮಾತುಕತೆ ನಡೆಯುತ್ತಿಲ್ಲ! : ಅಮೆರಿಕದೊಂದಿಗೆ ಯಾವುದೇ ನೇರ ಅಥವಾ ಪರೋಕ್ಷ ಮಾತುಕತೆಗಳು ನಡೆಯುತ್ತಿಲ್ಲ ಎಂದು ಹಿರಿಯ ಭದ್ರತಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಟ್ರಂಪ್ ಅವರ ಐದು ದಿನಗಳ ಗಡುವು ಕೇವಲ ದಾಳಿಯ ಮುಂದುವರಿದ ಯೋಜನೆಯ ಭಾಗವಾಗಿದ್ದು, ಇರಾನ್ ಪೂರ್ಣ ಪ್ರಮಾಣದ ರಕ್ಷಣಾತ್ಮಕ ಪ್ರತಿಕ್ರಿಯೆಗೆ ಸಿದ್ಧವಾಗಿದೆ ಎಂದು ಅವರು ಎಚ್ಚರಿಸಿದ್ದಾರೆ.

ಮಾಧ್ಯಮ- ರಾಜಕೀಯ ಪ್ರತಿಕ್ರಿಯೆಗಳು : ಮೆಹ್ರ್ ನ್ಯೂಸ್ ಮತ್ತು ಟೆಹ್ರಾನ್ ಟೈಮ್ಸ್ ಸೇರಿದಂತೆ ವಿವಿಧ ಸಂಸ್ಥೆಗಳು ಅಮೆರಿಕದ ಈ ತಂತ್ರವನ್ನು ಬೊಗಳೆ ಮತ್ತು ರಾಜತಾಂತ್ರಿಕತೆಯ ಹೆಸರಿನಲ್ಲಿ ಮಾಡುತ್ತಿರುವ ಹಿಂಜರಿಕೆ ಎಂದು ಕರೆದಿವೆ. ರಾಷ್ಟ್ರೀಯ ಭದ್ರತೆ ಮತ್ತು ವಿದೇಶಾಂಗ ನೀತಿ ಸಮಿತಿಯ ವಕ್ತಾರ ಇಬ್ರಾಹಿಂ ರೆಜಾಯಿ, ಈ ವಿರಾಮವನ್ನು ಅಮೆರಿಕಕ್ಕೆ ಉಂಟಾದ ಸೋಲು ಎಂದು ಬಣ್ಣಿಸಿದ್ದಾರೆ. ಹಾರ್ಮುಜ್ ಜಲಸಂಧಿಯನ್ನು ಮುಚ್ಚುವ ಬಗ್ಗೆ ಇರಾನ್ ನೀಡಿದ್ದ ಎಚ್ಚರಿಕೆ ಮತ್ತು ಪ್ರಾದೇಶಿಕ ಇಂಧನ ಮೂಲಸೌಕರ್ಯಗಳ ಮೇಲಿನ ಸಂಭಾವ್ಯ ದಾಳಿಯ ಭೀತಿಯಿಂದಾಗಿ ಟ್ರಂಪ್ ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಇರಾನ್ ಮಾಧ್ಯಮಗಳು ಅಭಿಪ್ರಾಯಪಟ್ಟಿವೆ.

ಕಾರ್ಯತಂತ್ರ : ಇಂಧನ ಪೂರೈಕೆ ಜಾಲ ಇಂದಿಗೂ ಯುದ್ಧದ ಭಾಗವಾಗಿ ಉಳಿದಿದೆ ಮತ್ತು ಅಮೆರಿಕದ ಯಾವುದೇ ದಾಳಿಗೆ ತಕ್ಕ ಪ್ರತಿಕ್ರಿಯೆ ನೀಡಲಾಗುವುದು, ಎಂದು ಇರಾನ್ ಮಾಧ್ಯಮಗಳು ಹೇಳಿವೆ. ಅಮೆರಿಕ ಆಡಳಿತ ಉಲ್ಲೇಖಿಸಿದ ಯಾವುದೇ ಫಲಪ್ರದ ಸಂಭಾಷಣೆಗಳ ಬಗ್ಗೆ ಇರಾನ್ ಮೂಲಗಳು ವ್ಯಂಗ್ಯವಾಡಿವೆ.

ಕಿರುಸುದ್ದಿ

ಅಯೋಧ್ಯೆಗೆ 450 ಕೆಜಿ ಪ್ರಸಾದ ರವಾನೆ

• **ಹೊಸದಿಲ್ಲಿ:** ಇಲ್ಲಿನ ಶ್ರೀ ಕೃಷ್ಣ ಜನ್ಮಭೂಮಿ ದೇವಾಲಯದ ಪ್ರಸಾದವನ್ನು ರಾಮನವಮಿಗಾಗಿ ಅಯೋಧ್ಯೆ ರಾಮ ಮಂದಿರಕ್ಕೆ ಕಳುಹಿಸಲಾಗಿದೆ. ಶ್ರೀ ಕೃಷ್ಣ ಜನ್ಮಭೂಮಿ ಸೇವಾ ಸಂಸ್ಥೆಯ ಕಾರ್ಯದರ್ಶಿ ಕಪಿಲ್ ಶರ್ಮಾ ಮಾತನಾಡಿ, ದೇವಾಲಯ ಸಂಕೀರ್ಣದಿಂದ 440 ಕೆಜಿ ಕೊತ್ತಂಬರಿ, 10 ಕೆಜಿ. ಲಡ್ಡು, ಬಟ್ಟೆ, ಹಣ್ಣು ಮತ್ತು ಇತರ ವಸ್ತುಗಳನ್ನು ರವಾನಿಸಲಾಗಿದೆ.

10,000 ಎಸಿ ಇ-ಬಸ್ ನಿಯೋಜನೆಗೆ ನಿರ್ಧಾರ

• **ಹೊಸದಿಲ್ಲಿ:** ಪಿಎಂ-ಇ-ಬಸ್ ಸೇವಾ ಯೋಜನೆಯಲ್ಲಿ 2027ರ ಅಂತ್ಯದ ವೇಳೆಗೆ 26 ರಾಜ್ಯಗಳು /ಕೇಂದ್ರಾಡಳಿತ ಪ್ರದೇಶಗಳ 116 ನಗರಗಳಿಗೆ 10,000 ಹವಾನಿಯಂತ್ರಿತ ಇ-ಬಸ್‌ಗಳನ್ನು ಒದಗಿಸಲಾಗುವುದು. ಬಳಿಕ ಇನ್ನೂ 35,000 ಇ-ಬಸ್‌ಗಳನ್ನು ಒದಗಿಸಲು ಹೊಸ ಯೋಜನೆ ಪ್ರಾರಂಭಿಸಲಾಗುವುದು ಎಂದು ಸರ್ಕಾರ ಸೋಮವಾರ ರಾಜ್ಯಸಭೆಗೆ ತಿಳಿಸಿದೆ.

ಹಳದಿ ಲೋಹ, ಬೆಳ್ಳಿ ಬೆಲೆಯಲ್ಲಿ ಭಾರೀ ಕುಸಿತ

• **ಹೊಸದಿಲ್ಲಿ:** ಚಿನ್ನ ಮತ್ತು ಬೆಳ್ಳಿ ಬೆಲೆಗಳಲ್ಲಿ ಸೋಮವಾರ ತೀವ್ರ ಕುಸಿತ ಕಂಡುಬಂದಿದ್ದು, ಜಾಗತಿಕ ಅಸ್ಥಿರತೆಯ ನಡುವೆ ಹೂಡಿಕೆದಾರರು ಲಾಭಾಂಶ ವಸೂಲಿಗೆ ಮುಂದಾದ ಕಾರಣ ಕೆಲವೇ ಗಂಟೆಗಳಲ್ಲಿ ಮಾರುಕಟ್ಟೆ ಮೌಲ್ಯದಲ್ಲಿ ಸುಮಾರು 2 ಟ್ರಿಲಿಯನ್ ಡಾಲರ್ ನಷ್ಟವಾಗಿದೆ.

ಮಾರುಕಟ್ಟೆ ಕುಸಿತದ ವಿವರ: ಎಂಸಿಎಕ್ಸ್ ಮಾರುಕಟ್ಟೆಯಲ್ಲಿ ದೇಶೀಯ ಚಿನ್ನದ ದರ ಶೇ.6.5 ರಷ್ಟು ಇಳಿಕೆಯಾಗಿ ಪ್ರತಿ 10 ಗ್ರಾಂಗೆ 1,35,100 ರೂ. ತಲುಪಿದೆ. ಇದರೊಂದಿಗೆ, ಜನವರಿ 29 ರಂದು ದಾಖಲಾಗಿದ್ದ 1.93 ಲಕ್ಷ ರೂ.ಗಳ ಗರಿಷ್ಠ ಮಟ್ಟದಿಂದ ಶೇ.30 ರಷ್ಟು ಕುಸಿತವನ್ನು ದಾಖಲಿಸಿದಂತಾಗಿದೆ. ಬೆಳ್ಳಿ ಬೆಲೆ ಶೇ. 8.97 ರಷ್ಟು ಕುಸಿದು ಪ್ರತಿ ಕೆಜಿಗೆ 2,06,441 ರೂ.ಗೆ ತಲುಪಿದ್ದು, ದಾಖಲೆಯ ಮಟ್ಟದಿಂದ ಒಟ್ಟು ಶೇ.50ಕ್ಕಿಂತ ಹೆಚ್ಚು ಕುಸಿತ ಕಂಡಿದೆ.



ಆರ್ಥಿಕ ಕಾರಣಗಳು: ಅಮೆರಿಕನ್ ಡಾಲರ್ ಬಲವರ್ಧನೆ ಮತ್ತು ಬ್ರೆಂಟ್ ಕಚ್ಚಾ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 110 ಡಾಲರ್ ದಾಟಿರುವುದು ಈ ಮಾರುಕಟ್ಟೆ ಏರಿಳಿತಕ್ಕೆ ಕಾರಣ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಸಾಮಾನ್ಯವಾಗಿ ಭೌಗೋಳಿಕ ರಾಜಕೀಯ ಬಿಕ್ಕಟ್ಟುಗಳು ಚಿನ್ನದಂತಹ ಸುರಕ್ಷಿತ ಹೂಡಿಕೆಗಳಿಗೆ ಬೆಂಬಲ ನೀಡುತ್ತವೆ, ಆದರೆ ಡಾಲರ್ ಬೆಲೆ ಏರಿಕೆ ಮತ್ತು ಹೆಚ್ಚುತ್ತಿರುವ ಬಾಂಡ್‌ಗಳಿಕೆ ಮಾರುಕಟ್ಟೆಯನ್ನು ನಿಯಂತ್ರಿಸಿವೆ. ವಿಶ್ಲೇಷಕರು ಪ್ರಸ್ತುತ ಪರಿಸ್ಥಿತಿಯನ್ನು ಕುಸಿತಕ್ಕಿಂತ ಮಾರುಕಟ್ಟೆಯ 'ತಿದ್ದುಪಡಿ ಹಂತ' ಎಂದು ಬಣ್ಣಿಸಿದ್ದಾರೆ.

ಜೆಪಿಸಿಗೆ ಕಾರ್ಪೊರೇಟ್ ಕಾನೂನು ತಿದ್ದುಪಡಿ ಬಿಲ್

• **ಹೊಸದಿಲ್ಲಿ:** ಲೋಕಸಭೆ ಸೋಮವಾರ ಕಾರ್ಪೊರೇಟ್ ಕಾನೂನುಗಳ (ತಿದ್ದುಪಡಿ) ಮಸೂದೆ, 2026 ಅನ್ನು ವಿವರವಾದ ವಿಶ್ಲೇಷಣೆ ಮತ್ತು ಶಿಫಾರಸುಗಳಿಗಾಗಿ ಉಭಯ ಸದನಗಳ ಸದಸ್ಯರನ್ನೊಳಗೊಂಡ ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಒಪ್ಪಿಸಿದೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಲಹೆಯ ಮೇರೆಗೆ ಸ್ಪೀಕರ್ ಓಂ ಬಿರ್ಲಾ ಈ ಪ್ರಸ್ತಾವನೆಯನ್ನು ಧ್ವನಿ ಮತಕ್ಕೆ ಹಾಕಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಯಿತು. ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಮತ್ತು ಡಿಎಂಕೆ ಪಕ್ಷಗಳ ವಿರೋಧ ಪಕ್ಷದ ಸದಸ್ಯರು ಈ ಮಸೂದೆಯನ್ನು ವಿರೋಧಿಸಿದ್ದರು. ಕಂಪನಿಗಳು ತಮ್ಮ ಲಾಭದ ಶೇ. 2ರಷ್ಟು ಹಣವನ್ನು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಗೆ (ಸಿಎಸ್‌ಆರ್) ಪಾವತಿಸಬೇಕೆಂಬ ಕಡ್ಡಾಯ ನಿಯಮವನ್ನು ಈ ಮಸೂದೆ ಸಡಿಲಗೊಳಿಸುತ್ತದೆ ಎಂದು ಅವರು ಆರೋಪಿಸಿದ್ದರು. ಆದರೆ ಈ ಆರೋಪಗಳನ್ನು ನಿರಾಕರಿಸಿದ ಸಚಿವರು, ತಿದ್ದುಪಡಿಗಳು ಕೇವಲ ನಿವ್ವಳ ಲಾಭದ ಮಾನದಂಡಗಳಿಗೆ ಸಂಬಂಧಿಸಿವೆಯೇ ಹೊರತು ಸಂಪೂರ್ಣ ಸಿಎಸ್‌ಆರ್ ನಿಯಮಕ್ಕಲ್ಲ ಎಂದು ಸ್ಪಷ್ಟಪಡಿಸಿದರು. ಈ ಮಸೂದೆ, 'ಸೀಮಿತ ಹೊಣೆಗಾರಿಕೆ ಪಾಲುದಾರಿಕೆ (ಎಲ್‌ಎಲ್‌ಪಿ) ಕಾಯ್ದೆ, 2008' ಮತ್ತು ಕಂಪನಿ ಕಾಯ್ದೆಗೆ ತಿದ್ದುಪಡಿ ತರುವ ಉದ್ದೇಶ ಹೊಂದಿದೆ. ಸಣ್ಣ ಕಂಪನಿಗಳು ಮತ್ತು ಸ್ಟಾರ್ಟಪ್‌ಗಳಿಗೆ ವ್ಯವಹಾರವನ್ನು ಇನ್ನಷ್ಟು ಸುಲಭಗೊಳಿಸುವುದು ಹಾಗೂ ಸಣ್ಣಪುಟ್ಟ ಕಾರ್ಪೊರೇಟ್ ಅಪರಾಧಗಳನ್ನು ದಂಡನೆಯಿಂದ ಮುಕ್ತಗೊಳಿಸುವುದು ಇದರ ಮುಖ್ಯ ಗುರಿಯಾಗಿದೆ.

ರಷ್ಯಾ ಜತೆ ಪಾಲುದಾರಿಕೆ ಇನ್ನಷ್ಟು ದೃಢ: ಜೈಶಂಕರ್

• **ಹೊಸದಿಲ್ಲಿ:** ರಷ್ಯಾದೊಂದಿಗಿನ ತನ್ನ ಪಾಲುದಾರಿಕೆಯನ್ನು ಗಾಢವಾಗಿಸುವ ಭಾರತದ ಬದ್ಧತೆಯನ್ನು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಸೋಮವಾರ ಪುನರುಚ್ಚರಿಸಿದರು. ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆ ನಡುವೆ ಎರಡೂ ದೇಶಗಳ ನಡುವಿನ ಸಹಕಾರವು ವಿಸ್ತರಿಸುತ್ತಿದೆ ಎಂದು ಹೇಳಿದರು. ಭಾರತ ಮತ್ತು ರಷ್ಯಾ ಹೊಸ ದ್ವಿಪಕ್ಷೀಯ ಕಾರ್ಯಸೂಚಿಯತ್ತ ಎಂಬ ಶೀರ್ಷಿಕೆಯ ಸಮಾವೇಶವನ್ನು ಉದ್ದೇಶಿಸಿ ವರ್ಚುವಲ್ ಭಾಷಣದಲ್ಲಿ ಮಾತನಾಡಿದ ಅವರು, ವಿದೇಶಾಂಗ ವ್ಯವಹಾರಗಳ ಸಚಿವರು ಪ್ರಮುಖ ಅಂತಾರಾಷ್ಟ್ರೀಯ ಗುಂಪುಗಳಲ್ಲಿ ಬಲವಾದ ಸಹಯೋಗದ ಮಹತ್ವವನ್ನು ಹೇಳಿದರು. ಭಾರತ ಮತ್ತು ರಷ್ಯಾ ನಿಯಮಿತವಾಗಿ ಉನ್ನತ ಮಟ್ಟದ ಸಂವಹನ ಮತ್ತು ಹಂಚಿಕೆಯ ಕಾರ್ಯತಂತ್ರದ ಹಿತಾಸಕ್ತಿಗಳ ಮೂಲಕ ನಿಕಟವಾಗಿ ತೊಡಗಿಸಿಕೊಂಡಿವೆ ಎಂದು ಹೇಳಿದರು.

ಬ್ರಿಕ್ಸ್‌ನಲ್ಲಿ ನಾಯಕತ್ವದ ಪಾತ್ರವನ್ನು ವಹಿಸುತ್ತಿರುವುದರಿಂದ ಭಾರತವು ರಷ್ಯಾದೊಂದಿಗೆ ಹೆಚ್ಚು ನಿಕಟವಾಗಿ ಕೆಲಸ ಮಾಡಲು ಉತ್ಸುಕವಾಗಿದೆ ಎಂದು ಜೈಶಂಕರ್ ಹೇಳಿದರು. ವಿಕಸನಗೊಳ್ಳುತ್ತಿರುವ ಬಹುಧ್ರುವೀಯ ವ್ಯವಸ್ಥೆಯು ಬ್ರಿಕ್ಸ್, ಎಸ್‌ಸಿಒ, ಜಿ20 ಮತ್ತು ಯುಎನ್ ಸೇರಿದಂತೆ ಹೆಚ್ಚಿನ ಸಹಕಾರದ ಅಗತ್ಯವನ್ನು ಹೊಂದಿದೆ. ಭಾರತವು ತನ್ನ ಬ್ರಿಕ್ಸ್ ಅಧ್ಯಕ್ಷತೆಯಲ್ಲಿ, ಮಾನವೀಯತೆ-ಮೊದಲ ಮತ್ತು ಜನ ಕೇಂದ್ರಿತ ವಿಧಾನದೊಂದಿಗೆ, ಹಂಚಿಕೆಯ ಸವಾಲುಗಳನ್ನು ಎದುರಿಸಿ ರಷ್ಯಾದೊಂದಿಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿದೆ ಎಂದು ಜೈಶಂಕರ್ ಹೇಳಿದರು.

ಲ್ಯಾಂಡಿಂಗ್ ವೇಳೆ ಅಪಘಾತ: ಪೈಲಟ್, ಕೋ-ಪೈಲಟ್ ಸಾವು

• **ನ್ಯೂಯಾರ್ಕ್:** ನ್ಯೂಯಾರ್ಕ್‌ನ ಲಾಗಾರ್ಡಿಯಾ ವಿಮಾನ ನಿಲ್ದಾಣದಲ್ಲಿ ಏರ್ ಕೆನಡಾ ಪ್ರಾದೇಶಿಕ ಜೆಟ್ ವಿಮಾನ ಲ್ಯಾಂಡಿಂಗ್ ವೇಳೆ ಅಗ್ನಿಶಾಮಕ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಪೈಲಟ್ ಮತ್ತು ಕೋ-ಪೈಲಟ್ ಮೃತಪಟ್ಟಿದ್ದಾರೆ. ಮೃತಪಟ್ಟ ಇಬ್ಬರು ಸಿಬ್ಬಂದಿ ಕೆನಡಾ ಮೂಲದವರಾಗಿದ್ದಾರೆ.

ವಿಮಾನದಲ್ಲಿದ್ದ 39 ಪ್ರಯಾಣಿಕರು ಮತ್ತು ಸಿಬ್ಬಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಕೆಲವರ ಸ್ಥಿತಿ ಗಂಭೀರವಾಗಿದೆ. ಅಗ್ನಿಶಾಮಕ ವಾಹನದಲ್ಲಿದ್ದ ಇಬ್ಬರು ಪೋರ್ಟ್ ಅಥಾರಿಟಿ ಉದ್ಯೋಗಿಗಳು ಸಹ ಗಾಯಗೊಂಡಿದ್ದು, ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಾಂಟ್ರಿಯಲ್‌ನಿಂದ ಆಗಮಿಸಿದ ಜ್ಯಾಜ್ ಏವಿಯೇಷನ್‌ನ ಬಾಂಬಾರ್ಡಿಯರ್ ಸಿಆರ್‌ಜೆ ವಿಮಾನ, ಯುನೈಟೆಡ್ ಏರ್‌ಲೈನ್ಸ್ ವಿಮಾನವೊಂದರ ತಾಂತ್ರಿಕ ಸಮಸ್ಯೆಗೆ ಸ್ಪಂದಿಸಲು ರನ್‌ವೇ ದಾಟುತ್ತಿದ್ದ ತುರ್ತು ವಾಹನಕ್ಕೆ ಡಿಕ್ಕಿ ಹೊಡೆದಿದೆ.

ತಮಿಳುನಾಡಿನಲ್ಲಿ ವಿಧಾನಸಭಾ ಚುನಾವಣೆಗೆ ಎನ್ ಡಿಎ ಸ್ಥಾನ ಹಂಚಿಕೆ ಅಂತಿಮ

ಎಐಎಡಿಎಂಕೆ 178ರಲ್ಲಿ, ಬಿಜೆಪಿ 23ರಲ್ಲಿ ಸ್ಪರ್ಧೆ

• **ಚೆನ್ನೈ:** ತಮಿಳುನಾಡಿನ ಮುಂಬರುವ ವಿಧಾನಸಭಾ ಚುನಾವಣೆಗೆ ಸೀಟು ಹಂಚಿಕೆಯನ್ನು ಎನ್‌ಡಿಎ ಅಂತಿಮಗೊಳಿಸಿದೆ. ಇದರಂತೆ ವಿಧಾನಸಭೆಯ 234 ಕ್ಷೇತ್ರಗಳ ಪೈಕಿ 178 ಸ್ಥಾನಗಳಿಗೆ ಎಡಿಎಂಕೆ ಸ್ಪರ್ಧಿಸಲಿದೆ. ಬಿಜೆಪಿ 27 ಸ್ಥಾನಗಳಲ್ಲಿ ಸ್ಪರ್ಧಾ ಕಣಕ್ಕಿಳಿಯಲಿದೆ. ಇತರ ಮಿತ್ರಪಕ್ಷಗಳಲ್ಲಿ ಪಿಎಂಕೆ 18 ಸ್ಥಾನಗಳಿಗೂ, ಎಎಂಎಂಕೆ 11 ಸ್ಥಾನಗಳಿಗೂ ಸ್ಪರ್ಧಿಸಲಿದೆ.

ಸೀಟು ಹಂಚಿಕೆಗೆ ಸಂಬಂಧಿಸಿ ಮಿತ್ರಕೂಟದ ಮಿತ್ರಪಕ್ಷಗಳೊಳಗೆ ಹಿತವಾದ ಮಾತುಕತೆ ನಡೆಯಿತು ಮತ್ತು ಮಿತ್ರಪಕ್ಷಗಳು ಸ್ಪರ್ಧಿಸಬೇಕಾದ ಸೀಟುಗಳ ಸಂಖ್ಯೆಯನ್ನು ಅಧಿಕೃತವಾಗಿ ಅಂತಿಮಗೊಳಿಸಲಾಯಿತು. ಇತರ ಮಿತ್ರಪಕ್ಷಗಳೊಂದಿಗೆ ಮಾತುಕತೆ ನಡೆದಿದೆ. ಅವುಗಳಿಗೆ ಹಂಚಿಕೆಯಾಗುವ ಸೀಟುಗಳ ಸಂಖ್ಯೆಯನ್ನು ಶೀಘ್ರದಲ್ಲೇ ಘೋಷಿಸಲಾಗುವುದು. ಎನ್‌ಡಿಎ ಒಂದು ವಿಜಯೀ ಮಿತ್ರಕೂಟವಾಗಿದ್ದು, ಎಲ್ಲಾ ಸೀಟುಗಳನ್ನೂ ಗೆಲ್ಲಲಿದೆ ಮತ್ತು ಎಡಿಎಂಕೆ ಸರಕಾರ ರಚಿಸಲಿದೆ ಎಂದು ಎಡಿಎಂಕೆ ನಾಯಕ ಎಡಪ್ಪಾಡಿ ಕೆ.ಪಳನಿಸ್ವಾಮಿ (ಇಪಿಎಸ್) ಹೇಳಿದ್ದಾರೆ.

ನಾವು ದಿಲ್ಲಿಗೆ ಹೋದರೇ ಸಿಎಂ ಸ್ಟಾಲಿನ್‌ಗ್ಯಾಕೆ ಭಯ ?: ಎಡಿಎಂಕೆಯು ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದ್ದು, ಮಿತ್ರಪಕ್ಷ ನಾಯಕರನ್ನು ಕಾಣಲು ನಾವು ದಿಲ್ಲಿಗೆ ಪಯಣಿಸುವಾಗೆಲ್ಲ, ಮುಖ್ಯವಾಗಿ ಸಿಎಂ ಎಂ.ಕೆ.ಸ್ಟಾಲಿನ್ ತೀರಾ ನಿಂದನಾತ್ಮಕ ಹೇಳಿಕೆಗಳನ್ನು ನೀಡುತ್ತಾರೆ. ನಾವು ದಿಲ್ಲಿಗೆ ಭೇಟಿ ಕೊಟ್ಟರೆ ಮುಖ್ಯಮಂತ್ರಿ ಸ್ಟಾಲಿನ್‌ರಿಗೆ ಯಾಕೆ ಭಯವೆಂಬುದು ಗೊತ್ತಿಲ್ಲ. ಮಿತ್ರಕೂಟದ ಪಾಲುದಾರರು ಪರಸ್ಪರ ಭೇಟಿಯಾಗುವುದು ಸಹಜ. ಹಾಗಿದ್ದರೆ ಕಾಂಗ್ರೆಸ್ ರಾಹುಲ್ ಗಾಂಧಿಯನ್ನು ಭೇಟಿ ಮಾಡಲು ದಿಲ್ಲಿಗೆ ಹೋದ್ದು ಯಾಕೆ ಎಂದವರು ಸುದ್ದಿಗಾರರಿಗೆ ಮರುಪ್ರಶ್ನೆ ಹಾಕಿದರು. ಮಿತ್ರಕೂಟ ಸರಕಾರ ಸಾಧ್ಯತೆ ಕುರಿತ ಪ್ರಶ್ನೆಗೆ, ಎಡಿಎಂಕೆ ತನ್ನ ಸ್ವಂತ ಬಲದಲ್ಲೇ ಸರಕಾರ ರಚಿಸುವುದು ಶತಃಸಿದ್ಧ ಎಂದು ಉತ್ತರಿಸಿದರು.



30 ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟ


ತಮಿಳಗಾ ವೆಟ್ರಿ ಕಳಗಂ (ಟಿವಿಕೆ) ಮುಂಬರುವ 2026ರ ಪುದುಚೇರಿ ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ 30 ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದೆ. ತಮಿಳಗಾ ವೆಟ್ರಿ ಕಳಗಂ ಪಕ್ಷವು ಏಪ್ರಿಲ್ 9ರಂದು ನಿಗದಿಯಾಗಿರುವ ಪುದುಚೇರಿ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುತ್ತಿದ್ದು, ಮೇ 4ರಂದು ಮತ ಎಣಿಕೆ ನಡೆಯಲಿದೆ.

ರಸ್ತೆ ಸ್ಥಿತಿಗತಿಗಳ ಮೇಲೆ ನಿಗಾವಹಿಸಲು ಹೊಸ ಯೋಜನೆ

ರಾಹೆಗಳಲ್ಲಿ ಎಐ ಡ್ಯಾಶ್‌ಕ್ಯಾಮ್

• **ಹೊಸದಿಲ್ಲಿ:** ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಸುಮಾರು 40,000 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅತ್ಯಾಧುನಿಕ ಕೃತಕ ಬುದ್ಧಿಮತ್ತೆ-ಚಾಲಿತ ಡ್ಯಾಶ್ ಕ್ಯಾಮ್ ಮೇಲ್ವಿಚಾರಣಾ ವ್ಯವಸ್ಥೆ ಪರಿಚಯಿಸಲು ಸಜ್ಜಾಗಿದೆ. ಇದು ಉತ್ತಮ ರಸ್ತೆ ನಿರ್ವಹಣೆಯತ್ತ ಒಂದು ಪ್ರಮುಖ ಹೆಜ್ಜೆಯಾಗಿದೆ. ತಂತ್ರಜ್ಞಾನ-ಚಾಲಿತ ಪ್ರಯತ್ನದ ಭಾಗವಾಗಿ ಘೋಷಿಸಲಾದ ಈ ಯೋಜನೆಯು ನಿರ್ವಹಣಾ ದಕ್ಷತೆಯನ್ನು ಸುಧಾರಿಸುವ, ಸುರಕ್ಷತಾ ಮಾನದಂಡಗಳನ್ನು ಹೆಚ್ಚಿಸುವ ಗುರಿ ಹೊಂದಿದೆ. ಅದೇರೀತಿ ಭಾರತದಾದ್ಯಂತ ದತ್ತಾಂಶ-ಬೆಂಬಲಿತ ಸ್ವಯಂಚಾಲಿತ ತಪಾಸಣಾ ಸಾಧನಗಳನ್ನು ಬಳಸಿಕೊಂಡು ರಸ್ತೆ ಪರಿಸ್ಥಿತಿಗಳ ಟ್ರ್ಯಾಕಿಂಗ್ ಅನ್ನು ಸಕ್ರಿಯಗೊಳಿಸುವ ಗುರಿ ಹೊಂದಿದೆ.

ಎಐ ಡ್ಯಾಶ್‌ಕ್ಯಾಮ್ ಮಾನಿಟರಿಂಗ್ ಸಿಸ್ಟಮ್ ಎಂದರೇನು?: ಡ್ಯಾಶ್‌ಕ್ಯಾಮ್ ಅನಾಲಿಟಿಕ್ಸ್ ಸರ್ವೀಸಸ್ (ಡಿಎಎಸ್) ಎಂದು ಕರೆಯಲಾಗುವ ಈ ಹೊಸ ವ್ಯವಸ್ಥೆಯು ಕೃತಕ ಬುದ್ಧಿಮತ್ತೆ (ಎಐ) ಮತ್ತು ಯಂತ್ರ ಕಲಿಕೆ (ಎಂಎಲ್) ಗಳನ್ನು ಬಳಸಿಕೊಂಡು ಹೆದ್ದಾರಿ ಪರಿಸ್ಥಿತಿಗಳನ್ನು ಮೇಲ್ವಿಚಾರಣೆ ಮಾಡುತ್ತದೆ. ಈ ಯೋಜನೆ ಅನ್ವಯದಲ್ಲಿ, ಮಾರ್ಗ ಗಸ್ತು ವಾಹನಗಳಲ್ಲಿ (ಆರ್‌ಪಿವಿಗಳು) ಹೆಚ್ಚಿನ ರೆಸಲ್ಯೂಶನ್ ಡ್ಯಾಶ್‌ಬೋರ್ಡ್ ಕ್ಯಾಮೆರಾಗಳನ್ನು ಅಳವಡಿಸಲಾಗುವುದು. ಇದು ಹೆದ್ದಾರಿಯ ಉದ್ದಕ್ಕೂ ನಿಯಮಿತ ಸಮೀಕ್ಷೆಗಳನ್ನು ನಡೆಸಲಿದೆ.



ಕ್ಯಾಮೆರಾದಲ್ಲಿ ದತ್ತಾಂಶ ಸೆರೆ: ಈ ಕ್ಯಾಮೆರಾಗಳು ನಿರಂತರವಾದ ವಿಡಿಯೋ ಮತ್ತು ಚಿತ್ರ ದತ್ತಾಂಶವನ್ನು ಸೆರೆಹಿಡಿಯುತ್ತವೆ. ನಂತರ ಅದನ್ನು ಕೃತಕ ಬುದ್ಧಿಮತ್ತೆ-ಚಾಲಿತ ಮಾದರಿಗಳ ಮೂಲಕ ಅದನ್ನು ಸಂಗ್ರಹಿಸಿಕೊಳ್ಳಲಾಗುತ್ತದೆ. ಈ ವ್ಯವಸ್ಥೆಯನ್ನು 30ಕ್ಕೂ ಹೆಚ್ಚು ರೀತಿಯ ರಸ್ತೆ ದೋಷಗಳು ಮತ್ತು ವೈಪರೀತ್ಯಗಳನ್ನು ಸ್ವಯಂಚಾಲಿತವಾಗಿ ಗುರುತಿಸಲು ವಿನ್ಯಾಸಗೊಳಿಸಲಾಗಿದೆ. ಇದು ಸ್ವಯಂಚಾಲಿತ ತಪಾಸಣೆ ಮಾಡುವ ಅಗತ್ಯವನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ. ಸಮಸ್ಯೆಯನ್ನು ವೇಗವಾಗಿ ಪತ್ತೆಹಚ್ಚಲು ಅನುವು ಮಾಡಿಕೊಡುತ್ತದೆ.

ಕೃತಕ ಬುದ್ಧಿಮತ್ತೆ-ಚಾಲಿತ ವ್ಯವಸ್ಥೆಯು ಪ್ರಾಥಮಿಕವಾಗಿ ಗುಂಡಿಗಳು, ಬಿರುಕುಗಳು ಮತ್ತು ಮೇಲ್ಮೈ ಉದುರುವಿಕೆ ಸೇರಿದಂತೆ ಪಾದಚಾರಿ ಪರಿಸ್ಥಿತಿಗಳ ಮೇಲೆ ಕೇಂದ್ರೀಕರಿಸುತ್ತದೆ. ಇದಲ್ಲದೆ, ಇದು ಲೇನ್ ಗುರುತುಗಳು, ಕ್ರ್ಯಾಶ್ ಅಡೆತಡೆಗಳು, ಬೀದಿ ದೀಪಗಳು ಮತ್ತು ಸಂಕೇತಗಳಂತಹ ರಸ್ತೆ ಮೂಲಸೌಕರ್ಯಗಳನ್ನು ಮೇಲ್ವಿಚಾರಣೆ ಮಾಡುತ್ತದೆ.

ಸಂಪಾದಕೀಯ

ಸುದೀರ್ಘ ಜನಸೇವಕ!

ನರೇಂದ್ರ ಮೋದಿಯವರು ತಮ್ಮ ಹಲವಾರು ದಾಖಲೆಗಳ ಕಿರೀಟಕ್ಕೆ ಮತ್ತೊಂದು ಗರಿ ಸೇರಿಸಿಕೊಂಡಿದ್ದು, ಸುದೀರ್ಘ ಅವಧಿಗೆ ಸರಕಾರದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ ವಿನೂತನ ದಾಖಲೆಯೂ ಈಗ ಅವರದಾಗಿದೆ. ಮಾರ್ಚ್ 22ರ ಭಾನುವಾರದ ವೇಳೆಗೆ ಅವರು 8931 ದಿನಗಳ ಸುದೀರ್ಘ ಕಾಲ ಸರಕಾರದ ಮುಖ್ಯಸ್ಥರಾಗಿ ಅಧಿಕಾರ ನಿರ್ವಹಿಸಿದ ಸಾಧನೆ ಮಾಡಿದ್ದು, ಇದು ಈ ಹಿಂದೆ ಸಿಕ್ಕಿಂನ ಮಾಜಿ ಮುಖ್ಯಮಂತ್ರಿ ಪವನ್ ಕುಮಾರ್ ಚಾಮ್ಲಿಂಗ್ 8930



ದಿನಗಳ ಕಾಲ ಅಧಿಕಾರದಲ್ಲಿದ್ದ ಸಾಧನೆಯನ್ನು ಮೀರಿದಂತಾಗಿದೆ. 2007ರ ಅಕ್ಟೋಬರ್ 21ರಂದು ಗುಜರಾತಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನರೇಂದ್ರ ಮೋದಿಯವರು, ಅಲ್ಲಿ 13 ವರ್ಷಗಳ ಕಾಲ ರಾಜ್ಯಭಾರ ನಡೆಸಿ, ಅಲ್ಲಿಂದ ಬಳಿಕ 2014ರ ಮೇ 26ರಂದು ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. 2014, 2019 ಮತ್ತು 2024ರ ಮೂರೂ ಲೋಕಸಭಾ ಚುನಾವಣೆಗಳಲ್ಲಿ ಗೆಲುವು ಸಾಧಿಸಿ ನಿರಂತರ ಮೂರು ಅವಧಿಗೆ ಪ್ರಧಾನಿಯಾಗಿ ಕಾರ್ಯನಿರ್ವಹಿಸುತ್ತಿರುವ ಹೆಗ್ಗಳಿಕೆಯೂ ಅವರದಾಗಿದೆ. ಲೋಕಸಭೆಯಲ್ಲಿ ಪೂರ್ಣ ಬಹುಮತ ಪಡೆದ ಮೊದಲ ಕಾಂಗ್ರೆಸ್ಸೇತರ ಪ್ರಧಾನಿ ಎಂಬ ಶ್ರೇಯಸ್ಸೂ ಮೋದಿಯವರದಾಗಿದೆ.

ಸರಕಾರವೊಂದು ಅಥವಾ ಸರಕಾರಿ ಮುಖ್ಯಸ್ಥರೊಬ್ಬರು ಅತ್ಯಲ್ಪಾವಧಿಯಲ್ಲೇ "ಆಡಳಿತ ವಿರೋಧಿ ಅಲೆ" ಎದುರಿಸುವ ನಿದರ್ಶನಗಳು ಸಾಕಷ್ಟಿರುವಾಗ ಮೋದಿಯವರು ಇಷ್ಟೊಂದು ದೀರ್ಘ ಕಾಲ ಆಡಳಿತದಲ್ಲಿ ಮುಂದುವರಿದುಕೊಂಡು ಬಂದಿರುವುದು ಸಾಮಾನ್ಯ ಸಾಧನೆಯೇನಲ್ಲ. ಆರಂಭದಲ್ಲಿ ಗುಜರಾತಿನ ಜನರು ಹಾಗೂ ಈಗ ದೇಶದ ಜನರು ಮೋದಿಯವರ ಮೇಲಿಟ್ಟಿರುವ ಪ್ರೀತಿ, ವಿಶ್ವಾಸಕ್ಕೆ ಇದು ಸಾಕ್ಷಿಯೆನ್ನಬಹುದು. ಮುಖಂಡನೊಬ್ಬ ಜನತೆಯ ಕಲ್ಯಾಣಕ್ಕೆ ಶ್ರಮಿಸದ ಹೊರತು ಹೀಗೆ ನಿರಂತರವಾಗಿ ಜನರ ವಿಶ್ವಾಸ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಅಂತಿರುವಾಗ ಮೋದಿಯವರು ಈಗಲೂ ಜನರ ವಿಶ್ವಾಸ ಉಳಿಸಿಕೊಂಡಿರಬೇಕಾದರೆ, ಅವರು ನೀಡಿದ ಸುಶಾಸನವೇ ಅದಕ್ಕೆ ಕಾರಣ. ಮೋದಿಯವರು ಅನುಷ್ಠಾನಿಸಿರುವ ಹಲವಾರು ಕಾರ್ಯಕ್ರಮಗಳು ದೇಶದ ಅಭಿವೃದ್ಧಿಗೆ ಕಾರಣವಾಗಿವೆ, ಜನರ ಜೀವನಮಟ್ಟವನ್ನು ಸುಧಾರಿಸಿವೆ, ಜನತೆಯ ಸಂಕಷ್ಟಗಳನ್ನು ನಿವಾರಿಸಿವೆ. ದೇಶದ ಹಲವಾರು ಬಿಕ್ಕಟ್ಟುಗಳನ್ನು ಸಮರ್ಥವಾಗಿ ನಿಭಾಯಿಸಿದ ಹಿರಿಮೆ ಮೋದಿಯವರದು.

ದೇಶೀಯವಾಗಿಯಷ್ಟೇ ಅಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲೂ ಮೋದಿಯವರು ಈಗ ಜನಪ್ರಿಯ ನಾಯಕರಾಗಿದ್ದಾರೆ. ಜಾಗತಿಕವಾಗಿ ಭಾರತಕ್ಕೆ ಒಂದು ಘನತೆ ತಂದುಕೊಟ್ಟ ಕೀರ್ತಿ ಮೋದಿಯವರಿಗೆ ಸಲ್ಲಬೇಕಾಗಿದೆ. ಯಾವುದೇ ದೇಶ, ಯಾವುದೇ ರಾಷ್ಟ್ರ ಮುಖಂಡ ಈಗ ಮೋದಿಯವರ ಮಾತಿಗೆ ಕಿವಿಗೊಡುವ, ಅವರ ಅಭಿಪ್ರಾಯಕ್ಕೆ ಮನ್ನಣೆ ನೀಡುವ ಪರಿಸ್ಥಿತಿಯೀಗ ಸೃಷ್ಟಿಯಾಗಿದೆ. ಒಟ್ಟಿನಲ್ಲಿ, ಭಾರತವು ವಿಶ್ವಗುರುವಾಗುವ ನಿಟ್ಟಿನಲ್ಲಿ ಮೋದಿ ಕೊಡುಗೆ ಮಹತ್ವದ್ದಾಗಿದೆ.

ಗೆಲ್ಲುವವನು ಗುಣಶಾಲಿ

ಸಭಾ ಜಿತಾ ವಸ್ತ್ರವತಾ ಮಿಷ್ಟಾಶಾ ಗೋಮತಾ ಜಿತಾ ।
ಅಧ್ವಾಜಿತೋ ಯಾನವತಾ ಸರ್ವಂ ಶೀಲವತಾ ಜಿತಾ ॥ – ಮಹಾಭಾರತ

ಉಡುಗೆಯಿದ್ದವನು ಸಭೆಯನ್ನು ಜಯಿಸುತ್ತಾನೆ. ಹಸುಗಳು ಇದ್ದವನು ಸಿಹಿ ತಿನಿಸುಗಳ ಆಸೆಯನ್ನು ಗೆಲ್ಲುತ್ತಾನೆ. ವಾಹನವಿದ್ದವನು ದಾರಿಯನ್ನು ಗೆಲ್ಲುತ್ತಾನೆ. ಗುಣಶಾಲಿಯು ಎಲ್ಲವನ್ನೂ ಗೆಲ್ಲುತ್ತಾನೆ – ಎಂಬುದು ಶ್ಲೋಕಾರ್ಥ.

ಬಟ್ಟೆಯಿಂದೇನು ಮಹಾ! ಅದರಿಂದೇನಾಗಲಿಕ್ಕಿದೆ? ಮಾನ ಮುಚ್ಚಲು ಬಟ್ಟೆಯಿದ್ದರೆ ಸಾಕು ಎನ್ನುವವರು ಕೆಲವರಿದ್ದಾರೆ. ಹಾಗೆಂದುಕೊಳ್ಳಬಾರದು. ತೊಟ್ಟ ಬಟ್ಟೆಯನ್ನೇ ನೋಡಿ ಗೌರವ ಕೊಡುವವರಿದ್ದಾರೆ. ಅದಕ್ಕಾಗಿ ಕವಿಯೊಬ್ಬ ಹೇಳುತ್ತಾನೆ. "ಕಿಂ ವಾಸಸ್ಯೈವಂ ನ ವಿಚಾರಣೀಯಮ್" ಅಂದರೆ ಉಡುವ ಉಡುಪಿನಿಂದೇನು? ಎಂದು ಚರ್ಚೆ ಮಾಡಬಾರದಂತೆ. ಯೋಗ್ಯತೆಗೆ ಉಡುಗೆಯೂ ಮುಖ್ಯವೆಂದು ದೃಷ್ಟಾಂತದೊಂದಿಗೆ ಯುಕ್ತವಾಕು ಪಠಿಸುತ್ತಾನೆ. ಸಮುದ್ರ ಮಥನ ಮಾಡಿ ವಿಷ ಬಂದಾಗ ಚರ್ಮಾಂಬರಧಾರಿಯಾದ ಶಿವನಿಗೆ ಕೊಟ್ಟರಂತೆ. ಮುಂದೆ ಲಕ್ಷ್ಮಿ ಬಂದಾಗ ಪೀತಾಂಬರಧಾರಿಯಾದ ವಿಷ್ಣುವಿಗೆ ಇತ್ತರಂತೆ. ಧರಿಸುವ ಆಕರ್ಷಕ ಉಡುಪುಗಳು ಲಾಭವನ್ನುಂಟು ಮಾಡುತ್ತವೆ. ಗೌರವವನ್ನು ತಂದುಕೊಡುತ್ತವೆ.

ಇಂದೂ ಕೂಡ ತೊಟ್ಟ ಬಟ್ಟೆಯನ್ನು ನೋಡಿ ಗೌರವ ಕೊಡುವವರಿದ್ದಾರೆ. ಸಾರ್ವಜನಿಕ



ಸಭೆ ಸಮಾರಂಭಗಳಲ್ಲಿ, ಕಾರ್ಯಕ್ರಮಗಳಲ್ಲಿ ಉತ್ತಮ ಪೋಷಾಕನ್ನು ಧರಿಸಿದ್ದರೆ ಆದರಾತಿಥ್ಯ ಹೆಚ್ಚು. ವಿದ್ವತ್ ಶಾಲನ್ನು ಹೊದ್ದು ಸಭೆಯನ್ನು ಪ್ರವೇಶಿಸಿದರೆ ಜ್ಞಾನಿಯೆಂದೇ ಗೌರವಿಸುತ್ತಾರೆ. ಸಭೆಯಲ್ಲಿದ್ದವರನ್ನೆಲ್ಲ ಗೆದ್ದಂತೆ ತೊಡುವ ಬಟ್ಟೆಗೂ ಗೌರವವಿದೆಯೆಂಬುದನ್ನು ಮರೆಯಬಾರದು. ಎಲ್ಲಿ? ಹೇಗೆ? ಹೋಗಬೇಕು? ಯಾವ ಉಡುಗೆ ಧರಿಸಿ ಹೋಗಬೇಕು. ಇತ್ಯಾದಿ ವಸ್ತ್ರಸಂಹಿತೆ ಪ್ರಜ್ಞೆ ಇದ್ದರೆ ಒಳ್ಳೆಯದು. ದೇವಸ್ಥಾನದಂತಹ ಭಕ್ತಿ ಕೇಂದ್ರಕ್ಕೆ ಹೋಗುವಾಗ ಅರ್ಧ ಚಡ್ಡಿ, ಮುಕ್ಕಾಲು ಚಡ್ಡಿ, ಚಿಕ್ಕ ಬಟ್ಟೆ ಇವುಗಳು ಗೌರವವನ್ನು ತಂದುಕೊಡುವುದಿಲ್ಲ; ಸಂಸ್ಕೃತಿಯೂ ಅಲ್ಲ. ಸಂಸ್ಕೃತಿಗೆ ಪೂರಕ ಉಡುಪು ಎಲ್ಲೆಡೆಯೂ ಗೌರವಕ್ಕೆ ಕಾರಣವಾಗುತ್ತದೆ. ಯಾರು ಹಸು ಸಾಕುತ್ತಾರೋ ಅವರ ಮನೆಯಲ್ಲಿ ಹಾಲು, ಮೊಸರು, ಬೆಣ್ಣೆ, ತುಪ್ಪಗಳಿಗೆ ಕೊರತೆಯಿರದು. ಹೆಚ್ಚಿನ ತಿನಿಸುಗಳಿಗೆ ಇವುಗಳು ಬೇಕೇ ಬೇಕು. ಸಿಹಿಯಾದ ಖಾದ್ಯ ತಯಾರಿಕೆಗೆ ತುಪ್ಪ ತೀರಾ ಅವಶ್ಯಕ. ಮನೆಯಲ್ಲಿ ತುಪ್ಪವೊಂದಿದ್ದರೆ ಯಾವುದೇ ಸಮಯದಲ್ಲಿ ವೈವಿಧ್ಯಮಯ ಸಿಹಿ ತಿಂಡಿಗಳನ್ನು ಮಾಡಿ ಸವಿಯಲು ಸಾಧ್ಯ.

ವಾಹನವೊಂದಿದ್ದರೆ ಬೇಕಾದಲ್ಲಿಗೆ ಹೋಗಬಹುದು. ಬೇಕಾದ ಸಮಯ, ಸಂದರ್ಭಕ್ಕೆ ಹೋಗಬಹುದು. ಇದರಿಂದ ನಡೆಯುವ ಆಯಾಸವೂ ತಪ್ಪುವುದು. ದೂರದೂರದ ಮಾರ್ಗವನ್ನು ಬಂಧಿಸುವುದಕ್ಕೆ ವಾಹನ ತುಂಬ ಉಪಯೋಗಿ. ಕಡಿಮೆ ಸಮಯದಲ್ಲಿ ಹೆಚ್ಚು ದೂರ ಕ್ರಮಿಸಬಹುದು. ಹೆಚ್ಚು ಕಾರ್ಯಕ್ರಮಗಳಿಗೆ ಹೋಗಬಹುದು. ಸಮಯವನ್ನು ಉಳಿಸುವುದಕ್ಕೂ, ಆಯಾಸವನ್ನು ಕಡಿಮೆ ಮಾಡುವುದಕ್ಕೂ ವಾಹನ ಅತ್ಯಂತ ಉಪಯುಕ್ತ. ಮೇಲೆ ಹೇಳಿದ ಸಂದರ್ಭಗಳಲ್ಲಿ ಅವುಗಳಿಗೆ ಸಂಬಂಧಿಸಿದ ಸನ್ನಿವೇಶವನ್ನು ಜಯಿಸಿಯಶಸ್ವಿಯಾಗುವುದನ್ನು ಹೇಳಲಾಗಿದೆ. ಇವುಗಳಿಗೆಲ್ಲಕ್ಕಿಂತಲೂ ಮುಖ್ಯವಾದದ್ದು ಶೀಲ. ಶೀಲವೆಂದರೆ ಉತ್ತಮ ಗುಣನಡತೆ. ಮನುಷ್ಯರಲ್ಲಿ ಇದೊಂದು ಸರಿಯಾಗಿದ್ದರೆ ಎಲ್ಲವನ್ನೂ ಜಯಿಸಬಹುದು. ಉತ್ತಮ ಗುಣ ನಡತೆಗೆ ಮನಸೋಲದವರು ವಿರಳ. ಇದೊಂದರಿಂದಲೇ ಎಲ್ಲವನ್ನೂ ಸಾಧ್ಯ ಮಾಡಲು ಆಗುವಾಗ ನಾವೆಲ್ಲ ಪ್ರಯತ್ನಪೂರ್ವಕವಾಗಿ ಶೀಲವಂತರಾಗಬೇಕು.

ಎಲ್‌ಪಿಜಿಗೆ ಪರ್ಯಾಯ–ಗೋಬರ್‌ಗ್ಯಾಸ್



ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಕಾವಿಗೆ ಇಲ್ಲಿಯ ವಿರೋಧಪಕ್ಷದವರು ರಸ್ತೆಯಲ್ಲಿ ಸೌದೆ ಒಲೆ ಹಚ್ಚಿ ಚಹಾ ತಯಾರಿಸಿ ಕುಡಿಯುತ್ತಿದ್ದಾರೆ. ಕೇಂದ್ರ ಸರ್ಕಾರ ಹಾಗೂ ಪ್ರಧಾನ ಮಂತ್ರಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಬದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ನಮ್ಮ ದೇಶಕ್ಕೆ ತೈಲೋತ್ಪನ್ನಗಳು ವಿದೇಶಗಳಿಂದಲೇ ಇಂದಿಗೂ ಪೂರೈಕೆ ಆಗಬೇಕು ಎನ್ನುವುದು ಇವರಿಗೆ ತಿಳಿಯದ ಸಂಗತಿಯೇನಲ್ಲ. ಭಾರತ ಇಂದಿಗೂ ತೈಲೋತ್ಪನ್ನ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಿಲ್ಲ. ಈಗ ಮಧ್ಯಪ್ರಾಚ್ಯವು ಯುದ್ಧದಿಂದ ಧಗಧಗಿಸುತ್ತಿರೋದು ಚಿಕ್ಕ ಮಕ್ಕಳಿಗೂ ತಿಳಿದ ವಿಚಾರ. ಯುದ್ಧದ ತೀವ್ರತೆ ಯುದ್ಧದಲ್ಲಿ ಪಾಲ್ಗೊಂಡ ದೇಶಗಳಷ್ಟೇ ಅಲ್ಲದೇ, 'ನಮಗೆ ಯುದ್ಧ ಬೇಡ ಬುದ್ಧ ಬೇಕು' ಎಂದು ತಟಸ್ಥವಾಗಿ ಉಳಿದುಕೊಂಡ ದೇಶಗಳನ್ನೂ ಸಹ ಬಿಟ್ಟಿಲ್ಲ. ತೈಲವನ್ನು ಉತ್ಪಾದಿಸುವ ದೇಶಗಳೇ ಯುದ್ಧದ ಹೊಡೆತಕ್ಕೆ ತತ್ತರಿಸುತ್ತಿವೆ. ಅರಬ್ ದೇಶಗಳಲ್ಲಿನ ಕೆಲವು ಪ್ರಮುಖ ತೈಲ ಸಂಸ್ಕರಣಾ ಘಟಕಗಳು ದಾಳಿಯಲ್ಲಿ ಧ್ವಂಸಗೊಂಡಿವೆ. ಇದರ ಪರಿಣಾಮ ರಫ್ತು ಮಾಡೋದು ಪಕ್ಕಕ್ಕಿರಲಿ ಅವರ ಬಳಕೆಗೂ ಪೆಟ್ರೋಲಿಯಂ ಉತ್ಪನ್ನಗಳು ಸಿಗೋದು ಕಷ್ಟಕರವಾಗಿದೆ. ಇಂತಹ ಸಂದರ್ಭದಲ್ಲಿ ಕಚ್ಚಾ ತೈಲವನ್ನು ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ಭಾರತದಂತಹ ದೇಶಗಳ ಪರಿಸ್ಥಿತಿ ಬಿಗಡಾಯಿಸುವುದು ಸಹಜ. ಇಂತಹ ಪರಿಸ್ಥಿತಿಯಲ್ಲಿ ಎಲ್‌ಪಿಜಿ, ಪೆಟ್ರೋಲ್, ಡೀಸೆಲ್ ಸೇರಿದಂತೆ ಎಲ್ಲಾ ರೀತಿಯ ತೈಲೋತ್ಪನ್ನಗಳಿಗೆ ದೇಶದಲ್ಲಿ ಅಭಾವವಾಗುವುದು ಸಾಮಾನ್ಯ. ಇಷ್ಟೆಲ್ಲಾ ತೊಂದರೆಗಳು ಎದುರಾಗಿದ್ದಾಗಿಯೂ ಕೇಂದ್ರ ಸರ್ಕಾರದ ಮುಂದಾಲೋಚನೆ ಹಾಗೂ ಕೈಗೊಂಡಿರುವ ಕೆಲವು ರಾಜತಾಂತ್ರಿಕ ನಿಲುವುಗಳ ಕಾರಣದಿಂದ ಇತರೆ ಕೆಲವು ದೇಶಗಳಿಗೆ ಹೋಲಿಸಿದರೆ ಇದರ ಬಿಸಿ ಅಷ್ಟಾಗಿ ಭಾರತಕ್ಕೆ ಮುಟ್ಟಿಲ್ಲ. ಒಂದರ್ಥದಲ್ಲಿ ಭಾರತೀಯರಾದ ನಾವು ಸಾಕಷ್ಟು ಸುರಕ್ಷಿತರಾಗಿದ್ದೇವೆ. ಇಂತಹ ಸಂದರ್ಭದಲ್ಲಿ ವಿರೋಧ ಪಕ್ಷದವರು ಕೇಂದ್ರ ಸರ್ಕಾರಕ್ಕೆ ನೈತಿಕ ಬೆಂಬಲ ನೀಡಬೇಕೆ ವಿನಃ ಜನಸಾಮಾನ್ಯರ ನಡುವೆ ಸುಳ್ಳು ಸುದ್ದಿಗಳನ್ನು ಹರಡುತ್ತಾ, ಸರ್ಕಾರದ ವಿರುದ್ಧ ಜನರನ್ನು ಎತ್ತಿಕಟ್ಟಲು ಪ್ರಯತ್ನಿಸುವುದು ಸರಿಯಲ್ಲ. ಎಲ್‌ಪಿಜಿ ಅಥವಾ ಇತರೆ ಪೆಟ್ರೋಲಿಯಂ ಉತ್ಪನ್ನಗಳನ್ನು ಉತ್ಪಾದಿಸಬಲ್ಲ ಯಾವುದಾದರೂ ತಂತ್ರಜ್ಞಾನ, ಯಂತ್ರೋಪಕರಣಗಳು ವಿರೋಧ ಪಕ್ಷದ ಬತ್ತಳಿಕೆಯಲ್ಲಿದ್ದರೆ ದಯವಿಟ್ಟು ಅವುಗಳನ್ನು ಕೇಂದ್ರ ಸರ್ಕಾರಕ್ಕೆ ಹಸ್ತಾಂತರಿಸುವ ಮೂಲಕ ಈ ಸಮಸ್ಯೆಗೆ ಪರಿಹಾರವನ್ನು ನೀಡಿ ದೇಶವಾಸಿಗಳಿಗೆ ನೆರವಾಗಬೇಕು.

ಇಂದಿನ ತೈಲೋತ್ಪನ್ನಗಳ ಅಭಾವದ ಎಲ್ಲಾ ಸಮಸ್ಯೆಗಳಿಗೆ ಪ್ರಮುಖ ಕಾರಣ ಇರಾನ್ ಸಮುದ್ರ ಮಾರ್ಗದ ಮೂಲಕ ತೈಲ ಸಾಗಾಟಕ್ಕೆ ಅಡಚಣೆಯನ್ನು ಉಂಟು ಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಚಾರ. ತೈಲೋತ್ಪನ್ನಗಳನ್ನು ಹೊತ್ತು ಸಾಗುವ ಹೊರ್ಮುಜ್ ಜಲಸಂಧಿ ಬಂದ್ ಆಗಿದೆ. ಇರಾನ್‌ನ ಈ ಧೋರಣೆಯಿಂದ ಹಲವು ದೇಶಗಳ ಆರ್ಥಿಕ ಸ್ಥಿತಿ ಪಾತಾಳ ಮುಟ್ಟಿದೆ. ಭಾರತವೂ ಸೇರಿದಂತೆ ವಿಶ್ವದೆಲ್ಲೆಡೆ ಗ್ಯಾಸ್, ಪೆಟ್ರೋಲ್, ಡೀಸೆಲ್ ಮತ್ತು ಎಲ್ಲಾ ಪೆಟ್ರೋಲಿಯಂ ಉತ್ಪನ್ನಗಳಿಗೆ ಹಾಹಾಕಾರ ಉಂಟಾಗಿದೆ. ಭಾರತದ ಇಂಧನ ಭವಿಷ್ಯದ ಬಗ್ಗೆ ಚರ್ಚೆ ನಡೆಯುವಾಗ ಬಹುಶಃ ನಮ್ಮ ದೃಷ್ಟಿ ಎಲ್‌ಪಿಜಿ, ನೈಸರ್ಗಿಕ ಅನಿಲ ಅಥವಾ ಜಾಗತಿಕ ಇಂಧನ ಮಾರುಕಟ್ಟೆಯತ್ತ ಹೋಗುತ್ತದೆ. ಇದರ ಬದಲಿಗೆ ಸ್ವದೇಶಿ ಚಿಂತನೆಯ ಪ್ರತಿಪಾದಕರಾದ ರಾಜೀವ್ ದೀಕ್ಷಿತ್ ಹೇಳಿದ ಸ್ವಾವಲಂಬಿ ಗ್ರಾಮೀಣ ವ್ಯವಸ್ಥೆಯತ್ತ ಯಾರ ಕಣ್ಣು ಹೊರಳುವುದೇ ಇಲ್ಲ. ಗ್ರಾಮಗಳು ತಮ್ಮ ಅಗತ್ಯಗಳನ್ನು ತಮ್ಮಲ್ಲೇ ದೊರೆಯುವ ಸಂಪನ್ಮೂಲಗಳಿಂದ ಪೂರೈಸಿಕೊಳ್ಳುವ ಮೂಲಕ ತಮ್ಮ ಗ್ರಾಮಗಳನ್ನಷ್ಟೇ ಅಲ್ಲದೆ ದೇಶವನ್ನು ಸ್ವಾವಲಂಬಿಯನ್ನಾಗಿಸುವ ನಿಟ್ಟಿನಲ್ಲಿ ಯಾರೂ ಯೋಚಿಸುವುದೇ ಇಲ್ಲ. ಇಂಧನ ಕ್ಷೇತ್ರದಲ್ಲಿಯೂ ಇದೇ ತತ್ವ ಅನ್ವಯಿಸುತ್ತದೆ. ತೀರ ಇತ್ತೀಚಿನವರೆಗೂ ಭಾರತದ ಗ್ರಾಮೀಣ ಜೀವನದಲ್ಲಿ ಬೆರಣಿ, ಮರದ ಇಂಧನ, ಕೃಷಿ ಅವಶೇಷಗಳು, ತೆಂಗಿನ ಚಿಪ್ಪುಗಳು ಮತ್ತು ಬಯೋಗ್ಯಾಸ್ ಘಟಕಗಳು ಸಾಮಾನ್ಯವಾಗಿದ್ದವು. ಇದು ಕೇವಲ ಅಡುಗೆಗಾಗಿ ಬಳಸುವಂತಹ ಇಂಧನವಾಗಿರಲಿಲ್ಲ, ಅದೊಂದು ಸಂಪೂರ್ಣ ಶೂನ್ಯ ಖರ್ಚಿನ ಮತ್ತು ತ್ಯಾಜ್ಯ ನಿರ್ವಹಣೆಯ ಒಂದು ಜೀವನ ಪದ್ಧತಿಯ ಭಾಗವಾಗಿತ್ತು. ಗೋಮಯ ಅಥವಾ ಆಹಾರ ತ್ಯಾಜ್ಯವನ್ನು ಬಯೋಗ್ಯಾಸ್ ಘಟಕದಲ್ಲಿ ಹಾಕಿದರೆ ಮೀಥೇನ್ ಅನಿಲ ದೊರೆಯುತ್ತಿತ್ತು. ಈ ಅನಿಲ ಅಡುಗೆಯ ಉರುವಲಾಗಿ ಬಳಕೆಯಾಗುತ್ತಿತ್ತು. ಉಳಿದ ಸ್ಲರಿ ಅಥವಾ ತ್ಯಾಜ್ಯ ಉತ್ತಮ ಸಾವಯವ ಗೊಬ್ಬರವಾಗಿ ಕೃಷಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿತ್ತು.

ವಿಜ್ಞಾನಿಗಳು ಹೇಳುವ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ ಸುಮಾರು 450 ರಿಂದ 500 ಮಿಲಿಯನ್ ಟನ್ ಬಯೋಮಾಸ್ ಸಂಪನ್ಮೂಲಗಳು ಲಭ್ಯವಿದೆ. ಕೃಷಿ ಅವಶೇಷಗಳು, ಕಬ್ಬಿನ ಗ್ಯಾಸ್, ಅಕ್ಕಿ ಹುಲ್ಲು, ತೆಂಗಿನ ಚಿಪ್ಪು, ಪಶು ಮಲ ಮೂತ್ರ ಸೇರಿದಂತೆ ದೊರೆಯುವ ಎಲ್ಲಾ ರೀತಿಯ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಂಡಿದ್ದೇ ಆದಲ್ಲಿ ಗ್ರಾಮೀಣ ಭಾರತದಲ್ಲಿ ದೊಡ್ಡ ಮಟ್ಟದ ಇಂಧನ ಸ್ವಾವಲಂಬನೆ ಸಾಧ್ಯ. ನಿರಂತರ ನಡೆಯುತ್ತಿರುವ ಗೋವುಗಳ ಹತ್ಯೆಯ ನಂತರವೂ ಇವರು ಹೇಳುವಂತೆ ಸದ್ಯಕ್ಕೆ ದೇಶದಲ್ಲಿ ದೊರೆಯುವ ಗೋಸಂಪತ್ತಿನಿಂದ ಅನಿಲ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧ್ಯವಿರುವುದು ಅಂಕಿ ಅಂಶಗಳಿಂದ ದೃಢಪಡುತ್ತದೆ. ಸಗಣಿ ಗೊಬ್ಬರದಿಂದ ಉತ್ಪತ್ತಿಯಾಗುವ ಗೋಬರ್ ಗ್ಯಾಸನ್ನು ಇಂಧನ ಮತ್ತು ಬೆಳಕಿಗೆ ಪರ್ಯಾಯವಾಗಿ ಬಳಸುವುದರೊಂದಿಗೆ ಪರಿಸರವನ್ನು ಕಾಪಾಡಬಹುದಾಗಿದೆ.

ಒಂದು ಸಮೀಕ್ಷೆಯ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೆ ಸರಾಸರಿ 8 ಘನ ಅಡಿ ಬಯೋಗ್ಯಾಸ್ ಒಂದು ದಿನದ ಊಟ ತಯಾರಿಸಲು ಮತ್ತು 3 ರಿಂದ 4 ಘಂಟೆ ದೀಪಗಳನ್ನು ಬೆಳಗಿಸಲು ಬೇಕಾಗುತ್ತದೆ. 4 ರಿಂದ 5 ಜನರಿರುವ ಪರಿವಾರಕ್ಕೆ 35 ಘನ ಅಡಿ ಗ್ಯಾಸ್‌ನ ಅವಶ್ಯಕತೆ ಇದೆ. ಒಂದು ಹಸು 7 ರಿಂದ 8 ಕೆ.ಜಿ ಮತ್ತು ಒಂದು ಜೋಡಿ ಎತ್ತು 12 ರಿಂದ 15 ಕೆ.ಜಿ. ಗೊಬ್ಬರವನ್ನು ಪ್ರತಿದಿನ ಕೊಡುತ್ತದೆ. 35 ಘನ ಅಡಿ ಗ್ಯಾಸ್ ತಯಾರಿಕೆಗೆ 25 ಕೆ.ಜಿ.ಯಷ್ಟು ಗೊಬ್ಬರದ ಅವಶ್ಯಕತೆ ಇದೆ. ಈ ರೀತಿ 4 ರಿಂದ 5 ಜನರಿರುವ ಪರಿವಾರಕ್ಕೆ ಒಂದು ಹಸು ಅಥವಾ ಎರಡು ಎತ್ತುಗಳು ಅಡುಗೆ ಅನಿಲ ಮತ್ತು ಬೆಳಕಿನ ಅಭಾವವನ್ನು ನೀಗುತ್ತವೆ.

ಹಾಜಾ ಗೋಮಯವನ್ನು ಅಡಿಗೆ ಅನಿಲ ಉತ್ಪಾದಕ ಘಟಕದಲ್ಲಿ ದ್ರಾವಣ ಮಾಡಿ ಹಾಕಿದಾಗ ಗೋಮಯದಲ್ಲಿ ಸೂಕ್ಷ್ಮ ಜೀವಾಣುಗಳು ಅನಿಲ ಉತ್ಪಾದನೆಯನ್ನು ಮಾಡುತ್ತವೆ. ಇಂತಹ ಅನಿಲದಿಂದ ಅಡುಗೆ ಮಾಡುವುದರಿಂದ ವಾತಾವರಣ ಕಲುಷಿತವಾಗುವುದನ್ನು ತಪ್ಪಿಸಬಹುದಾಗಿದೆ. ಈಗಾಗಲೇ ಹೇಳಿದಂತೆ ಈ ಅನಿಲವನ್ನು ದೀಪ ಬೆಳಗಲು, ಆಯಿಲ್ ಎಂಜಿನ್ ನಡೆಸಲು, ವಿದ್ಯುತ್ ಉತ್ಪಾದನೆಗೂ ಬಳಸಬಹುದು. ಹೇಳಬೇಕೆಂದರೆ ಸಗಣಿಯಿಂದ ಉತ್ಪತ್ತಿಯಾಗುವ ಈ ಅನಿಲದಿಂದ ಹೆಚ್ಚಿನ ಉಳಿತಾಯವಾಗುತ್ತದೆ. ವಿಪರ್ಯಾಸವೆಂದರೆ ಬಹುಭಾಗ ನಗರವಾಸಿಗಳ ಇಂಧನದ ಮತ್ತು ಅಡಿಗೆ ಅನಿಲದ ಬೇಡಿಕೆಯನ್ನು ಪೂರೈಸಲು ಅಡಿಗೆ ಅನಿಲ ಮತ್ತು ಇಂಧನವನ್ನು ವಿದೇಶಿ ವಿನಿಮಯ ನೀಡಿ ಆಮದು ಮಾಡಿಕೊಳ್ಳಲಾಗುತ್ತಿದೆ.

ನಮ್ಮಲ್ಲಿರುವ ಗೋಸಂಪತ್ತಿನಿಂದ ದೊರೆಯುವ ಸಗಣಿಯ ಕೆಲ ಭಾಗ ಪರಿಸರ ಹಾಗೂ ಇತರ ಬಳಕೆಗಳಿಗೆ, ಅಡುಗೆ ಮತ್ತು ಇಂಧನಕ್ಕೆ ಪರ್ಯಾಯವಾಗಿ ಬಳಸಿದ್ದೇ ಆದಲ್ಲಿ ದೇಶದ ಬಹುಪಾಲು ಇಂಧನ ಮತ್ತು ಅಡುಗೆ ಅನಿಲದ ಬೇಡಿಕೆಯನ್ನು ಯಾವುದೇ ಪೆಟ್ಟಿನಿಲ್ಲದೆ ನೀಗಿಸಬಹುದು. ಇದರಿಂದ ದೇಶದಲ್ಲಿ ಅಡುಗೆ ಮತ್ತು ಇನ್ನಿತರ ಕಾರ್ಯಗಳಿಗಾಗಿ ಆಗುತ್ತಿರುವ ಬೆಲೆ ಕಟ್ಟಲಾಗದಷ್ಟು ಕಟ್ಟಿಗೆ ಮತ್ತು ಇದ್ದಿಲಿನ ಬಳಕೆ ಕಡಿಮೆಯಾಗಿ ಅರಣ್ಯ ನಾಶ ತಪ್ಪುತ್ತದೆ ಹಾಗೂ ಪರಿಸರ ಹಾಳಾಗುವುದು ನಿಲ್ಲುತ್ತದೆ. ಮುಖ್ಯವಾಗಿ ಇಂಧನ ಮತ್ತು ಅಡುಗೆ ಅನಿಲದ ಆಮದು ಕಡಿಮೆಯಾಗಿ ದೇಶದ ಹಣ ದೇಶದಲ್ಲೇ ಉಳಿಯುವುದರಿಂದ ಬೇರೆ ರಚನಾತ್ಮಕ ಕಾರ್ಯಗಳನ್ನು ನಡೆಸಲು ಸಹಾಯವಾಗುತ್ತದೆ.

ಈ ರೀತಿ ಪ್ರತಿ ಪರಿವಾರ, ಪ್ರತಿ ಹಳ್ಳಿಯೂ ಇಂಧನದಿಂದ ಸ್ವಾವಲಂಬಿಯಾದರೆ ದೇಶವೇ ತೈಲ ಕ್ಷೇತ್ರದಲ್ಲಿ ಸ್ವಾವಲಂಬಿಯಾಗುತ್ತದೆ. ಸದ್ಯ ಬಳಸುತ್ತಿರುವ ತೈಲದ ಹಣವನ್ನು ಇನ್ನಿತರ ಅಭಿವೃದ್ಧಿ ಬೆಳವಣಿಗೆಗೆ ಬಳಸಿಕೊಂಡಲ್ಲಿ ದೇಶವು ಪ್ರಗತಿ ಪಥದತ್ತ ಸಾಗಬಹುದಾಗಿದೆ. ಒಂದರ್ಥದಲ್ಲಿ ಭಾರತದ ಹೊಲ ಗದ್ದೆಗಳಲ್ಲಿ, ಪಶು ಸಂಪತ್ತಿನಲ್ಲಿ ಮತ್ತು ಕೃಷಿ ವ್ಯವಸ್ಥೆಯಲ್ಲಿ ಅಪಾರ ಪ್ರಮಾಣದ ಇಂಧನ ಸಂಪತ್ತು ಅಡಗಿದೆ. ಅದನ್ನು ಗುರುತಿಸಿ ಬಳಸುವುದು ನಮ್ಮ ಮುಂದಿನ ಹೆಜ್ಜೆಯಾಗಬೇಕು. ಸ್ವಾವಲಂಬನೆ ಎಂದರೆ ಹೊಸ ಸಂಪನ್ಮೂಲಗಳನ್ನು ಹುಡುಕುವುದು ಮಾತ್ರವಲ್ಲ, ನಮ್ಮದೇ ಭೂಮಿಯಲ್ಲಿ ಇರುವ ಸಂಪತ್ತನ್ನು ಅರಿತು ಬಳಸುವುದೇ ನಿಜವಾದ ಸ್ವಾವಲಂಬನೆ.

ಮೋದಿಯವರ ಸಮರ್ಥ 'ತೈಲ ರಾಜತಾಂತ್ರಿಕತೆ'

▸ ಅರವಿಂದ ಶೆಟ್ಟಿ

ಕೊಲ್ಲಿಯಲ್ಲಿ ಸಮರ ವ್ಯಾಪಿಸಿ, ವಿಶ್ವಾದ್ಯಂತ ತೈಲ ಬಿಕ್ಕಟ್ಟು ನಿರ್ಮಾಣವಾಗಿರುವ ಮಧ್ಯೆಯೇ ಕೆಲ ದಿನಗಳ ಹಿಂದೆ ಶಿವಾಲಿಕ್ ಮತ್ತು ನಂದಾದೇವಿ ಹೆಸರಿನ ಎರಡು ಎಲ್‌ಪಿಜಿ ಟ್ಯಾಂಕರ್‌ಗಳು ಗುಜರಾತಿಗೆ ಬಂದಿಳಿದವು. ಅವೆರಡರಲ್ಲಿದ್ದ ಒಟ್ಟು ಅಡುಗೆ ಅನಿಲ 92,712 ಮೆಟ್ರಿಕ್ ಟನ್. ಅದರ ಬೆನ್ನಿಗೇ 81000 ಮೆಟ್ರಿಕ್ ಟನ್ ಕಚ್ಚಾ ತೈಲ ಹೊತ್ತ ಮತ್ತೊಂದು ಹಡಗು ಕೂಡಾ ಭಾರತಕ್ಕೆ ಬಂದಿಳಿಯಿತು. ಪರ್ಷಿಯನ್ ಗಲ್ಫ್ ಸಾಗರದಲ್ಲಿ ಇನ್ನೂ ಕೆಲವು ಭಾರತದ ಹಡಗುಗಳು ಸ್ವದೇಶಕ್ಕೆ ಬರಲು ಸಿದ್ಧವಾಗುತ್ತಿವೆ. ಅವು 2 ಲಕ್ಷ ಮೆಟ್ರಿಕ್ ಟನ್ ಎಲ್‌ಎನ್‌ಜಿ ಮತ್ತು 16.7 ಲಕ್ಷ ಮೆಟ್ರಿಕ್ ಟನ್ ಕಚ್ಚಾ ತೈಲ ಹೊಂದಿವೆ. ಇದರ ಜತೆಗೇ ಹೊರ್ಮುಜ್ ಜಲಸಂಧಿಯನ್ನು ದಾಟಲು ಕಾದಿರುವ ಹಡಗುಗಳಲ್ಲಿ 3 ಲಕ್ಷ ಮೆಟ್ರಿಕ್ ಟನ್ ಅಡುಗೆ ಅನಿಲವಿದೆ.

ಕಳೆದ ವಾರವಷ್ಟೇ ಭಾರತವು ರಷ್ಯಾದಿಂದ 30 ಮಿಲಿಯ ಬ್ಯಾರೆಲ್ ಕಚ್ಚಾತೈಲ ಖರೀದಿಸಿದೆ. ಚೀನಾದೆಡೆಗೆ ಕಚ್ಚಾ ತೈಲ ಕೊಂಡೊಯ್ಯುತ್ತಿದ್ದ 7 ನೌಕೆಗಳನ್ನು ನಡುದಾರಿಯಲ್ಲಿ ಭಾರತದತ್ತ ತಿರುಗಿಸಲಾಯಿತು. ಪ್ರಧಾನಿ ನರೇಂದ್ರ ಮೋದಿಯವರು ದೇಶದಲ್ಲಿ ತೈಲ ಮತ್ತು ಅಡುಗೆ ಅನಿಲ ಕೊರತೆಯಾಗಬಾರದೆಂಬ ಕಾರಣಕ್ಕಾಗಿ ಕೈಗೊಂಡ ರಾಜತಾಂತ್ರಿಕ ಕ್ರಮಗಳ ಫಲವಾಗಿ ಈ ನೌಕೆಗಳು ಚೀನಾದ ದಾರಿ ಬಿಟ್ಟು ಭಾರತದತ್ತ ಪಯಣಿಸಿದವು.

ಜಗತ್ತು ಯುದ್ಧಗ್ರಸ್ತವಾದಾಗ ಉಂಟಾಗುವ ಇಂಧನ ಬಿಕ್ಕಟ್ಟು ಯಾವುದೇ ರಾಷ್ಟ್ರಕ್ಕೂ ದೊಡ್ಡ ಸವಾಲೇ ಆಗಿದೆ. ಕೊಲ್ಲಿಯಲ್ಲಿ ಈಗ ನಡೆಯುತ್ತಿರುವ ಸಮರವು ಜಗತ್ತಿನಾದ್ಯಂತ ಇಂಧನ ಮಾರುಕಟ್ಟೆಯಲ್ಲಿ ಕೋಲಾಹಲ ಎಬ್ಬಿಸಿದೆ. ಹೊರ್ಮುಜ್ ಜಲಸಂಧಿ ಬಹುತೇಕವಾಗಿ ಮುಚ್ಚಲ್ಪಟ್ಟಿರುವುದರಿಂದ ತೈಲ ಪೂರೈಕೆಗೆ ತಡೆ ಉಂಟಾಗಿ ಜಾಗತಿಕ ತೈಲ ಬೆಲೆ ಗಗನಕ್ಕೇರಿದ್ದು, ಅಡುಗೆ ಅನಿಲ ಪೂರೈಕೆ ಕುಂಠಿತಗೊಂಡಿದೆ.

ಶೇ. 85ರಷ್ಟು ಕಚ್ಚಾ ತೈಲವನ್ನು ಕೊಲ್ಲಿ ರಾಷ್ಟ್ರಗಳಿಂದಲೇ ಆಮದು ಮಾಡಿಕೊಳ್ಳುತ್ತಿರುವ ಭಾರತದ ಪಾಲಿಗೆ ಇದು ಭಾರೀ ದೊಡ್ಡ ಬಿಕ್ಕಟ್ಟೇ ಸರಿ. ಇದು ಹಣದುಬ್ಬರ, ತೈಲ ಕೊರತೆ ಹಾಗೂ ಆ ಕಾರಣವಾಗಿ ಆರ್ಥಿಕ ಹಿನ್ನಡೆಗೆ ಕಾರಣವಾಗುವಂತಹ ಪರಿಸ್ಥಿತಿ. ಆದರೆ ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ಸರಕಾರವು ಈ ಬಿಕ್ಕಟ್ಟನ್ನು ನಿಭಾಯಿಸುವಲ್ಲಿ ಬಹುತೇಕ ಯಶಸ್ಸು ಕಂಡಿದೆ. ಜನಕೇಂದ್ರಿತ ನೀತಿಗಳ ಮೂಲಕ ಈ ತೈಲ ಬಿಕ್ಕಟ್ಟು ಜನರ ಮೇಲೆ ದುಷ್ಪರಿಣಾಮ ಬೀರದಂತೆ ನೋಡಿಕೊಂಡಿದೆ. ಪ್ರಧಾನಿ ಮೋದಿಯವರ ದೂರದೃಷ್ಟಿಯ ಫಲವಾಗಿ ಭಾರತವು ಈಗ 35 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಪೆಟ್ರೋಲಿಯಂ ಮೀಸಲು ಸಂಗ್ರಹವನ್ನು ಹೊಂದಿದೆ. ಸರಕಾರದ ಈ ನೀತಿಯ ಕಾರಣದಿಂದಾಗಿ ದೇಶದಲ್ಲಿರುವ 26000 ಎಲ್‌ಪಿಜಿ ಡಿಸ್ಟ್ರಿಬ್ಯೂಟರ್‌ಗಳು, 100000 ಪೆಟ್ರೋಲಿಯಂ ಬಂಕ್‌ಗಳು ಮತ್ತು 9000 ಸಿಎನ್‌ಜಿ ಸ್ಟೇಷನ್‌ಗಳು ಈಗಲೂ ಕಾರ್ಯಾಚರಿಸುವಂತಾಗಿವೆ.

ಫೆಬ್ರವರಿ ಅಂತ್ಯದಲ್ಲಿ ಪಶ್ಚಿಮ ಏಷ್ಯಾ ಸಮರ ಸ್ಫೋಟಗೊಂಡಿದ್ದು, ಕೆಲವೇ ದಿನಗಳಲ್ಲಿ ಹೊರ್ಮುಜ್ ಜಲಸಂಧಿ ಮುಚ್ಚಲ್ಪಟ್ಟಿತು. ಈ ಜಲಸಂಧಿಯ ಮೂಲಕ ಜಗತ್ತಿನ ಶೇ. 20ರಷ್ಟು ತೈಲ ಸಾಗಣೆ ನಡೆಯುತ್ತದೆ. ಭಾರತದ ಪಾಲಿನ ಎಲ್‌ಪಿಜಿ ಕೂಡಾ ಈ ದಾರಿಯ ಮುಖಾಂತರವೇ ಸಾಗಿಬರುವುದು. ಈ ದಾರಿಯಲ್ಲಿ ಭಾರತಕ್ಕೆ ದಿನಂಪ್ರತಿ 2.5 ಮಿಲಿಯ ಬ್ಯಾರೆಲ್‌ಗಳಷ್ಟು ತೈಲ ಪೂರೈಕೆಯಾಗುತ್ತಿತ್ತು. ಶೇ. 60ರಷ್ಟು ಎಲ್‌ಪಿಜಿ ಕೂಡಾ ಇಲ್ಲಿಂದಲೇ ಬರುತ್ತಿತ್ತು. ಇರಾಕ್, ಸೌದಿ ಅರೇಬಿಯಾ, ಯುಎಇ ಮತ್ತು ಕುವೈಟ್ ಭಾರತಕ್ಕೆ ತೈಲ ರಫ್ತು ಮಾಡುವ ರಾಷ್ಟ್ರಗಳು.

ಜಾಗತಿಕವಾಗಿ ತೈಲ ಬೆಲೆ ಏರಿಕೆಯಿಂದಾಗಿ ಭಾರತದ ಆಮದು ವೆಚ್ಚ ಹೆಚ್ಚುವಂತಾಗಿದೆ. ಇದು ದೇಶದ ಜಿಡಿಪಿ ಮೇಲೆ ಪ್ರತಿಕೂಲ ಪರಿಣಾಮ ಬೀರಬಲ್ಲದು. ತೈಲದ ಮೇಲೆ ಶೇ. 10ರಷ್ಟು ಹೆಚ್ಚುವರಿ ದರ ಉಂಟಾದರೂ ಅದು ಭಾರತದ ಜಿಡಿಪಿ ಪ್ರಗತಿಯನ್ನು ಶೇ. 0.25 ರಷ್ಟು ಕುಗ್ಗಿಸುತ್ತದೆ.

2012–13ರ ಎಲ್‌ಪಿಜಿ ಸಬ್ಸಿಡಿ ಬಿಕ್ಕಟ್ಟಿನ ವೇಳೆ ಯುಪಿಎ ಸರಕಾರದಡಿಯಲ್ಲಿ ಅಡುಗೆ ಅನಿಲ ಪೂರೈಕೆಯಲ್ಲಿ ಭಾರೀ ಕೊರತೆ ಉಂಟಾಗಿತ್ತು. ಜನರಿಗೆ ಗ್ಯಾಸ್ ಸಿಲಿಂಡರ್ ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಬ್ಲ್ಯಾಕ್‌ಮಾರ್ಕೆಟ್ ದಂಧೆ ಜೋರಾಗಿತ್ತು. ಸಬ್ಸಿಡಿ ಸಿಲಿಂಡರ್‌ಗಳನ್ನು ಕಮರ್ಷಿಯಲ್ ಬಳಕೆಗೆ ಸ್ಥಳಾಂತರಿಸಲಾಗಿತ್ತು.

ದೂರದೃಷ್ಟಿ ಯೋಜನೆ

ಆದರೆ ಈಗ ಹಾಗಲ್ಲ. ಸಮರ ಸ್ಫೋಟಗೊಂಡ ಕೂಡಲೇ ಮೋದಿ ಸರಕಾರದ ಸ್ಪಂದನೆಯು ಕ್ಷಿಪ್ರವಾಗಿತ್ತು. ದಿನಬಳಕೆಯ ಎಲ್‌ಪಿಜಿಗೆ ಕೊರತೆಯಾಗದಂತೆ ನೋಡಿಕೊಳ್ಳಲು ಆದ್ಯತೆ ನೀಡಲಾಯಿತು. ಇದು ದಶಕಗಳ ಕಾಲದ ಯೋಜನೆ ಮತ್ತು ಕಾರ್ಯತಂತ್ರದ ಪರಿಣಾಮ. ಜತೆಗೇ ಎಲ್ಲ ರಾಷ್ಟ್ರಗಳೊಂದಿಗೂ ಸೌಹಾರ್ದ ಸಂಬಂಧ ಕಾಯ್ದುಕೊಳ್ಳುವ ಮೋದಿ ರಾಜತಾಂತ್ರಿಕತೆಯ ಫಲ. ಮಾರ್ಚ್ ಮೊದಲ ವಾರದಲ್ಲಿ ಸ್ವತಃ ಪ್ರಧಾನಿಯವರೇ ಕೊಲ್ಲಿ ರಾಷ್ಟ್ರಗಳ ಮುಖಂಡರೊಡನೆ ಮಾತುಕತೆ ನಡೆಸಿದರು. ಸೌದಿ ದೊರೆ ಮೊಹಮ್ಮದ್ ಬಿನ್ ಸುಲ್ತಾನ್, ಯುಎಇ ಅಧ್ಯಕ್ಷ, ಬಹ್ರೇನ್ ದೊರೆ, ಜೋರ್ಡಾನ್ ದೊರೆ, ಕುವೈತ್‌ನ ಶೇಖ್, ಕತಾರಿನ ದೊರೆ ಮೊದಲಾದವರೊಡನೆ ಮಾತುಕತೆ ನಡೆಸಿದರು. ಭಾರತವು ಶಾಂತಿ ಮತ್ತು ಸ್ಥಿರತೆಯನ್ನು ಬಯಸುತ್ತದೆ ಎಂಬುದು ಇವರೊಡನೆ ಮೋದಿ ಸಾರಿದ ಸಂದೇಶ.



ಎಲ್ಲಾ ಗಲ್ಫ್ ರಾಷ್ಟ್ರಗಳೊಂದಿಗೆ ಸಂಬಂಧ ಸುಧಾರಿಸಲು ಮೋದಿ ಸರಕಾರವು ಆರಂಭದಿಂದಲೇ ಆದ್ಯತೆ ಕೊಟ್ಟಿತ್ತು. ಮೋದಿಯವರು ಕೊಲ್ಲಿ ರಾಷ್ಟ್ರಗಳಿಗೆ ಹಲವಾರು ಬಾರಿ ಭೇಟಿ ನೀಡಿದ್ದರು. ಕೊಲ್ಲಿ ರಾಷ್ಟ್ರಗಳ ಮುಖಂಡರಿಗೆ ಭಾರತದಲ್ಲಿ ಆತಿಥ್ಯ ನೀಡಿದ್ದರು. ಹಾಗಾಗಿಯೇ ಎಲ್ಲಾ ಕೊಲ್ಲಿ ರಾಷ್ಟ್ರಗಳೂ ಈಗ ಭಾರತವನ್ನು ಗೌರವಿಸುತ್ತವೆ.

ಕೆಲವರು ಭಾರತದ ನೀತಿಯನ್ನು ಹಳೆಯ ಅಲಿಪ್ತ ನೀತಿ ಎಂದು ಟೀಕಿಸುವುದಿದೆ. ಆದರೆ ಅವರಿಗೆ ನೂತನ ಜಗತ್ತಿನ ವಾಸ್ತವಿಕತೆಯ ಅರಿವಿಲ್ಲ ಎಂದೇ ಹೇಳಬೇಕಾಗುತ್ತದೆ. ಪ್ರಸ್ತುತ ಸನ್ನಿವೇಶದಲ್ಲಿ ದೇಶವೊಂದು ತನ್ನ ಸ್ವಹಿತಾಸಕ್ತಿ ಕಾಯ್ದುಕೊಳ್ಳಲು ಆದ್ಯತೆ ನೀಡಬೇಕಾಗುತ್ತದೆ. ಅದನ್ನು ಸಮಾಧಾನದಿಂದ ಹಾಗೂ ಲೆಕ್ಕಾಚಾರದಿಂದ ಮಾಡಬೇಕಾಗುತ್ತದೆ. ಮೋದಿಯವರು ಅದನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ.

ಕೊಲ್ಲಿ ರಾಷ್ಟ್ರಗಳೊಂದಿಗೆ ಮೋದಿ ಸರಕಾರವು ವ್ಯವಹರಿಸಿದ ರೀತಿಯು ಎಷ್ಟು ಪರಿಣಾಮಕಾರಿ ಎಂಬುದಕ್ಕೆ ಅಂಕಿಅಂಶಗಳೇ ಸಾಕ್ಷಿ. 2014ರಿಂದ ಈ ರಾಷ್ಟ್ರಗಳ ಜತೆ ದ್ವಿಪಕ್ಷೀಯ ವ್ಯವಹಾರ ದ್ವಿಗುಣಗೊಂಡಿದೆ. ಭಾರತದ ಇಂಧನ ವಲಯದಲ್ಲಿ ಯುಎಇ ಈಗ ಪ್ರಮುಖ ಹೂಡಿಕೆದಾರ.

ಅಡುಗೆ ಅನಿಲ ಬೆಲೆ ನಿಯಂತ್ರಣ

ಯುದ್ಧದಿಂದಾಗಿ ಜಾಗತಿಕವಾಗಿ ತೈಲ ಬೆಲೆ ಏರಿಕೆಯಾದಾಗಲೂ ಸರಕಾರವು ಆ ಹೊರೆಯನ್ನು ಜನರ ಮೇಲೆ ಹೇರುವ ಬದಲಾಗಿ ತೈಲ ಮಾರುಕಟ್ಟೆ ಕಂಪೆನಿಗಳಿಗೆ ತಾನೇ ಸಬ್ಸಿಡಿ ಒದಗಿಸಿತು. ಇತ್ತೀಚೆಗೆ ಅನಿವಾರ್ಯವಾಗಿ ಮನೆಬಳಕೆಯ ಸಿಲಿಂಡರಿಗೆ ರೂ. 60 ಹೆಚ್ಚಳ ಮಾಡಲಾಯಿತು. ಉಜ್ವಲ ಯೋಜನೆಯಡಿ ಈಗಲೂ ರೂ.300ಕ್ಕೆ ಸಿಲಿಂಡರ್ ಸಿಗುತ್ತಿದೆ.

ಭಾರತದ ಪೆಟ್ರೋಲಿಯಂ ಮೀಸಲು ಸಂಗ್ರಹವು ಮೋದಿ ಆಡಳಿತದಡಿಯಲ್ಲಿ 40 ದಿನಗಳ ಬೇಡಿಕೆ ಪೂರೈಸುವಷ್ಟು ಹೆಚ್ಚಿದೆ. ಹಿಂದಿನ ಕಾಂಗ್ರೆಸ್ ಆಡಳಿತದವಧಿಯಲ್ಲಿ ಇದು ಶೂನ್ಯವಾಗಿತ್ತು. ಕಾಂಗ್ರೆಸ್ ಆಳ್ವಿಕೆಯಡಿಯಲ್ಲಿ ಜಾಗತಿಕವಾಗಿ ಯಾವುದೇ ಬಿಕ್ಕಟ್ಟು ಇರದಿದ್ದರೂ 2014ರಲ್ಲಿ ಸಿಲಿಂಡರ್ ಬೆಲೆ ದಿಲ್ಲಿಯಲ್ಲಿ 1241 ರೂ., ಮುಂಬಯಿಯಲ್ಲಿ ರೂ. 1264, ಮತ್ತು ಕೋಲ್ಕತಾದಲ್ಲಿ ರೂ. 1270 ಇದ್ದಿತು.

ಕೊಲ್ಲಿ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ಮೋದಿ ಸರಕಾರವು ದೂರದೃಷ್ಟಿ ಪ್ರಯೋಗಿಸಿ, ಯಾವುದೇ ಒಂದು ರಾಷ್ಟ್ರವನ್ನಷ್ಟೇ ಅವಲಂಬಿಸದೆ, ಹಲವು ರಾಷ್ಟ್ರಗಳಿಂದ ತೈಲ ಆಮದು ಮಾಡುವ ಪ್ರಕ್ರಿಯೆಗೆ ತೊಡಗಿತು. ಯಾವುದೇ ದೇಶದಿಂದ ತೈಲ ಆಮದಿನ ಮಿತಿಯನ್ನು ಶೇ. 25ಕ್ಕೆ ಸೀಮಿತಗೊಳಿಸಿದ್ದು, ಸುಮಾರು 40 ದೇಶಗಳಿಂದ ತೈಲ ಆಮದಿಗೆ ಗಮನ ಕೊಡಲಾಗಿದೆ. ರಷ್ಯಾ, ಅಮೆರಿಕ, ಬ್ರೆಜಿಲ್, ಸೌದಿ ಅರೇಬಿಯಾ, ವೆನೆಜುವೆಲಾ ಮುಂತಾಗಿ ಅಟ್ಲಾಂಟಿಕ್ ವಲಯದಿಂದಲೂ ತೈಲ ಆಮದಿಗೆ ಚಾಲನೆ ನೀಡಲಾಗಿದೆ. 2026ರ ವೇಳೆಗೆ ಭಾರತದ ತೈಲ ಆಮದಿನ ಶೇ. 40ರಷ್ಟು ಮಾತ್ರ ಹೊರ್ಮುಜ್ ಜಲಸಂಧಿಯಿಂದಾಗಿ ಬರುತ್ತಿದೆ. ಉಳಿದ ಶೇ.60ರಷ್ಟು ತೈಲ ಬೇರೆ ದಾರಿಯಾಗಿ ಬರುತ್ತಿವೆ. ಭಾರತವು ರಷ್ಯಾದಿಂದ ರಿಯಾಯಿತಿ ದರದಲ್ಲಿ ತೈಲ ಖರೀದಿಸುತ್ತಿದ್ದು, ಇದು ಜಾಗತಿಕ ತೈಲ ಮಾರುಕಟ್ಟೆಯನ್ನು ಸಮತೋಲನದಲ್ಲಿಡಲೂ ಸಫಲವಾಗಿದೆ. ಇದೇವೇಳೆ, ಪೆಟ್ರೋಲಿಗೆ ಎಥನಾಲ್ ಬೆರೆಸುವ ಕ್ರಮಗಳ ಮೂಲಕ ದೇಶೀ ಸ್ವಾವಲಂಬನೆಯ ಉಪಕ್ರಮಕ್ಕೂ ಕೈಹಚ್ಚಲಾಗಿದೆ.

ಮೋದಿ ಸರಕಾರದ ಉಪಕ್ರಮಗಳಿಂದಾಗಿ ಹಣದುಬ್ಬರ ಸಮಸ್ಯೆಯಿಂದ ದೇಶ ಪಾರಾಗಿದೆ. ತೈಲ ಹಣದುಬ್ಬರ ಕೂಡಾ ನಿಯಂತ್ರಣದಲ್ಲೇ ಉಳಿದಿದೆ. ನೆರೆಯ ಕೆಲವು ದೇಶಗಳು ತೈಲ ಪಡಿತರ ವ್ಯವಸ್ಥೆಗೆ ಕೈಹಚ್ಚಿರಬೇಕಾದರೆ ಭಾರತವಿನ್ನೂ ಅಂತಹ ಕ್ರಮಕ್ಕಿಳಿಸಿಲ್ಲ. ಜಾಗತಿಕ ರೇಟಿಂಗ್ ಸಂಸ್ಥೆ ಮೂಡಿ ಕೂಡಾ ಭಾರತದ ಇಂಧನ ಭದ್ರತೆಯನ್ನು ಶ್ಲಾಘಿಸಿದೆ. ರಾಷ್ಟ್ರೀಯ ಹಿತಾಸಕ್ತಿಯನ್ನು ಆದ್ಯತೆಯಾಗಿಟ್ಟುಕೊಂಡು ಮೋದಿ ಸರಕಾರ ವ್ಯವಹರಿಸುತ್ತಿದ್ದ ನಾಗರಿಕ ಹಿತಾಸಕ್ತಿಗೆ ಗಮನ ಕೊಟ್ಟಿದೆ.

ತೈಲ ಬಿಕ್ಕಟ್ಟನ್ನು ಭಾರತವು ಗಂಭೀರವಾಗಿ ಎದುರಿಸದಿರಲು ಕಳೆದೊಂದು ದಶಕದಿಂದ ಸರಕಾರ ಕೈಗೊಂಡ ಇನ್ನಿತರ ಕ್ರಮಗಳೂ ಕಾರಣವಾಗಿವೆ. 9 ಲಕ್ಷಕ್ಕೂ ಅಧಿಕ ರೈತರು ಈಗ ನೀರಾವರಿಗೆ ತೈಲಾಧಾರಿತ ಪಂಪ್ ಸೆಟ್ ಬದಲಿಗೆ ಸೋಲಾರ್ ಆಧಾರಿತ ವಿದ್ಯುತ್ ಬಳಸುತ್ತಿದ್ದಾರೆ. ಸುಮಾರು ಶೇ.20ರಷ್ಟು ಪೆಟ್ರೋಲ್‌ಗೆ ಕಬ್ಬಿನಿಂದ ತೆಗೆದ ಎಥನಾಲ್ ಬೆರೆಸಲಾಗುತ್ತಿದೆ. ಯುರೋಪ್ ಕೇವಲ ರಷ್ಯಾದ ತೈಲದ ಮೇಲಷ್ಟೇ ಅವಲಂಬಿತವಾಗಿದ್ದರೆ ಭಾರತವು ಹಲವು ರಾಷ್ಟ್ರಗಳಿಂದ ತೈಲ ಆಮದು ಮಾಡಿಕೊಳ್ಳತೊಡಗಿದೆ. ಅಮೆರಿಕದ ನಿರ್ಬಂಧದ ಹೊರತಾಗಿಯೂ ಭಾರತವು ತನ್ನ ಹಿತಾಸಕ್ತಿಯ ದೆಸೆಯಿಂದ ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಲಿಲ್ಲ.

ವಿವಿಧ ರಾಷ್ಟ್ರಗಳು ಕೊಲ್ಲಿ ಯುದ್ಧದ ಕಾರಣದಿಂದ ತೈಲ ಬಿಕ್ಕಟ್ಟು ಎದುರಿಸುತ್ತಿರಬೇಕಾದರೆ, ಭಾರತವು ಈ ಬಿಕ್ಕಟ್ಟನ್ನು ಸಮರ್ಥವಾಗಿ ಎದುರಿಸುತ್ತಿರಬೇಕಾದರೆ ಅದಕ್ಕೆ ಕಾರಣ – ಮೋದಿಯವರ ತೈಲ ರಾಜತಾಂತ್ರಿಕತೆ.

ಲಕ್ಷಾಂತರ 'ತರುಣರಿಗೆ' ಜೆಸಿಬಿ ನ್ಯಾಯ ಒದಗಿಸಿತೇ?

▸ ಪೃಥ್ವಿರಾಜ್ ಕುಲಕರ್ಣಿ



ಅಂದು ಹೋಳಿ! ಎಲ್ಲೆಲ್ಲೂ ಹಬ್ಬದ ಸಡಗರ. ದೇವಸ್ಥಾನಗಳಲ್ಲಿ ಪೂಜೆ ಪುನಸ್ಕಾರಗಳು ನೆರವೇರುತ್ತಿದ್ದವು. ಜನರು ಬಣ್ಣದಲ್ಲಿ ಮುಳುಗೇಳುತ್ತಿದ್ದರು. ಆದರೆ ಅಲ್ಲೊಂದು ಕಡೆ ಸುಮಾರು 20–25 ಜನರು ಕೈಯಲ್ಲಿ ಹಾಕಿ ಸ್ಟಿಕ್, ಮಾರಕಾಸ್ತ್ರಗಳನ್ನು ಹಿಡಿದು ಯುವಕನೊಬ್ಬನಿಗೆ ಕಾಯುತ್ತಿದ್ದರು. 2 ವಾರದ ಹಿಂದೆ ದಿಲ್ಲಿಯ ಉತ್ತಮನಗರದ 12 ವರ್ಷದ ಮುಗ್ಧ ಬಾಲಕಿ ಕೈಯಲ್ಲಿ ಬಣ್ಣ ತುಂಬಿದ ಬಲೂನ್ ಹಿಡಿದು ಹೋಳಿ ಆಡುತ್ತಿದ್ದಳು. ಮನೆಯ ಅಂಗಳದಲ್ಲಿ ನಿಂತಿದ್ದ ತನ್ನ ಅಜ್ಞಾನತ್ತ ಬಾಲಕಿ ಅಜ್ಞಾನತ್ತ ಬಲೂನ್ ಬಿಟ್ಟಳು. ಅದು ಒಂದು ಜೀವವನ್ನೇ ತೆಗೆದುಕೊಳ್ಳುತ್ತದೆ ಎಂಬುದು ಅಕ್ಷರಶಃ ಅವಳಿಗೆ ಗೊತ್ತಿರಲಿಲ್ಲ.

ಅದೇ ಬೀದಿಯಲ್ಲಿ ಮುಸ್ಲಿಂ ಮಹಿಳೆಯೊಬ್ಬಳು ಹಾದು ಹೋಗುತ್ತಿದ್ದಳು. ಬಾಲಕಿ ಬಿಟ್ಟ ಬಲೂನ್ ನೆಲಕ್ಕೆ ಪುಟಿದು ಮುಸ್ಲಿಂ ಮಹಿಳೆಯ ಮೇಲೆ ಬಣ್ಣ ಹಾರಿತು. ಬಾಲಕಿಯನ್ನು ಬೈಯ್ಯತೊಡಗಿದ ಮಹಿಳೆ ಜಗಳಕ್ಕಿಳಿದಳು. ಬಿಡಿಸಲು ಬಂದವರಿಗೂ ಬೈದಳು. ಒಂದು ಪುಟ್ಟ ಜಗಳ. ಸಾಮಾನ್ಯ ಮನುಷ್ಯರಾಗಿದ್ದರೆ 'ನೋಡಿಕೊಂಡು ಆಡಮ್ಮಾ' ಅನ್ನುತ್ತಿದ್ದರು. ಆದರೆ ಅಲ್ಲಿಗೆ ನಿಲ್ಲದ ಜಗಳ ಮುಸ್ಲಿಂ ಮಹಿಳೆಯ ಮನೆಯವರನ್ನು ಕರೆತಂದಿತು. ಬಾಯಿಗೆ ಬಾಯಿ ಹತ್ತಿತು, ಕೈಕೈ ಮಿಲಾಯಿಸುವ ಹಂತಕ್ಕೂ ಹೋಯಿತು. ನೆರೆದ ಮುಸ್ಲಿಮರು ಬಾಲಕಿಯ ಮನೆಯವರನ್ನು ಥಳಿಸಿದರು. ಮನೆಯೊಳಗೆ ಕೂಡಿಸಿ ಹೊರಗಿನಿಂದ ಗೇಟುಗಳನ್ನು ಹಾಕಿದರು.

ಇತ್ತ ವಿಷಯದ ತಿಳಿಯದೇ ಅದೇ ಮನೆಯ ತರುಣ್ ಎಂಬ ಯುವಕ ಹೋಳಿ ಸಡಗರದಲ್ಲಿ ಮುಳುಗಿದ್ದ. ಮನೆಗೆ ಬರುವಷ್ಟರಲ್ಲಿ ಸುಮಾರು 15ಕ್ಕೂ ಹೆಚ್ಚು ಮುಸ್ಲಿಂ ಯುವಕರು ಗೇಟಿನ ಮುಂದೆ ಕಾಯುತ್ತ ನಿಂತಿದ್ದರು. ಬಂದ ತಕ್ಷಣಕ್ಕೆ ತರುಣನನ್ನು ಥಳಿಸಲಾರಂಭಿಸಿದರು. ರಾಡಿನಿಂದ ಬಡಿದರು. ವಿಲವಿಲ ಒದ್ದಾಡುತ್ತಿದ್ದ ಆ ತರುಣನ ಉಸಿರು ನಿಂತಿತು. ಒಂದಿಷ್ಟು ಬಣ್ಣ ಮೈಗೆ ಚೆಲ್ಲಿತು ಎಂಬ ಕಾರಣಕ್ಕೆ ಒಂದು ಜೀವವೇ ಹೋಗುತ್ತದೆಂದರೆ!? ತರುಣನ ಹತ್ಯೆಯ ಸುದ್ದಿ ಕ್ಷಣದಲ್ಲಿ ಹರಡಿತು. ಹಿಂದು ಸಂಘಟನೆಗಳು ಹೋರಾಟಕ್ಕಿಳಿದರು. ಅಲ್ಲಿಗೆ ಖ್ಯಾತ ನ್ಯಾಯವಾದಿ ಜೆ. ಸಾಯಿ ದೀಪಕ್ ಅವರ you can proudly criticize RSS and BajarangDal until the day a mob comes to your door, screaming for your head ಎಂಬ ಮಾತು ನೆನಪಿಗೆ ಬಂತು. ಜನರ ಆಕ್ರೋಶಕ್ಕೆ ಸರ್ಕಾರ ನಲುಗಿತು. ತ್ವರಿತ ಕ್ರಮ ಕೈಗೊಂಡ ಸ್ಥಳೀಯ ಆಡಳಿತ ಆರೋಪಿಗಳ ಅಕ್ರಮ ಮನೆಗಳನ್ನು ಕೆಡವಿತು. ಆದರೆ ಜೆಸಿಬಿಯಿಂದ ಸಂಪೂರ್ಣ ಶಿಕ್ಷೆ ನೀಡಿದಂತಾಯಿತೇ? ಆರೋಪಿಗಳ ಮೇಲೆ ಸೆಕ್ಷನ್ (302) ಕೊಲೆ ಆರೋಪದಡಿ ಕೇಸು ದಾಖಲಿಸಲಾಯಿತು. ಜನರ ಪ್ರತಿಭಟನೆಯ ನಂತರ sc/st prevention of atrocities act ಸೇರಿಸಲಾಯಿತು. ಇದು ಅವಶ್ಯವಾಗಿತ್ತು. ಏಕೆಂದರೆ ಅಲ್ಲಿ ನಡೆದಿದ್ದು ಜಾತಿ ಆಧಾರಿತ ಹತ್ಯೆ. ಹಾಗಾಗಿ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 103(02) ಅನ್ನು ಕೂಡ ಇದರಲ್ಲಿ ಸೇರಿಸಬೇಕಿತ್ತು. ಆದರೆ ಆದಾಗಲಿಲ್ಲ.

ಧರ್ಮಾಧಾರಿತ ಹತ್ಯೆಗಳಿಗಾಗಿಯೇ ಈ ಹೊಸ ಕಾಯ್ದೆಯನ್ನು ಜಾರಿಗೆ ತರಲಾಗಿತ್ತು. ವೈಯಕ್ತಿಕ ದ್ವೇಷದಿಂದ ಹತ್ಯೆ ಮಾಡಿದರೆ ಅದು ಕೊಲೆ. ಆ ಕೊಲೆಯಲ್ಲಿ ಇನ್ನಷ್ಟು ಜನರು ಸೇರಿಕೊಂಡರೆ ಗುಂಪು ಹತ್ಯೆ. ಆದರೆ ತರುಣನ ಕೇಸಿನಲ್ಲಿ ನಡೆದಿದ್ದು Mob lynching. ಭಾರತೀಯ ನ್ಯಾಯ ಸಂಹಿತೆಯ 103(02) ಪ್ರಕಾರ ಇದು ಅಕ್ಷರಶಃ Mob lynching. ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 103(02) ಒಂದು ಗುಂಪು (mob) ಕಾನೂನು ಕೈಗೆ ತೆಗೆದುಕೊಂಡು ಅನುಮಾನ, ಕೋಪ, ಜಾತಿ/ಧರ್ಮ ಅಥವಾ ವದಂತಿಗಳ ಆಧಾರದ ಮೇಲೆ ಕೊಲ್ಲುವುದನ್ನು ಗುಂಪುಹತ್ಯೆ ಎನ್ನುತ್ತದೆ. ಇಲ್ಲಿ ಆಗಿದ್ದು ಕೂಡ ಅದೇ. ಆದರೆ ಎಡಪಂಥೀಯ ಮಾಧ್ಯಮಗಳು ಪ್ರಕರಣದ ದಿಕ್ಕು ತಪ್ಪಿಸಲು, ತರುಣ್ ಮತ್ತು ಆರೋಪಿಗಳ ನಡುವೆ ಮೊದಲಿನಿಂದಲೂ ಜಗಳವಿತ್ತು. ಇದು ಜಾತಿ ಆಧಾರಿತ ಕೊಲೆ ಅಲ್ಲ ಅನ್ನುತ್ತಿದ್ದಾರೆ. ಆದರೆ ಕೊಲೆ ನಡೆದಿದ್ದು ಹೋಳಿಯ ಬಣ್ಣ ತಾಗಿದಕ್ಕೆ ಅದು ಸಾಮಾನ್ಯ ದ್ವೇಷವೇ? ಇತರ ಅನೇಕ ಪ್ರಕರಣಗಳಲ್ಲಿ ಹಿಂದು ಹಬ್ಬಗಳಲ್ಲಿ, ಅನ್ಯ ಕೋಮಿನ ಜನರು ಕಲ್ಲೆಸೆದು ನೆಮ್ಮದಿ ಹಾಳು ಮಾಡುತ್ತಲೇ ಬಂದಿದ್ದಾರಲ್ಲ? ಭಾರತದಲ್ಲಿ ಶಿವಾಜಿ ಜಯಂತಿ ಮಾಡಿದಾಗ ಕಲ್ಲೆಸೆಯಲಾಗುತ್ತದೆ, ರಾಮನವಮಿ ಮೆರವಣಿಗೆ ವೇಳೆ ದಂಗೆಗಳಾಗುತ್ತವೆ. ಹಿಂದು ಹಬ್ಬಗಳಲ್ಲಿ ದಾಂಧಲೆಗಳು ನಡೆಯುತ್ತಲೇ ಬಂದಿವೆ. ಭಾರತ ಟಿ20 ವಿಶ್ವಕಪ್ ಗೆದ್ದಾಗ ಪಟಾಕಿ ಸಿಡಿಸಿದ್ದಕ್ಕಾಗಿ ಉಜ್ಜೈನಿಯ ಮುಸ್ಲಿಂ ಗುಂಪೊಂದು ಹಿಂದುಗಳ ಮೇಲೆ ಹಲ್ಲೆ ಮಾಡಿದೆ. ಯಾವ ಪುರುಷಾರ್ಥಕ್ಕಾಗಿ ಇದೆಲ್ಲಾ ಮಾಡುತ್ತಾರೆ ಎಂಬುದು ತಿಳಿಯದ ವಿಚಾರವೇನಲ್ಲ.

ಅಮೆರಿಕ, ದುಬೈ ಇತ್ಯಾದಿ ದೇಶಗಳಲ್ಲಿ ಹಿಂದುಗಳು ನೆಮ್ಮದಿಯಾಗಿ ಹಬ್ಬದ ಆಚರಣೆ ಮಾಡುತ್ತಾರೆ. ಹಲವು ದೇಶಗಳ ಸರ್ಕಾರಗಳು ಹಿಂದುಗಳ ಹಬ್ಬಕ್ಕೆ ರಜೆಯನ್ನೂ ನೀಡುತ್ತವೆ. ಆದರೆ ಭಾರತದಲ್ಲೇ ಹಿಂದುಗಳು ನೆಮ್ಮದಿಯಿಂದ ಹಬ್ಬ ಹುಣ್ಣಿಮೆಗಳನ್ನು ಆಚರಿಸುವಂತಿಲ್ಲ. ಬಾಂಗ್ಲಾದೇಶದಲ್ಲಿ ಹಿಂದುಗಳ ರಕ್ಷಣೆಗಾಗಿ ಕೈಚಾಚಬೇಕಾಗುತ್ತದೆ. ಭಾರತದಲ್ಲಿ ಹಿಂದುಗಳು ಬಹುಸಂಖ್ಯಾತರಾಗಿದ್ದರೂ ರಕ್ಷಣೆಗಾಗಿ ಕೈಚಾಚುವ ಪರಿಸ್ಥಿತಿ ಬರುತ್ತಿದೆ.

"100 ಹಿಂದು ಕುಟುಂಬಗಳಿರುವ ಸ್ಥಳದಲ್ಲಿ ಒಂದು ಮುಸ್ಲಿಂ ಕುಟುಂಬ ಆರಾಮಾಗಿರಬಹುದು. ಆದರೆ 100 ಮುಸ್ಲಿಂ ಕುಟುಂಬಗಳಿರುವಲ್ಲಿ ಒಂದು ಹಿಂದು ಕುಟುಂಬ ಸುರಕ್ಷಿತವಾಗಿರುವರೇ?" ಎಂಬ ಯೋಗಿಯವರ ಮಾತಿನಲ್ಲಿ ಎಷ್ಟೊಂದು ಸತ್ಯ ಅಡಗಿದೆ ಅನ್ನಿಸುತ್ತದೆ. ನಮ್ಮ ಕರ್ನಾಟಕದಲ್ಲೇ ಕೆಲವು ಭಾಗಗಳ ಕೆಲವು ಏರಿಯಾಗಳಲ್ಲಿ ಗಣೇಶನ ಮೆರವಣಿಗೆ ಮಾಡುವಂತಿಲ್ಲ, ಮಾಡಿದರೂ ಆಜಾನ್ ಆಗುವ ಸಮಯಕ್ಕೆ ಬಂದ್ ಮಾಡಬೇಕಾಗುತ್ತದೆ. ಸೂಕ್ಷ್ಮ ಪ್ರದೇಶದ ಪ್ರತಿಯೊಂದು ಏರಿಯಾದಲ್ಲಿ ಇಂಥವರ ಗುಂಪೊಂದು ಇರುತ್ತದೆ. ತಕ್ಷಣಕ್ಕೆ ಇದೇ ಗುಂಪು ಸಕ್ರಿಯವಾಗುತ್ತದೆ. ಅದಕ್ಕೆ ದೆಹಲಿಯ ತರುಣ್ ಹತ್ಯೆ ಕೂಡ ಇಂಥವರಿಂದಲೇ ನಡೆದಿದೆ. ಕಠಿಣ ಕಾನೂನಿನ ಮೂಲಕ ಅದನ್ನು ನಿಗ್ರಹಿಸಬೇಕಾಗಿದೆ. ತರುಣ್ ಹತ್ಯೆಗೈದವರ ಮೇಲೆ ಎಸ್‌ಸಿ ಕಾಯ್ದೆ ಬಂದೇ ಅಲ್ಲ, Mob lynching ಕೂಡ ದಾಖಲಾಗಬೇಕು.

ಕಿರುಸುದ್ದಿ

ಇಂದು ನಿವೃತ್ತ ನೌಕರರ ಧರಣಿ

• **ಬೆಂಗಳೂರು:** ವಿವಿಧ ಬೇಡಿಕೆಯನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಮಾ.25ರಂದು ಬೆಳಗ್ಗೆ 10.30ಕ್ಕೆ ಕಬ್ಬನ್ ಪಾರ್ಕ್ ಬಳಿ ಧರಣಿ ಸರ್ಕಾರಿ ನೌಕರರ ಸಂಘದ ಆವರಣದಲ್ಲಿ ಪ್ರತಿಭಟನಾ ಸಭೆ ನಡೆಸಲಾಗುತ್ತಿದೆ. ಅಖಿಲ ಭಾರತ ನಿವೃತ್ತ ಪಿಂಚಣಿದಾರರಿಗೆ, ರಾಜ್ಯ ಸರ್ಕಾರಿ ನಿವೃತ್ತ ಪಿಂಚಣಿದಾರರಿಗೆ ಹಾಗೂ ಕುಟುಂಬ ಪಿಂಚಣಿದಾರರಿಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದ 2025ರ ಆರ್ಥಿಕ ಕಾಯ್ದೆಯನ್ನು ಹಿಂಪಡೆಯಬೇಕು. ರಾಜ್ಯ ಸರ್ಕಾರ 7ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಸರ್ಕಾರಿ ನಿವೃತ್ತ ನೌಕರರಿಗೆ ಮತ್ತು ಕುಟುಂಬ ಪಿಂಚಣಿದಾರರಿಗೆ ಅನ್ವಯಿಸುವಂತೆ ಕೂಡಲೇ ಜಾರಿಗೊಳಿಸಬೇಕು ಎಂದು ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಡಾ.ಎಲ್.ಭೈರಪ್ಪ ತಿಳಿಸಿದ್ದಾರೆ.

ದೇವರ ದಾಸಿಮಯ್ಯ ಭಾವಚಿತ್ರಕ್ಕೆ ಪುಷ್ಪ ನಮನ

• **ದೇವನಹಳ್ಳಿ:** ವಚನಕಾರ "ದೇವರ ದಾಸಿಮಯ್ಯ ಅವರ ಜಯಂತಿ ಅಂಗವಾಗಿ ಜಿಲ್ಲಾಧಿಕಾರಿ ಡಾ. ಕೆ.ಎನ್. ಅನುರಾಧಾ ಅವರು ದೇವರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಗೌರವ ನಮನ ಸಲ್ಲಿಸಿದರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣದಲ್ಲಿ ಜಯಂತಿ ಹಮ್ಮಿಕೊಳ್ಳಲಾಗಿತ್ತು. ವೃತ್ತಿಯಲ್ಲಿ ನೇಯ್ಗೆಕಾರರಾದ ದಾಸಿಮಯ್ಯನವರು ಶಿವನಿಗೆ ಬಟ್ಟೆಯನ್ನು ಕೊಟ್ಟು ಅಪೂರ್ವಭಕ್ತಿ ಮೆರೆದಂತೆ ಐತಿಹ್ಯ ಪುರಾಣಗಳಲ್ಲಿ ಉಲ್ಲೇಖಗಳು ಸಿಗುತ್ತವೆ. ಶಿವನ ಅಪಾರ ಭಕ್ತರಾಗಿದ್ದು, ರಾಮನಾಥ ಇವರ ಅಂಕಿತನಾಮ. ಶಿವ ಜಗತ್ತನ್ನೇ ವ್ಯಾಪಿಸಿಕೊಂಡಂತೆ, ಜಗತ್ತೇ ಶಿವನ ರೂಪ ಎಂಬ ನಿಲುವಿನೊಂದಿಗೆ, ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಸೂಸುವ ಗಾಳಿ ನಿಮ್ಮ ದಾನವಯ್ಯ ಎಂದೆನ್ನುವ ದಾಸಿಮಯ್ಯನಲ್ಲಿ ಈ ಲೋಕವನ್ನು ನೋಡುವ ಕ್ರಮ ಹೊಸತನದಿಂದ ಕೂಡಿದೆ. ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಮೋಹನ್, ಮುಜರಾಯಿ ತಹಸೀಲ್ದಾರ್ ಹೇಮಾವತಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿ ವರ್ಗದವರಿದ್ದರು.

ಕೃಷಿ ಹೊಂಡದಲ್ಲಿ ಮುಳುಗಿ ಬಾಲಕ ಸಾವು

• **ಹಲಗೂರು:** ಈಜಾಡಲು ಹೋಗಿದ್ದಾಗ ಕೃಷಿ ಹೊಂಡದಲ್ಲಿ ಮುಳುಗಿ ಬಾಲಕನೊಬ್ಬ ಮೃತಪಟ್ಟ ಘಟನೆ ಸಮೀಪದ ನಂದೀಪುರ ಗ್ರಾಮದ ಹೊರವಲಯದಲ್ಲಿ ನಡೆದಿದೆ. ಸಮೀಪದ ದಳವಾಯಿ ಕೋಡಿಹಳ್ಳಿ ಗ್ರಾಮದ ಶಿವಣ್ಣ ಅವರ ಪುತ್ರ, ಪೃಥ್ವಿನ್ (ಅಂದಾನಿ)(15) ಮೃತಪಟ್ಟ ಬಾಲಕ. ದಳವಾಯಿ ಕೋಡಿಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ 8 ನೇ ತರಗತಿ ವ್ಯಾಸಂಗ ಮಾಡುತ್ತಿದ್ದ ಈತ ಶಾಲೆಗೆ ರಜೆ ಇದ್ದ ಕಾರಣ ತನ್ನ 4 ಮಂದಿ ಸ್ನೇಹಿತರೊಂದಿಗೆ ಭಾನುವಾರ ಮಧ್ಯಾಹ್ನ ಈಜಾಡಲು ತೆರಳಿದ್ದನು. ಭಾನುವಾರ ಸಂಜೆಯವರೆಗೂ ಮನೆಗೆ ಹಿಂದಿರುಗಿರಲಿಲ್ಲ. ಪೋಷಕರು ಬಾಲಕನ ಪತ್ತೆಗಾಗಿ ಶೋಧ ನಡೆಸಿದ್ದರು. ನಂದೀಪುರ ಗ್ರಾಮದ ರಾಜೇಗೌಡ ಅವರ ಜಮೀನಿನಲ್ಲಿರುವ ಕೃಷಿ ಹೊಂಡದಲ್ಲಿ ಸೋಮವಾರ ಬೆಳಗ್ಗೆ ಬಾಲಕನ ಮೃತದೇಹ ಪತ್ತೆಯಾಗಿದೆ.



ಹಿರಿಯ ಪತ್ರಕರ್ತ ಎಸ್. ಕುಮಾರ್ ನಿಧನ

• **ಮಂಡ್ಯ:** ಶ್ರೀರಂಗಪಟ್ಟಣ ತಾಲೂಕು ಆಂದೋಲನ ವರದಿಗಾರರಾದ ಎಸ್. ಕುಮಾರ್ (58) ಅವರು ತೀವ್ರ ಹೃದಯಾಘಾತದಿಂದ ಸೋಮವಾರ ಸಂಜೆ ನಿಧನರಾಗಿದ್ದಾರೆ. ಮೃತ ಕುಮಾರ್ ಅವರಿಗೆ ಪತ್ನಿ ಪ್ರೇಮ, ಪುತ್ರ ರಂಜನ್, ಪುತ್ರಿ ಶಿಲ್ಪ, ಅಳಿಯ ಕಿರಣ್ ಕುಮಾರ್ ಸಹೋದರರಾದ ಶಾಂತೇಶ್, ನಾಗರಾಜು ಇದ್ದಾರೆ. ಕುಮಾರ್ ಅವರಿಗೆ ಸೋಮವಾರ ಮುಂಜಾನೆ 5ರ ಸಮಯದಲ್ಲಿ ಹೃದಯಾಘಾತವಾಗಿದ್ದು, ತಕ್ಷಣ ಅವರನ್ನು ಮೈಸೂರಿನ ಜಯದೇವ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿ ನಂತರ ವೈದ್ಯರ ಸಲಹೆ ಮೇರೆಗೆ ಡಿ.ಆರ್.ಎಂ.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಸಂಜೆ 6ರ ಸಮಯದಲ್ಲಿ ಮೃತಪಟ್ಟಿದ್ದಾರೆ. ಕುಮಾರ್ ಅವರು ಸುಮಾರು 30 ವರ್ಷದಿಂದ ಪತ್ರಿಕಾ ರಂಗದಲ್ಲಿ ಕೆಲಸ ಮಾಡುತ್ತಿದೆ. ಪ್ರಥಮ ಬಾರಿಗೆ ಮೈಸೂರು ಮಿತ್ರ ತಾಲೂಕು ವರದಿಗಾರರಾಗಿ ಕಾರ್ಯ ಆರಂಭಿಸಿದ ಇವರು, ಕಳೆದ ಎಂಟು ವರ್ಷಗಳಿಂದ ಆಂದೋಲನ ಪತ್ರಿಕೆಯ ತಾಲೂಕು ವರದಿಗಾರರಾಗಿ ಕೆಲಸ ನಿರ್ವಹಿಸುತ್ತಿದ್ದರು. ಮೃತರ ಅಂತ್ಯಕ್ರಿಯೆ ಶ್ರೀರಂಗಪಟ್ಟಣದ ಕಾವೇರಿ ನದಿ ತೀರದಲ್ಲಿರುವ ಶಂಭುಲಿಂಗಯ್ಯನ ಕಟ್ಟೆಯಲ್ಲಿ ಮಾ. 24ರ ಮಂಗಳವಾರ ಬೆಳಗ್ಗೆ 11ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಬಿಸಿಲ ತಾಪ ಹೆಚ್ಚಾದಂತೆ ದುಬಾರಿಯಾದ ಎಳನೀರು | ತಂಪು ಪಾನೀಯಗಳಿಗೆ ಜನರ ಮೊರೆ

ಕಲ್ಲಂಗಡಿ ವ್ಯಾಪಾರಿಗಳಿಗೆ ಭರ್ಜರಿ ಲಾಭ

▸ **ನಂದನ್ ಪಟ್ಟಣ**

• **ಚನ್ನರಾಯಪಟ್ಟಣ:** ಬೇಸಿಗೆ ಆರಂಭವಾಗುತ್ತಿದ್ದಂತೆ ದಾಹ ತಣಿಸಲು ಜನ ತಂಪು ಪಾನೀಯಗಳ ಮೊರೆ ಹೋಗುವುದು ಸಾಮಾನ್ಯ. ಅದರಲ್ಲೂ ಪ್ರಿಯವಾದ ಪಾನೀಯವೆಂದರೆ ಎಳನೀರು, ದರಸ್ವಲ್ಪ ದುಬಾರಿ, ಅದಕ್ಕೆ ಪರ್ಯಾಯವೆಂಬಂತೆ ಕಲ್ಲಂಗಡಿ ಸೇವಿಸಿದರೂ ಸಹ ನೀರಿನ ದಾಹ ತಣಿಯುತ್ತದೆ. ಹಾಗಾಗಿ ಇತ್ತೀಚೆಗೆ ಕಲ್ಲಂಗಡಿಗೆ ಬೇಡಿಕೆ ಹೆಚ್ಚಾಗಿದೆ.

ಜನರು ಬಿಸಿಲಿನ ತಾಪಕ್ಕೆ ಹೈರಾಣಾಗುತ್ತಿದ್ದಾರೆ. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿ ಶೀತ ಚಳಿ, ಬೆಳಗ್ಗೆ ಮಂಜಿನ ವಾತಾವರಣವಿದ್ದು ಕ್ರಮೇಣ ಕಡಿಮೆಯಾಗುತ್ತ ಬಂದಿದೆ. ಬಿಸಿಲ ಬೇಗೆ ಹೆಚ್ಚಾಗುತ್ತಿದ್ದಂತೆ ಕಲ್ಲಂಗಡಿ ಹಣ್ಣು ಲಗ್ಗೆ ಇಟ್ಟಿದ್ದು, ರಸ್ತೆ ಬದಿಗಳಲ್ಲಿ ಭರ್ಜರಿ ಮಾರಾಟ ಆರಂಭವಾಗಿದೆ. ಈಗ ಎಲ್ಲೆಡೆ ಗ್ರಾಹಕರು ಬಿಸಿಲಿನ ಬೇಗೆಯಿಂದ ದಣಿವಾರಿಸಿಕೊಳ್ಳಲು ಕಲ್ಲಂಗಡಿ ಹಣ್ಣಿನ ಮೊರೆ ಹೋಗುತ್ತಿದ್ದಾರೆ.

ಎಷ್ಟೇ ನೀರು ಕುಡಿದರು ದಾಹ ನೀಗುವುದಿಲ್ಲ, ತಂಪು ಪಾನೀಯ ಸೇವಿಸಿದರೂ ಗಂಟಲು ಒಣಗುವುದು ಕಡಿಮೆಯಾಗಿಲ್ಲ, ಬಿಸಿಲಿನ ಬೇಗೆಯಿಂದ ಪಾರಾಗಲು ಜನ ತಂಪು ಪಾನೀಯದ ಜೊತೆಗೆ ಕಲ್ಲಂಗಡಿ ಹಣ್ಣು ಹಾಗೂ ಎಳನೀರಿನ ಮೊರೆ ಹೋಗುತ್ತಿದ್ದಾರೆ. ಎಳನೀರು ಒಂದಕ್ಕೆ 60 ರಿಂದ 80 ರೂ. ಕೊಡಬೇಕಾಗುತ್ತದೆ. ಆದರೆ ಕಡಿಮೆ ಬೆಲೆಗೆ ಸಿಗುತ್ತಿರುವ ಕಲ್ಲಂಗಡಿ ಹಣ್ಣು ಖರೀದಿಗೆ ಕಳೆದ ವಾರದಿಂದ ಜನ ಮುಗಿಬೀಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಬೇಸಿಗೆಗೂ ಮುನ್ನವೇ ಲೋಡುಗಟ್ಟಲೇ ಕಲ್ಲಂಗಡಿ ಹಣ್ಣು ಪಟ್ಟಣ ಮತ್ತು ಹೆದ್ದಾರಿಗಳ ಬದಿಗಳಲ್ಲಿ ತಂದು ಇಳಿಸಿದ್ದಾರೆ.



ಕಲ್ಲಂಗಡಿ ಹಣ್ಣು ಆರೋಗ್ಯಕ್ಕೆ ಉತ್ತಮವಾಗಿದ್ದು ದಾಹ ತಣಿಸಲು ಮತ್ತು ಸೌಂದರ್ಯಕ್ಕೂ ಸಹಕಾರಿಯಾಗುತ್ತದೆ. ಜನಶೇಗೆ ಕಲ್ಲಂಗಡಿ ಹಣ್ಣಿನಲ್ಲಿ ಶೇಕಡಾ 90 ಭಾಗವನ್ನು ನೀರಿನಾಂಶವಿದ್ದು ರೋಗನಿರೋಧಕಶಕ್ತಿಯನ್ನು ಹೊಂದಿದೆ. ಇದರ ಸೇವನೆಯಿಂದ ರಕ್ತದೊತ್ತಡ ಕಡಿಮೆಯಾಗುತ್ತದೆ. ಮೂಳೆ, ಸ್ನಾಯುಗಳು ಬಲಗೊಳ್ಳುತ್ತವೆ. ಕಿಡ್ನಿ, ಕಣ್ಣನ್ನು ಆರೋಗ್ಯವಾಗಿರುತ್ತದೆ. ಇದರ ಸೇವನೆಯಿಂದ ಅನೇಕ ಉಪಯೋಗವಿರುವುದರಿಂದ ಕಲ್ಲಂಗಡಿ ಹಣ್ಣನ್ನು ಹೆಚ್ಚು ಮಂದಿ ಸೇವಿಸುತ್ತಾರೆ. ಈಗಾಗಲೇ ಹಲವಾರು ಸ್ಥಳಗಳಲ್ಲಿ ಕಲ್ಲಂಗಡಿ ಹಣ್ಣುಗಳನ್ನು ರಾಶಿ ಹಾಕಿಕೊಂಡು ಮಾರಾಟ ನಡೆಸುತ್ತಿದ್ದು, ಜನರು ಅದರ ಖರೀದಿಗೆ ಮುಗಿಬಿದ್ದಿದ್ದಾರೆ.

1 ಪ್ಲೇಟ್ ಹಣ್ಣಿಗೆ ಹತ್ತು ರೂ.

ಸ್ಥಳೀಯವಾಗಿ ಕಲ್ಲಂಗಡಿ ಹಣ್ಣು ಬೆಳೆಯುತ್ತಿಲ್ಲ, ಹೊರ ರಾಜ್ಯಗಳಿಂದ ತಂದು ಇಲ್ಲಿ ಮಾರಾಟ ಮಾಡುತ್ತೇವೆ. ಅದರಲ್ಲೂ ಅಗತ್ಯಕ್ಕೆ ತಕ್ಕಂತೆ ಬಿಸಿಲು ಹೆಚ್ಚಾದಂತೆ ದಿನದಿಂದ ದಿನಕ್ಕೆ ಕಲ್ಲಂಗಡಿ ಹಣ್ಣಿನ ವ್ಯಾಪಾರ ಜೋರಾಗುತ್ತದೆ. ಚಿಕ್ಕ ಮಕ್ಕಳಿಂದ ಹಿಡಿದು ದೊಡ್ಡವರು ಸಹ ಬಾಯಿ ಚಪ್ಪರಿಸಿ ತಿನ್ನುತ್ತಾರೆ. ಒಂದು ಪ್ಲೇಟ್‌ಗೆ 10 ರೂ. ದರವಿದೆ. ಪ್ರತಿ ದಿನ ಕಾಯಿ ಸೇರಿ 2 ರಿಂದ 3 ಸಾವಿರ ರೂ. ವ್ಯಾಪಾರವಾಗುತ್ತಿದೆ. ಹಣ್ಣಿಗಿಂತ ಹಣ್ಣಿನ ರುಚಿಗೆ ಹೆಚ್ಚಿನ ಗಮನ ಹರಿಸುವರು.. ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ಉತ್ತಮವಾದ ಹಣ್ಣು ತಂದು ಮಾರಾಟ ಮಾಡಲಾಗುತ್ತದೆಂದು ಕಲ್ಲಂಗಡಿ ವ್ಯಾಪಾರಿ ಸ್ವಾಮಿ ಹೇಳಿದರು.

ಕೆಜಿ ಹಣ್ಣಿಗೆ 20ರಿಂದ 30 ರೂ.

ಸಾಮಾನ್ಯವಾಗಿ 1ಕೆಜಿ ಹಣ್ಣಿನ ಬೆಲೆ 20ರಿಂದ 30 ರೂ. ಇದ್ದು, ಸುಲಭವಾಗಿ ಎಲ್ಲರಿಗೂ ಲಭ್ಯವಾಗುವ ದರದಲ್ಲಿ ಮಾರಾಟವಾಗುತ್ತಿದೆ. ತಂಪು ಪಾನೀಯಗಳಿಗಿಂತ ಬಿಸಿಲಿನ ತಾಪದಿಂದ ಆರೋಗ್ಯ ರಕ್ಷಣೆಗೆ ಎಳನೀರು ಮತ್ತು ಕಲ್ಲಂಗಡಿ ಉತ್ತಮವಾಗಿದ್ದು, ಖರೀದಿಗೆ ಸಾರ್ವಜನಿಕರು ಮುಗಿ ಬೀಳುತ್ತಿರುವ ದೃಶ್ಯ ಎಲ್ಲೆಲ್ಲೂ ಕಂಡುಬರುತ್ತಿದೆಂದು ಕಸಾಪ ಸಂಘಟನಾ ಕಾರ್ಯದರ್ಶಿ ಜಬೀಉಲ್ಲಾಬೇಗ್ ತಿಳಿಸಿದರು.

ಮೇಲ್ದರ್ಜೆಗೇರಿದ ಗುಂಡಿ ಬಿದ್ದ ರಸ್ತೆ



ಚರಂಡಿಗೆ ಮನವಿ

ಈ ರಸ್ತೆಯಲ್ಲಿ ಎರಡು ಕೆರೆಗಳು ಬರುವುದರಿಂದ ಕೆಂಪಲಿಂಗನಹಳ್ಳಿ ಆರಂಭದ ರಸ್ತೆಯಿಂದ ದೇವಾಂಗ ಮಠ ಹಾಗೂ ಯಲಚಗೆರೆ ಗೇಟ್ ವರೆಗೂ ಎರಡು ಕಡೆ ಚರಂಡಿ ಅನಿವಾರ್ಯವಾಗಿದೆ. ಚರಂಡಿ ಮಾಡದಿದ್ದರೆ ನೀರು ಸಂಪೂರ್ಣ ರಸ್ತೆಗೆ ಬರುವುದರಿಂದ ಸಮಸ್ಯೆಯಾಗಲಿದ್ದು ಗ್ರಾಮದ ವ್ಯಾಪ್ತಿಯಲ್ಲಿರುವ ಚರಂಡಿ ಪೂರ್ಣ ರಸ್ತೆಗೆ ವಿಸ್ತರಣೆಯಾಗಬೇಕಾಗಿದೆ.

• **ನೆಲಮಂಗಲ:** ಗುಂಡಿಯಿಂದ ತುಂಬಿ ಹೋಗಿರುವ ಕೆಂಪಲಿಂಗನಹಳ್ಳಿ-ಬಾಣವಾಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಟೆಂಡರ್ ಪೂರ್ಣವಾಗಿದೆ. ಡಬಲ್ ರಸ್ತೆಯಾಗಿ ಮೇಲ್ದರ್ಜೆಗೇರಿಸಲಾಗಿದೆ.

ಕೆಂಪಲಿಂಗನಹಳ್ಳಿ- ಬಾಣವಾಡಿ ರಸ್ತೆ ಅಭಿವೃದ್ಧಿಗೆ ಕ್ರಮ

ನಗರದಿಂದ ಕೆಂಪಲಿಂಗನಹಳ್ಳಿ ಗ್ರಾಮದ ಮಾರ್ಗವಾಗಿ ಬಾಣವಾಡಿ ಶಿವಗಂಗೆ ರಸ್ತೆಯ ಕೆರೆ ಕೋಡಿವರೆಗಿನ 14 ಕಿ.ಮೀ ರಸ್ತೆಯನ್ನು ಡಬಲ್ ರಸ್ತೆಯಾಗಿ ಮೇಲ್ದರ್ಜೆಗೇರಿಸಿದ್ದು ಮೊದಲ ಹಂತವಾಗಿ ಬಹಳಷ್ಟು ಗುಂಡಿ ಬಿದ್ದು ವಾಹನ ಸವಾರರಿಗೆ ನಿತ್ಯ ಸಂಕಷ್ಟವಾಗಿದ್ದ 4 ಕಿ.ಮೀ . ರಸ್ತೆಯನ್ನು 10 ಮೀಟರ್ ಡಬಲ್ ರಸ್ತೆಯಾಗಿ 12ಕೋಟಿ ಅನುದಾನದಲ್ಲಿ ಅಭಿವೃದ್ಧಿ ಮಾಡಲು ಟೆಂಡರ್ ಪ್ರಕ್ರಿಯೆ ಮುಕ್ತಾಯವಾಗಿದ್ದು ಶೀಘ್ರದಲ್ಲಿ ಕಾಮಗಾರಿಗೆ ಚಾಲನೆ ನೀಡುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅಭಿವೃದ್ಧಿ ಕಾಣದ ಕೆಂಪಲಿಂಗನಹಳ್ಳಿಯಿಂದ ಬಾಣವಾಡಿವರೆಗೂ ಕೃಷಿ ಹಾಗೂ ಕೈಗಾರಿಕೆಗಳಿರುವ ಪ್ರದೇಶವಿದ್ದು ರಸ್ತೆ ಇಕ್ಕಟ್ಟಾಗಿರುವ ಪರಿಣಾಮ ಡಬಲ್ ರಸ್ತೆಯಾಗಿ ಪರಿವರ್ತನೆ ಮಾಡಿ ಅಭಿವೃದ್ಧಿ ಮಾಡುವುದಾಗಿ ಶಾಸಕ ಎನ್.ಶ್ರೀನಿವಾಸ್ ಘೋಷಣೆ ಮಾಡಿದರು. ಅನಂತರ 12ಕೋಟಿ ಅನುದಾನ ಬಿಡುಗಡೆಗೊಳಿಸಿದ್ದು 15ಮೀ ಡಬಲ್ ರಸ್ತೆಗೆ ಯೋಜನೆ ರೂಪಿಸಿದ ಅಧಿಕಾರಿಗಳು, ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದಾಗ 10ಮೀಟರ್ ಮಾತ್ರ ಜಾಗ ಸಿಕ್ಕಿತ್ತು, ಉಳಿದ ಜಾಗವನ್ನು ಭೂಸ್ವಾಧೀನ ಮಾಡುವ ಅನಿವಾರ್ಯತೆ ಕಾರಣದಿಂದ 10ಮೀ ಡಬಲ್ ರಸ್ತೆಯಾಗಿ ಮತ್ತೆ ಅನುಮೋದನೆ ಕಳುಹಿಸಲಾಗಿತ್ತು. ಆರಂಭದ 4 ಕಿ.ಮೀ. ರಸ್ತೆ ಅಭಿವೃದ್ಧಿಗೆ 12 ಕೋಟಿ ರೂ. ಅನುದಾನದ ಟೆಂಡರ್‌ಗೆ ಮೊದಲು ಅರ್ಜಿ ಹಾಕದ ಪರಿಣಾಮ 2ನೇ ಬಾರಿ ಟೆಂಡರ್ ಮಾಡಿ ಫೈನಲ್ ಮಾಡಲಾಗಿದೆ.

> ಕೆಂಪಲಿಂಗನಹಳ್ಳಿಯಿಂದ ಬಾಣವಾಡಿವರೆಗೂ ಡಬಲ್ ರಸ್ತೆಯಾಗಿ ಮೇಲ್ದರ್ಜೆಗೇರಿಸಿದ್ದು ಮೊದಲ ಹಂತವಾಗಿ 12ಕೋಟಿ ಅನುದಾನ ಬಿಡುಗಡೆಯಾಗಿ ಟೆಂಡರ್ ಮುಕ್ತಾಯವಾಗಿದೆ. ಶೀಘ್ರದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುತ್ತದೆ.
> ■ ಎನ್.ಶ್ರೀನಿವಾಸ್ , ಶಾಸಕರು, ನೆಲಮಂಗಲ

> ಕೆಂಪಲಿಂಗನಹಳ್ಳಿ ರಸ್ತೆಗೆ ಶಾಸಕರು ಅನುದಾನ ನೀಡಿ ಡಬಲ್ ರಸ್ತೆಯಾಗಿಸುವ ಮೂಲಕ ನಮಗೆಲ್ಲ ಅಚ್ಚರಿಯಾಗುವಂತೆ ಮಾಡಿದ್ದಾರೆ. ಗುಂಡಿ ರಸ್ತೆ ಮಾದರಿ ರಸ್ತೆಯಾಗಿ ಅಭಿವೃದ್ಧಿಯಾಗುತ್ತಿರುವುದು ಸಂತೋಷವಾಗಿದೆ.
> ■ ಸುನೀಲ್‌ಕುಮಾರ್ , ಗ್ರಾ.ಪಂ ಮಾಜಿ ಸದಸ್ಯರು, ಶ್ರೀನಿವಾಸಪುರ.

ದೇಶಾಭಿಮಾನ ಬೆಳೆಸಿಕೊಳ್ಳಲಿ



• **ಸೂಲಿಬೆಲೆ:** ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಗತ್ ಸಿಂಗ್, ರಾಜಗುರು, ಸುಖದೇವ ಹೋರಾಟ ಮಾಡಿದ ಅಪ್ರತಿಮ ಧೈರ್ಯ ಮತ್ತು ತ್ಯಾಗವನ್ನು ಸ್ಮರಿಸಲು ದೇಶಭಕ್ತಿಯನ್ನು ಸ್ಮರಣೆ ಮಾಡಬೇಕು ಎಂದು ಸರ್ಕಾರಿ ಪದವಿ ಪೂರ್ವ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಬಿ.ಎನ್.ಗೋಪಾಲಗೌಡ ಹೇಳಿದರು.

ಇಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮೇರಾ ಯುವ ಭಾರತ್ ಬೆಂಗಳೂರು ಗ್ರಾಮಾಂತರ , ಜೇನುಗೂಡು ರೂರಲ್ ಡೆವಲಪ್‌ಮೆಂಟ್ ಅಂಡ್ ಕಲ್ಚರಲ್ ಟ್ರಸ್ಟ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಶಹೀದ್ ದಿವಸ್(ಬಲಿದಾನ ದಿನಾಚರಣೆ) ಹಾಗೂ ಪಾದಯಾತ್ರೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, 1931ರಲ್ಲಿ ಮಾರ್ಚ್ 13 ರಂದು ಲಾಹೋರ್ ಜೈಲಿನಲ್ಲಿ ಇಟ್ಟಿದ್ದ ಕ್ರಾಂತಿಕಾರಿ ಹೋರಾಟಗಾರರಾದ ಭಗತ್ ಸಿಂಗ್, ಸುಖದೇವ್ ಥಾಪರ್,ಶಿವರಾಮ್ ರಾಜಗುರು ಅವರನ್ನು ಬ್ರಿಟಿಷ್ ಸರ್ಕಾರ ಗಲ್ಲಿಗೇರಿಸಿತು ಈ ದಿನದ ಸ್ಮರಣೆಯಾಗಬೇಕು ಎಂದರು. ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ವೆಂಕಟೇಶ್ ಮಾತನಾಡಿ, ವಿದ್ಯಾರ್ಥಿಗಳು ಯುವಕರು ದೇಶಾಭಿಮಾನಿಗಳಾಗಿ ರೂಪಗೊಳ್ಳಬೇಕು ನನ್ನ ಭಾರತ ನನ್ನ ಜವಾಬ್ದಾರಿ ಎಂಬ ಘೋಷವಾಕ್ಯದಂತೆ ನಾವೆಲ್ಲರೂ ಸೈನಿಕರಂತೆ ದೇಶದ ರಕ್ಷಣೆಗೆ ಬದ್ಧರಾಗಬೇಕು ಎಂದರು. ಮೈಭಾರತ್ ವತಿಯಿಂದ ನೀಡಲಾಗಿದ್ದ ಟೋಪಿ, ಬ್ಯಾಡ್ಜ್‌ನ್ನು ವಿತರಣೆ ಮಾಡಲಾಯಿತು. ಸೂಲಿಬೆಲೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶಹೀದ್ ದಿವಸ್ ಆಚರಣೆ ವಿಶೇಷವಾಗಿ ರಾಷ್ಟ್ರೀಯ ಸೇವಾ ಯೋಜನೆಯ ಸಹಯೋಗದಲ್ಲಿ ಶ್ರಮದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಾದಯಾತ್ರೆಯಲ್ಲಿ ಸಾಥ್ ನೀಡಿದರು.

ಪ್ರಾಂಶುಪಾಲ ವೆಂಕಟೇಶ್, ಮಾನವ ಹಕ್ಕುಗಳ ಜಾಗೃತಿ ಸಮಿತಿ ಜಿಲ್ಲಾಧ್ಯಕ್ಷ ಎಂ.ಆರ್.ಉಮೇಶ್ ,ಜೇನುಗೂಡು ಟ್ರಸ್ಟ್ ನಿರ್ದೇಶಕ ಜಿಯಾವುಲ್ಲಾ, ನಯಾಜ್ ಖಾನ್, ಪ್ರಧಾನ ಕಾರ್ಯದರ್ಶಿ ಬೆಟ್ಟಹಳ್ಳಿ ಗೋಪಿನಾಥ್, ಗ್ರಾ.ಪಂ.ಸದಸ್ಯ ಆನಂದ್, ಶಿಕ್ಷಕರಾದ ಬಸವರಾಜು, ಅಚ್ಯುತ್, ಲಕ್ಷ್ಮೀಭಟ್, ರುತ್ ಜೇನಿತಾ, ಇತರರು ಇದ್ದರು.

ಭೂ ಕಬಳಿಕೆ ವಿರುದ್ಧ ಕ್ರಮಕ್ಕಾಗಿ ಧರಣಿ

• **ದೇವನಹಳ್ಳಿ:** ತಾಲೂಕಿನ ಅಗ್ನೇಶ್ವರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಕ್ಕೇನಹಳ್ಳಿ-ಮಲ್ಲೇನಹಳ್ಳಿ ಜೋಡಿ ಗ್ರಾಮಕ್ಕೆ ಸೇರಿದ ಗ್ರಾಮಠಾಣೆಯ ಸ.ನಂ.37 ರಲ್ಲಿ 6-18 ಗುಂಟೆ ಜಮೀನನ್ನು, ವಿಧಾನಪರಿಷತ್ ಸದಸ್ಯ ಎಂ.ಆರ್.ಸೀತಾರಾಮ್ ಅವರ ಕುಟುಂಬದವರು ಭೂ ಕಬಳಿಕೆ ಮಾಡಿದ್ದು, ಕೂಡಲೇ ಸರ್ಕಾರದ ವಶಕ್ಕೆ ಪಡೆದುಕೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿ, ಜಿಲ್ಲಾಧಿಕಾರಿಗೆ ಮನವಿ ಪತ್ರ ಸಲ್ಲಿಸಿದರು.

ಜಿಲ್ಲಾಡಳಿತ ಭವನದ ಮುಂದೆ ಸೋಮವಾರ ಪ್ರತಿಭಟನೆ ನಡೆಸಿದ, ಅಕ್ಕೇನಹಳ್ಳಿ-ಮಲ್ಲೇನಹಳ್ಳಿ ಗ್ರಾಮಸ್ಥರು, ಹಾಗೂ ಕೆ.ಆರ್.ಎಸ್ ಪಕ್ಷದ ಕಾರ್ಯಕರ್ತರು, ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನು ಕಬಳಿಕೆ ಮಾಡಿರುವ ಒಂದೇ ಕುಟುಂಬಕ್ಕೆ ಪುನಃ 6 ಎಕರೆ 18 ಗುಂಟೆ ಜಮೀನು ಮಂಜೂರು ಮಾಡುವಂತೆ ಸರ್ಕಾರ ನಡಾವಳಿ ಮಾಡುವ ಮೂಲಕ, ಭೂ ಮಾಫಿಯಾಗೆ ಕುಮ್ಮಕ್ಕು ನೀಡುತ್ತಿದೆಂದು ದೂರಿದರು.

ಎಂ.ಆರ್.ಸೀತಾರಾಮ್ ಅವರ ಕುಟುಂಬದವರು, ಭೂ ಸಾಗುವಳಿ ಮಾಡುತ್ತಿದ್ದಾರೆಯೇ. ನೂರಾರು ಎಕರೆ ಭೂ ಕಬಳಿಕೆ ಮಾಡಿ ಕೊಂಡು, ಭೂಮಿ ಮಾರಾಟ ಮಾಡಿಕೊಂಡು, ಸಾವಿರಾರು ಕೋಟಿ ರೂಪಾಯಿಗಳು ಗಳಿಸಿಕೊಳ್ಳುವವರಿಗೆ ಪುನಃ ಭೂಮಿ ಮಂಜೂರು ಮಾಡುವಂತಹ ಉತ್ಸುಕತೆ ಯಾಕೆ. ಇದು ಅಧಿಕಾರ ದುರ್ಬಳಕೆಯಲ್ಲವೇ ಎಂದು ಪ್ರಶ್ನಿಸಿದರು. ಈ ಗ್ರಾಮದಲ್ಲಿ ನೂರಾರು ವರ್ಷಗಳಿಂದ ವಾಸವಾಗಿರುವ ನಿವಾಸಿಗಳನ್ನು ಒಕ್ಕಲೆಬ್ಬಿಸಿ, ಅಲ್ಲಿಂದ ಓಡಿಸಿದ್ದಾರೆ. ಈಗ ಭೂಮಿಯನ್ನು ಕಬಳಿಕೆ ಮಾಡುತ್ತಿದ್ದಾರೆಂದರು.



ಯಾವುದೇ ಕಾರಣಕ್ಕೂ ಭೂಮಿ ಮಂಜೂರು ಮಾಡಲು ಅವಕಾಶ ನೀಡಬಾರದು. 6 ಎಕರೆ 18 ಗುಂಟೆ ಜಮೀನು ಸಂಪೂರ್ಣವಾಗಿ, ಗ್ರಾಮಸ್ಥರಿಗೆ ಸೇರಬೇಕು. ನೀವು ಬಂದು ಸ್ಥಳ ಪರಿಶೀಲನೆ ನಡೆಸಬೇಕು ಎಂದು ಗ್ರಾಮಸ್ಥರು, ಜಿಲ್ಲಾಧಿಕಾರಿಗೆ ಮನವಿ ಮಾಡಿಕೊಂಡರು.

ಮನವಿ ಸ್ವೀಕರಿಸಿದ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಡಾ.ಕೆ. ಎನ್.ಅನುರಾಧಾ ಮಾತನಾಡಿ, ಸರ್ಕಾರದಿಂದ ನಡಾವಳಿ ಬಂದಿದೆ. ಆದರೆ, ನಾವು ಇದುವರೆಗೂ ಈ ಜಮೀನಿನ ವಿಚಾರವಾಗಿ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ, ಸ್ಥಳ ಪರಿಶೀಲನೆ ನಡೆಸಲಾಗುತ್ತದೆ. ಆ ನಂತರವೇ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಟ್ರೀಟ್‌ಮೆಂಟ್ ಜರೂರಿ ಹೈ ಆಂದೋಲನದಲ್ಲಿ ಧೋನಿ

• **ಬೆಂಗಳೂರು:** ಮೆರಿಲ್‌ನ ರಾಷ್ಟ್ರವ್ಯಾಪಿ ಸಾರ್ವಜನಿಕ ಆರೋಗ್ಯ ಆಂದೋಲನವಾದ ಟ್ರೀಟ್‌ಮೆಂಟ್ ಜರೂರಿ ಹೈಗೆ ಭಾರತೀಯ ಕ್ರಿಕೆಟ್ ಮಾಜಿ ನಾಯಕ ಎಂ.ಎಸ್. ಧೋನಿ ಚಾಲನೆ ನೀಡಿದ್ದು, ಇದು ಸಕಾಲಿಕ ರೋಗ ನಿರ್ಣಯ ಮತ್ತು ಸುಧಾರಿತ ವೈದ್ಯಕೀಯ ಚಿಕಿತ್ಸೆಗಳ ಪ್ರವೇಶದ ಬಗ್ಗೆ ಜಾಗೃತಿ ಮೂಡಿಸುವ ಆಂದೋಲನವಾಗಿದೆ.



ಈ ಆಂದೋಲನದ ಉದ್ದೇಶದ ಕುರಿತು ಮಾತನಾಡಿದ ಎಂ ಎಸ್ ಧೋನಿ, ನಿಮ್ಮ ಆರೋಗ್ಯವನ್ನು ನೋಡಿಕೊಳ್ಳುವುದು ನೀವು ಮಾಡಬಹುದಾದ ಪ್ರಮುಖ ಕೆಲಸಗಳಲ್ಲಿ ಒಂದಾಗಿದೆ. ನಿಮಗಾಗಿ ಮತ್ತು ನಿಮ್ಮನ್ನು ಪ್ರೀತಿಸುವ ಜನರು, ನಮ್ಮ ಪೋಷಕರು ಮತ್ತು ಅಜ್ಜ-ಅಜ್ಜಿಯರು ಅರ್ಹವಾದ ಆರೈಕೆ, ಗಮನ ಮತ್ತು ಬೆಂಬಲವನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ, ಟ್ರೀಟ್‌ಮೆಂಟ್ ಜರೂರಿ ಹೈ ನಂತಹ ಉಪಕ್ರಮಗಳು ಆ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿದ್ದು, ನಾನು ಇದರ ಭಾಗವಾಗಲು ಸಂತೋಷಪಡುತ್ತೇನೆ ಎಂದು ಹೇಳಿದರು. ಬೆಟ್ಟರ್ ಹುಡ್ ನಾಟ್ ರಿಟೈರ್ ಟ್ರೀಟ್‌ಮೆಂಟ್ ಜರೂರಿ ಹೈ ಧ್ಯೇಯದಲ್ಲಿ ಸಮರ್ಪಿತ ಹಿರಿಯ ನಾಗರಿಕರ ಆರೋಗ್ಯ ಉಪಕ್ರಮವನ್ನು ಮೆರಿಲ್ ಪರಿಚಯಿಸಿದೆ. ಇದರಿಂದ ಆರಂಭಿಕ ಪತ್ತೆ, ತಡೆಗಟ್ಟುವ ತಪಾಸಣೆ ಮತ್ತು ನವೀನ ಚಿಕಿತ್ಸಾ ಆಯ್ಕೆಗಳಿಗೆ ಪ್ರವೇಶ ನೀಡುತ್ತದೆ. ಹೃದಯ, ಮೂಳೆಚಿಕಿತ್ಸೆ ಮತ್ತು ಇತರ ವಯಸ್ಸಿಗೆ ಸಂಬಂಧಿಸಿದ ಪರಿಸ್ಥಿತಿಗಳಲ್ಲಿ ಫಲಿತಾಂಶಗಳನ್ನು ಗಮನಾರ್ಹವಾಗಿ ಸುಧಾರಿಸಬಹುದು - ಅಂತಿಮವಾಗಿ ಇದು ಹಿರಿಯ ನಾಗರಿಕರ ಜೀವನದ ಗುಣಮಟ್ಟವನ್ನು ಕಾಪಾಡುತ್ತದೆ ಎಂದು ಆಂದೋಲನ ದೃಢಪಡಿಸುತ್ತದೆ.

5 ಗ್ರಾಮಗಳಿಗೆ ನೀರಿನ ಭದ್ರತೆ

• **ನೆಲಮಂಗಲ/ಬೆಂಗಳೂರು:** ಯುನೈಟೆಡ್ ಬ್ರೀವರೀಸ್ ಲಿಮಿಟೆಡ್ ಸಂಸ್ಥೆಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕಿನ ಮಲ್ಲರಬಾಣವಾಡಿ, ಹಂಚಿಪುರ, ಕೊಡಪ್ಪನಹಳ್ಳಿ, ಬೈರೇಗೌಡನಹಳ್ಳಿ ಮತ್ತು ವರದನಾಯಕನಹಳ್ಳಿ ಎಂಬ ಐದು ಗ್ರಾಮಗಳಲ್ಲಿ ಪ್ರಾಜೆಕ್ಟ್ ಜಲ ಸಂಚಯದ ಮೂರನೇ ಹಂತವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಈ ಮೂಲಕ ಐದು ಗ್ರಾಮಗಳಿಗೆ ನೀರಿನ ಭದ್ರತೆ ಒದಗಿಸಿದೆ. ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ಎಸ್ ಎಮ್ ಸೆಹಗಲ್ ಫೌಂಡೇಶನ್ ಸಹಯೋಗದೊಂದಿಗೆ ಈ ಯೋಜನೆ ಹಮ್ಮಿಕೊಳ್ಳಲಾಗಿದೆ. ಯೋಜನೆಯ ಭಾಗವಾಗಿ ಗ್ರಾಮದ ಕೆರೆಯನ್ನು ಪುನಶ್ಚೇತನಗೊಳಿಸಲಾಗಿದ್ದು, ಮಳೆನೀರು ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಲಾಗಿದೆ. ವಿಶೇಷವೆಂದರೆ, ಹೂಳೆತ್ತುವ ಸಂದರ್ಭದಲ್ಲಿ ಸಂಗ್ರಹವಾದ ಮಣ್ಣನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ, ಮಣ್ಣಿನ ಫಲವತ್ತತೆ ಹೆಚ್ಚಿಸಲು ಸ್ಥಳೀಯ ರೈತರಿಗೆ ಉಚಿತವಾಗಿ ನೀಡಲಾಗಿದೆ.

ವಚನಕಾರ ದೇವರ ದಾಸಿಮಯ್ಯ 1047ನೇ ಜಯಂತ್ಯುತ್ಸವ

ಆದರ್ಶ ಪುರುಷರ ಚಿಂತನೆಯೇ ಮಾದರಿ

• **ದೊಡ್ಡಬಳ್ಳಾಪುರ:** ನಮ್ಮ ಟ್ರಸ್ಟ್‌ನಿಂದ ಸತತವಾಗಿ ದೇವರ ದಾಸಿಮಯ್ಯ ಜಯಂತ್ಯುತ್ಸವ ಕಾರ್ಯಕ್ರಮ ಕಳೆದಹತ್ತು ವರ್ಷದಿಂದ ಆಚರಿಸಿಕೊಂಡು ಬಂದಿದ್ದೇವೆ ಎಂದು ಶ್ರೀ ಸಂಕಣ್ಣನವರ ಚಾರಿಟೇಬಲ್ ಟ್ರಸ್ಟ್‌ನ ಪ್ರಭಾರ ಅಧ್ಯಕ್ಷ ನಾಗರಾಜ್ ಸಂಕಣ್ಣ ಹೇಳಿದರು.

ನಗರದ ದೇವಾಂಗ ಶ್ರೀ ಸಂಕಣ್ಣ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಶ್ರೀ ದೇವರ ದಾಸಿಮಯ್ಯನವರ 1047ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಶ್ರೀ ದೇವರ ದಾಸಿಮಯ್ಯನವರ ಇತಿಹಾಸ ನೋಡಿದಾಗ ಕರ್ನಾಟಕದ ಇತಿಹಾಸದ ಪುಟದಲ್ಲಿ ಹಲವಾರು ಮಹನೀಯರು ಸ್ಮರಿಸಬೇಕಾಗುತ್ತದೆ. ಶಂಕರಾಚಾರ್ಯರು, ಮಧ್ವಾಚಾರ್ಯರು, ಪುರಂದರದಾಸರು, ಕನಕದಾಸರು, ಭಕ್ತಿ ಭಂಡಾರ ಬಸವಣ್ಣ,, ಇಂಥವರ ಸಾಲಿನಲ್ಲಿ ಮೊದಲ ಆದ್ಯ ವಚನಕಾರ,, ನೇಕಾರ ಸಂತ ನೇಕಾರ ಪಿತಾಮಹ ದೇವರ ದಾಸಿಮಯ್ಯ ಎಂದು ಸ್ಮರಿಸಬಹುದಾಗಿದೆಂದರು. ಮರೆಯಲಾಗದ ಮಾಣಿಕ್ಯ ಎಂದರೆ ತಪ್ಪಾಗಲಾರದು, ದೇಶಕ್ಕೆ ರೈತ ಎಷ್ಟು ಮುಖ್ಯನೋ ಅದೇ ರೀತಿ ಸಮಾಜದ ಗೌರವವನ್ನು ಕಾಪಾಡುವಲ್ಲಿ ನೇಕಾರ ಸಮಾಜ ಅತ್ಯಂತ ಮುಖ್ಯವಾಗಿದೆ. ದಾಸಿಮಯ್ಯನವರು ವಿಶ್ವದಲ್ಲೇ ಮೊದಲ ವಚನಕಾರರಾಗಿ ಸಮಾಜದಲ್ಲಿ ಆಗುವ ಅಂಕುಡೊಂಕನ್ನು ತಮ್ಮ ವಚನದ ಮೂಲಕ ಸಮಾಜಕ್ಕೆ ಸಾರಿದ ಮಹಾನ್ ವ್ಯಕ್ತಿ ಎಂದರು. ನಂತರ ಮಹಿಳಾ ಸಮಾಜದ ಅಧ್ಯಕ್ಷೆ ವತ್ಸಲಾಜಗನ್ನಾಥ್ ಮಾತನಾಡಿ, ದಾಸಿಮಯ್ಯ ಅವರ ಕೊಡುಗೆ ಸಮಾಜಕ್ಕೆ ದೊಡ್ಡ ಮಾದರಿಯಾಗಿದೆ. ನಾವೆಲ್ಲರೂ ಅವರ ಆದರ್ಶವನ್ನು ಪಾಲಿಸಬೇಕೆಂದರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಜಾನಪದ, ನೃತ್ಯ, ಕ್ರೀಡೆ, ಯೋಗ ಕ್ಷೇತ್ರದಲ್ಲಿ, ಮಹಿಳಾ ಕ್ರಿಕೆಟ್ ವಿಭಾಗದಲ್ಲಿ, ಕುಮಾರಿ ಯಶಪ್ರದ ಎಸ್.ಎಂ. ಹಿತ ಶ್ರೀ ಎಸ್.ಎಂ. ಯಶಸ್ವಿನಿ ಎ.ಜಿ, ಚಿಂತನಾ ಎಚ್.ಆರ್. ಕೀರ್ತನ ಬಿ.ಎಸ್, ಪುನೀತ್ ಕೊಂಗಾಡಿ, ಪೃಥ್ವಿಕ್, ಸುಮಧ್ವ, ಚಂದನ ಎಸ್.ಎನ್.ಸನ್ಮಾನಿಸಲಾಯಿತು. ಸಂಕಣ್ಣನವರ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಸದಾಶಿವಯ್ಯ, ವಿಜಯೇಂದ್ರಪ್ರಸಾದ್, ಶಂಕರ್, ಶಿವರಾಂ, ಮೋಹನ್ ಸಂಕಣ್ಣ, ನರೇಂದ್ರ, ನಾಗರಾಜ್. ಗಿರಿಧರ್, ಶಿಲ್ಪ, ಕವಿತಾ ಸೇರಿದಂತೆ ಇತರರಿದ್ದರು.



ಶ್ರೀ ಶಿವಶಕ್ತಿ ಭದ್ರಕಾಳಿಕಾ ದೇವಿ 48ನೇ ದಿನದ ಮಂಡಲ ಪೂಜೆ


ಲೋಕಕಲ್ಯಾಣಾರ್ಥ ಚಂಡಿಕಾ ಯಾಗ

• **ತಾವರೆಕೆರೆ:** ಹೊಸಕೋಟೆ ತಾಲೂಕಿನ ನಕ್ಕನಹಳ್ಳಿ ಗ್ರಾಮದ ಶ್ರೀ ಶಿವಶಕ್ತಿ ಭದ್ರಕಾಳಿಕಾ ದೇವಿ ಕಾಲಭೈರವ ಆಂಜನೇಯಸ್ವಾಮಿ ದೇವಾಲಯದ 48ನೇ ದಿನದ ಮಂಡಲ ಪೂಜೆ ಹಾಗೂ ಮಹಾ ಚಂಡಿಕಾಯಾಗ ಹಾಗೂ ವಿಶೇಷ ಅಲಂಕಾರ ಅನ್ನಸಂತರ್ಪಣೆ, ಪೂಜಾ ಕಾರ್ಯಕ್ರಮಗಳು ದೇವಾಲಯದ ಅರ್ಚಕರಾದ ಮನೋಹರ್ ಶಾಸ್ತ್ರಿಗಳ ನೇತೃತ್ವದಲ್ಲಿ ನೆರವೇರಿತು.

ನಂತರ ಮಾತನಾಡಿ, ದೇವಾಲಯ ಪ್ರಾರಂಭಗೊಂಡು ಇಂದಿಗೆ 48 ದಿನಗಳು ಪೂರ್ಣಗೊಂಡಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಭಕ್ತರ ಸಮ್ಮುಖದಲ್ಲಿ ಶ್ರೀ ಶಿವಶಕ್ತಿ ಭದ್ರಕಾಳಿಕಾ ದೇವಿ ಕಾಲಭೈರವೇಶ್ವರ ಶ್ರೀ ಆಂಜನೇಯ ಸ್ವಾಮಿಗೆ ವಿಶೇಷ ಅಲಂಕಾರ ಹಾಗೂ ಮಹಾಚಂಡಿ ಯಾಗವನ್ನು ಏರ್ಪಡಿಸಲಾಗಿದೆಂದರು.

ಎರಡು ದಿನಗಳ ಕಾಲ ನಡೆದ ಪೂಜಾ ಕಾರ್ಯಕ್ರಮದಲ್ಲಿ ಶನಿವಾರ ಮಹಾಮಂಡಳ ಆರಾಧನೆ ಹಾಗೂ ಚಂಡಿಕಾ ಪಾರಾಯಣ ಚಂಡಿಕಾ ಸಹಸ್ರ ನಾಮಾವಳಿ , ಕುಂಕುಮ ರಚನೆ, ದೀಪಾರಾಧನೆ ಹಾಗೂ ಪರಿವಾರ ದೇವತೆಗಳ ಹೋಮ ಲಘು ಪೂರ್ಣಾವತಿ ನಡೆಯಿತು ಎಂದು ವಿವರಿಸಿದರು.

ಹೂವಿನ ಅಲಂಕಾರದೊಂದಿಗೆ ಶ್ರೀ ಭದ್ರಕಾಳಿ ಅಮ್ಮನವರಿಗೆ ರುದ್ರಾಭಿಷೇಕ ಕನ್ನಿಕಾ ಪೂಜೆ ಹಾಗೂ ಮಹಾ ಚಂಡಿಕಾ ಹೋಮ ಏರ್ಪಡಿಸಲಾಗಿತ್ತು. ಮಹಾ ಚಂಡಿಕಾ ಹೋಮದಿಂದ ಪಾಪ ಕರ್ಮ ನಿವಾರಣೆ ಶತ್ರು ದೋಷ ನಿವಾರಣೆ ಸಕಲ ರೋಗ ಬಾಧೆಗಳ ನಿವಾರಣೆ ಸಕಲ ಗ್ರಹ ಬಾಧೆಗಳ ನಿವಾರಣೆ ಹೀಗೆ ಲೋಕಕಲ್ಯಾಣಾರ್ಥವಾಗಿ ಈ ರೀತಿಯ ಮಹಾ ಯಾಗಗಳನ್ನು ನಡೆಸಲಾಗುತ್ತದೆ. ನೂರಾರು ಸಂಖ್ಯೆಯಲ್ಲಿ ನೆರೆದಿದ್ದ ಭಕ್ತ ಸಮೂಹಕ್ಕೆ ನಿರಂತರ ಅನ್ನಸಂತರ್ಪಣೆಯ ಸಹ ಏರ್ಪಡಿಸಲಾಗಿತ್ತು. ಬೆಂಗಳೂರು ಶ್ರೀ ಬನಶಂಕರಿ ದೇವಾಲಯದ ಅರ್ಚಕರು ಹಾಗೂ ನಕ್ಕನಹಳ್ಳಿ ಶ್ರೀ ಕಾಳಿಕಾದೇವಿ ಆರಾಧಕರಾದ ಮನೋಹರ್ ಶಾಸ್ತ್ರಿಗಳು ಹಾಗೂ ಅವರ ಶಿಷ್ಯ ವೃಂದ ಸ್ಥಳೀಯರು ಪೂಜಾ ಕಾರ್ಯಕ್ರಮದಲ್ಲಿದ್ದರು.



ಕಿರು ಸುದ್ದಿ

ಗಡಿಭಾಗದಲ್ಲಿ ಒಂಟಿ ಆನೆ ದಾಳಿ: ರೈತರ ಬೆಳೆ ನಾಶ



• **ಬಂಗಾರಪೇಟೆ:** ತಾಲೂಕಿನ ಗಡಿ ಗ್ರಾಮಗಳ ತೋಟಗಳಲ್ಲಿ ಮತ್ತೆ ಪ್ರತ್ಯಕ್ಷಗೊಂಡ ಒಂಟಿ ಆನೆ ಭಾನುವಾರ ರಾತ್ರಿ ತಾಲೂಕಿನ ಗುಲ್ಲಹಳ್ಳಿ ಗ್ರಾಮದ ರೈತರ ತೋಟಗಳಿಗೆ ಲಗ್ಗೆ ಇಟ್ಟು ಅಪಾರ ಪ್ರಮಾಣದ ಬೆಳೆ ತುಳಿದು ರೈತರಿಗೆ ನಷ್ಟ ಉಂಟಾಗಿದೆ. ಭಾನುವಾರ ರಾತ್ರಿ ಗುಲ್ಲಹಳ್ಳಿ ಗ್ರಾಮದ ತೋಟಗಳಿಗೆ ಲಗ್ಗೆ ಇಟ್ಟ ಒಂಟಿ ಆನೆ ರೈತ ವೆಂಕಟೇಶಪ್ಪ ಅಗಲಕಾಯಿ ತೋಟತುಳಿದು ನಾಶಪಡಿಸಿದ್ದು, ಕೊಳವೆಬಾವಿ ಪೈಪ್ ತುಳಿದು ನಾಶಪಡಿಸಿವೆ, ತೋಟದಲ್ಲಿ ಅಳವಡಿಸಿದ ಡ್ರಿಪ್ ಪೈಪನ್ನು ತುಳಿದು ನಷ್ಟುಂಟುಮಾಡಿದೆ. ರೈತ ವೆಂಕಟರಾಮ್ ರವರ ರಾಗಿ ಬೆಳೆ ತುಳಿದು ನಾಶಮಾಡಿದೆ, ಕೃಷಿ ಚಟುವಟಿಕೆಗೆ ಅಗತ್ಯವಿರುವ ಎಲ್ಲಾ ಪರಿಕರಗಳ ಬೆಲೆ ಗಗನಕೇರಿದ್ದರು ನಾವು ಸಾಲಸೋಲಮಾಡಿ ಬೆಳೆಗಳನ್ನು ಮಾಡುತ್ತಿದ್ದೇವೆ, ಆದರೆ ಆನೆಗಳ ದಾಳಿಯಿಂದಾಗಿ ಬೆಳೆ ಸಂಪೂರ್ಣ ನಾಶವಾಗುತ್ತಿರುವುದರಿಂದ ಮತ್ತೆ ಬೆಳೆ ಮಾಡಲು ಹಿಂಜರಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಈ ಭಾಗದ ರೈತರು ಬೇಸರ ವ್ಯಕ್ತಪಡಿಸಿದ್ದಾರೆ. ಒಂಟಿ ಆನೆ ದಾಳಿಯಿಂದ ತಾಲೂಕಿನ ಅನೇಕ ರೈತರು ಮೃತಪಟ್ಟಿರುವ ಘಟನೆಗಳು ಸಹ ನಡೆದಿದ್ದು, ಈ ಬಾರಿ ಆನೆ ದಾಳಿಯಿಂದಾಗಿ ಯಾವ ಘಟನೆ ಸಂಭವಿಸಬಹುದು ಎಂಬ ಭಯ ಭೀತಿಯಲ್ಲಿ ರೈತರು ಜೀವನವನ್ನು ಸಾಗಿಸುವ ಪರಿಸ್ಥಿತಿ ಎದುರಾಗಿದೆ. ಅರಣ್ಯ ಇಲಾಖೆ ಸಿಬ್ಬಂದಿ ಅರಸಹಾಸಪಟ್ಟು ಆನೆಯನ್ನು ಕಾರ್ಯಾಚರಣೆ ನಡೆಸಿ ತಮಿಳುನಾಡಿನ ಓಡಿಸಿದರು ಸಹ ಮತ್ತೆ ಮತ್ತೆ ಗಡಿ ಭಾಗದ ಗ್ರಾಮಗಳಲ್ಲಿ ಪ್ರತ್ಯಕ್ಷಗೊಂಡು ರೈತರಲ್ಲಿ ಆತಂಕ ಹೆಚ್ಚು ಮಾಡಿದೆ. ಭಾನುವಾರ ಇಡೀ ರಾತ್ರಿ ಕಾರ್ಯಾಚರಣೆ ಮಾಡಿ ಆನೆಯನ್ನು ಯರಗೋಳ ಅರಣ್ಯ ಪ್ರದೇಶಕ್ಕೆ ಓಡಿಸಲಾಗಿದೆ. ಆದಷ್ಟು ಬೇಗ ತಮಿಳುನಾಡಿನ ಓಡಿಸುತ್ತೇವೆ ಎಂದು ಅರಣ್ಯ ಇಲಾಖೆ ಸಿಬ್ಬಂದಿ ಮಾಹಿತಿ ನೀಡಿದ್ದಾರೆ

ವಾಗಟ ವರದರಾಜ ಸ್ವಾಮಿ ಬ್ರಹ್ಮರಥೋತ್ಸವ





• **ಹೊಸಕೋಟೆ:** ಇತಿಹಾಸ ಪ್ರಸಿದ್ಧ ಶ್ರೀಯೋಗಪುರಿ ವರದರಾಜ ಸ್ವಾಮಿ ಬ್ರಹ್ಮರಥೋತ್ಸವ ಅದ್ದೂರಿಯಾಗಿ ನಡೆಯಿತು. ತಾಲೂಕಿನ ಜಡಿಗೇನಹಳ್ಳಿ ಹೋಬಳಿಯ ವಾಗಟ ಗ್ರಾಮದಲ್ಲಿ ಶ್ರೀಯೋಗಪುರಿ ವರದಸ್ವಾಮಿ ಬ್ರಹ್ಮರಥೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಸಂಸದ ಬಿ.ಎನ್. ಬಚ್ಚೇಗೌಡ ಮಾತನಾಡಿ, ಶ್ರೀವೈಷ್ಣವರು ಅನಾದಿ ಕಾಲದಿಂದಲೂ ಈ ಆಚರಣೆ ಮಾಡಿಕೊಂಡು ಬಂದಿದ್ದಾರೆ. ದೇವರಿಗೆ ಅಭಿಷೇಕ, ಅಂಕುರಾರ್ಪಣೆ, ಶೇಷವಾಹನೋತ್ಸವ, ಹಂಸ ವಾಹನೋತ್ಸವ, ಹನುಮ ವಾಹನೋತ್ಸವ, ಕಲ್ಯಾಣೋತ್ಸವ, ಗರುಡೋತ್ಸವ, ಗಜೇಂದ್ರ ಮೋಕ್ಷ ಕಾರ್ಯಕ್ರಮವನ್ನು ಕಳೆದ ಐದು ದಿನದಿಂದ ಅದ್ದೂರಿಯಾಗಿ ಆಚರಿಸಿಕೊಂಡು ಬಂದಿದ್ದಾರೆ. ಇಂದು ಬ್ರಹ್ಮರಥೋತ್ಸವದೊಂದಿಗೆ ಸಂಪನ್ನಗೊಳಿಸಲಾಯಿತು . ದೇವತಾ ಕಾರ್ಯದಿಂದ ಮಾನಸಿಕ, ದೈಹಿಕ ನೆಮ್ಮದಿಯ ಜೊತೆಗೆ ನಮ್ಮ ಆಚಾರ ವಿಚಾರ, ಧರ್ಮಾಚರಣೆ, ಸಂಪ್ರದಾಯ ಪಾಲನೆ ನಮ್ಮ ಜೀವನದ ಒಂದು ಭಾಗವಾಗಿದೆ ಎಂದರು.

ಜಾತ್ರಾ ಮಹೋತ್ಸವದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ರಥೋತ್ಸವ ತೆರಳುವ ಬೀದಿಯಲ್ಲಿ ಗ್ರಾಮದ ಭಕ್ತಾದಿಗಳು ಪೂಜೆ ನೆರವೇರಿಸಿದರು. ರಥೋತ್ಸವದಲ್ಲಿ ಸಹಕಾರ ರತ್ನ ಪುರಸ್ಕೃತ ಗೋಪಾಲ ಗೌಡ, ಜಿಪಂ ಮಾಜಿ ಅಧ್ಯಕ್ಷ ಸಿ. ಮುನಿಯಪ್ಪ, ಮುಖಂಡರಾದ ಡಾ. ಸದಾನಂದ್, ನರೇಂದ್ರಪ್ಪ, ದಾಸ್, ಬೈರೇಗೌಡ ಗ್ರಾಮಸ್ಥರಿದ್ದರು.

ಅರಣ್ಯ ಇಲಾಖೆಯಿಂದ ನಿರ್ಮಾಣಕ್ಕೆ ಕ್ರಮ | ಪದೇಪದೆ ಹಾವಳಿಯಿಂದ ನಷ್ಟಕ್ಕೆ ತಡೆ

ಆನೆದಾಳಿ ತಡೆಗೆ ಕಾಡಂಚಲ್ಲಿ ಕಂದಕ

▸ ಎಸ್. ರುದ್ರೇಶ್ವರ

ದಿಗಂತ ವಿಶೇಷ

• **ರಾಮನಗರ:** ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಆನೆ-ಮಾನವಸಂಘರ್ಷಕ್ಕೆಕೊನೆಯೇಇಲ್ಲವೇನೋ ಎಂಬ ಆತಂಕದ ನಡುವೆ ಅರಣ್ಯ ಇಲಾಖೆ ವಿನೂತನ ಕ್ರಮಕ್ಕೆ ಮುಂದಾಗಿದೆ. ಕಾಡಾನೆಗಳು ತೆಂಗಿನಕಲ್ಲು ಅರಣ್ಯ ಪ್ರದೇಶದಿಂದ ಚಿಕ್ಕಮಣ್ಣುಗುಡ್ಡೆ ಅರಣ್ಯಪ್ರದೇಶಕ್ಕೆ ಬರದಂತೆ ತಡೆಯಲು ಕಾಡಂಚಿನಲ್ಲಿ ಮೊದಲ ಬಾರಿಗೆ 3 ಮೀ ಆಳ, 3.5 ಅಗಲದ ಕಂದಕ (ಇಪಿಟಿ ಕಂದಕ) ನಿರ್ಮಿಸಲಾಗುತ್ತಿದೆ.

ಕಾವೇರಿ ವನ್ಯಜೀವಿಧಾಮ, ಬನ್ನೇರುಘಟ್ಟ ಅರಣ್ಯ, ತಮಿಳುನಾಡು ಅರಣ್ಯ ಪ್ರದೇಶದಿಂದ ಜಿಲ್ಲೆ ಸುತ್ತುವರಿದಿದೆ. ಈ ಅರಣ್ಯ ಪ್ರದೇಶದಿಂದ ಬರುವ ಆನೆಗಳು ತೆಂಗಿನಕಲ್ಲು ಅರಣ್ಯದಲ್ಲಿ ಹಿಂಡುಹಿಂಡಾಗಿ ಸೇರುತ್ತವೆ. ಇಲ್ಲಿಂದ ಚಿಕ್ಕಮಣ್ಣುಗುಡ್ಡೆಗೆ ಬಂದು ರೈತರ ಜಮೀನುಗಳಿಗೂ ನುಗ್ಗಿ ಫಸಲು, ನೀರಾವರಿ ಪರಿಕರ ನಾಶ ಮಾಡುವುದು ಸಾಮಾನ್ಯವಾಗಿದೆ.

ಕೆಲವೊಮ್ಮೆ ರಾಮನಗರ ಮತ್ತು ಚನ್ನಪಟ್ಟಣ ನಗರ ಪ್ರದೇಶಗಳತ್ತ ಮುಖ ಮಾಡಿ, ನಡು ರಸ್ತೆಗಳಲ್ಲೇ ಓಡಾಡಿ ಆತಂಕ ಸೃಷ್ಟಿಸಿದ ನಿದರ್ಶನವೂ ಇವೆ. ಬಂದ ದಾರಿಯಲ್ಲೇ ಅವುಗಳನ್ನು ಸ್ವಸ್ಥಾನಕ್ಕೆ ಅಟ್ಟಿದರೂ ಅವು ಮತ್ತೇಮತ್ತೆ ರೈತರ ಜಮೀನುಗಳಿಗೆ ನುಗ್ಗಿ ದಾಂಧಲೆ ನಡೆಸುತ್ತವೆ. ಇದು ಅರಣ್ಯ ಇಲಾಖೆಯನ್ನು ಹೈರಾಣಾಗಿಸಿದೆ. ಇದಕ್ಕೆ ತಾತ್ಕಾಲಿಕ ಪರಿಹಾರ ಎಂಬಂತೆ ಕಂದಕ ನಿರ್ಮಾಣಕ್ಕೆ ಅರಣ್ಯ ಇಲಾಖೆ ಮುಂದಾಗಿದೆ.

ಆನೆಗಳು ರಾತ್ರಿ ವೇಳೆಯೇ ತೆಂಗಿನಕಲ್ಲು ಅರಣ್ಯ ಸೇರುತ್ತವೆ. ಈ ವೇಳೆ ಮಾರ್ಗದ ಪಕ್ಕದ ತೋಟಗಳಿಗೆ ಲಗ್ಗೆ ಇಟ್ಟು ಫಸಲು ನಾಶ ಮಾಡುತ್ತವೆ. ರೈತರು ಕಾಣಿಸಿಕೊಂಡರೆ ಅವರ ಮೇಲೆ ದಾಳಿ ಮಾಡಿದ ನಿದರ್ಶನಗಳಿವೆ. ಕಳೆದ ಎರಡು ವರ್ಷಗಳ ಅವಧಿಯಲ್ಲಿ ಒಟ್ಟು ಐದು ಆನೆಗಳನ್ನು ಸೆರೆಹಿಡಿದು, ಶಿಬಿರಕ್ಕೆ ಬಿಡಲಾಗಿದೆ.

ಸುಮಾರು 3,600 ಹೆಕ್ಟೇರ್ ಪ್ರದೇಶವಿರುವ ಚಿಕ್ಕಮಣ್ಣುಗುಡ್ಡೆ ಅರಣ್ಯಕ್ಕೆ ಆನೆಗಳು ಬರುವುದನ್ನು ಆರಂಭದಲ್ಲೇ ತಡೆಗಟ್ಟಲು ಮುಂದಾಗಿರುವ ಅರಣ್ಯ ಇಲಾಖೆ ಮೊದಲ ಹೊಸ ಪ್ರಯತ್ನವಾಗಿ ತೆಂಗಿನಕಲ್ಲು ಅರಣ್ಯದ ಬಿವಿ ಹಳ್ಳಿ ಗಡಿಯ ಲಕ್ಕೋಜನಹಳ್ಳಿ- ಮಲ್ಲುಂಗೆರೆ ಗಡಿ ಮಧ್ಯಭಾಗದಿಂದ ಸುಮಾರು 3.5 ಕಿಮೀ ಉದ್ದ ಕಂದಕ ನಿರ್ಮಿಸಲಾಗುತ್ತಿದೆ. ಪ್ರಾರಂಭಿಕವಾಗಿ ಮೂರೂವರೆ ಕಿ.ಮೀ. ಕೆಲಸ ಪ್ರಾರಂಭಿಸಿದ್ದು, ಇನ್ನೂ ಐದು ಕಿಮೀ ಕಂದಕ ನಿರ್ಮಾಣ ಮಾಡಲು ಇಲಾಖೆ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿದೆ.

ತೆಂಗಿನಕಲ್ಲು ಅರಣ್ಯಕ್ಕೆ ಬಂದ ಆನೆಗಳು ಸುಲಭವಾಗಿ ಚಿಕ್ಕಮಣ್ಣುಗುಡ್ಡೆಗೆಸೇರುತ್ತವೆ. ಅಲ್ಲಿಂದ ಬ್ರಹ್ಮಣೀಪುರ, ತಗಚಗೆರೆ, ವಿಭೂತಿಕೆರೆ, ದೇವರದೊಡ್ಡಿ, ಕುಂಭಾಪುರ, ಚನ್ನಮಾನಹಳ್ಳಿ, ಅಂಚನಾಪುರ, ಬನ್ನಿಕುಪ್ಪೆ ಗ್ರಾಮಗಳಿಗೆ ದಾಂಗುಡಿ ಇಟ್ಟು, ರೈತರ ಫಸಲು ನಾಶ ಮಾಡಿ ರಸ್ತೆಯಲ್ಲೇ ಓಡಾಡುವುದು ಭಯ ಹುಟ್ಟಿಸಿದೆ. ಹಾಗಾಗಿ ಈ ಪ್ರದೇಶಗಳಿಗೆ ಆನೆಗಳು ಬರದಂತೆ ಕಂದಕ ಸೃಷ್ಟಿಸಿದರೆ ಅದನ್ನು ದಾಟಲಾಗದೆ ಅವು ತೆಂಗಿನಕಲ್ಲು ಅರಣ್ಯದಲ್ಲೇ ಉಳಿಯಲಿವೆ. ಇದರಿಂದ ಆನೆಗಳ ಉಪಟಳ ತಡೆಯಬಹುದು. ನಗರಪ್ರದೇಶಕ್ಕೆ ಮುಂದಿನ ದಿನಗಳಲ್ಲಿ ಆನೆಗಳು ಲಗ್ಗೆ ಇಡುವುದನ್ನು ತಪ್ಪಿಸಬಹುದೆಂಬ ಲೆಕ್ಕಾಚಾರ ಅರಣ್ಯ ಇಲಾಖೆಯದಾಗಿದೆ.

ತೆಂಗಿನಕಲ್ಲು ಅರಣ್ಯ 10 ಸಾವಿರ ಹೆಕ್ಟೇರ್‌ಗೂ ಹೆಚ್ಚಿದ್ದು, ಸುಮಾರು 40 ಕಿಮೀ ಸುತ್ತಳತೆಯಲ್ಲಿದೆ. ಅರಣ್ಯದ ಮಧ್ಯೆ ಬೇಲಿಕೊತ್ತನೂರು, ತೆಂಗಿನಕಲ್ಲು ಗ್ರಾಮಗಳಿದ್ದು ಇವು 10 ಕಿಮೀ ಸುತ್ತಳತೆ ಹೊಂದಿವೆ. ಸುತ್ತಲೂ ಆನೆ ಕಂದಕ ನಿರ್ಮಿಸಿದರೆ ತೆಂಗಿನಕಲ್ಲು ಅರಣ್ಯಕ್ಕೆ ಆನೆಗಳು ಬರದಂತೆ ತಡೆಗಟ್ಟಬಹುದು. ಆದರೆ ಸರ್ಕಾರ ಹೆಚ್ಚಿನ ರೀತಿಯಲ್ಲಿ ಅನುದಾನ ಒದಗಿಸಿ ಅನುಮತಿ ನೀಡಿದರಷ್ಟೇ ಕಂದಕ ನಿರ್ಮಾಣ ಸಾಧ್ಯ.



ತೆಂಗಿನಕಲ್ಲು ಅರಣ್ಯದಿಂದ ಚಿಕ್ಕಮಣ್ಣುಗುಡ್ಡೆ ಅರಣ್ಯಪ್ರದೇಶಕ್ಕೆ ಕಾಡಾನೆಗಳು ಬರದಂತೆ ತಡೆಯಲು ಕಾಡಂಚಿನಲ್ಲಿ 3 ಮೀ ಆಳ, 3.5 ಅಗಲದ ಕಂದಕ ನಿರ್ಮಿಸಲಾಗುತ್ತಿದೆ.

ಕಾಡಾನೆ ದಾಳಿ: ಬಾಳೆ ಬೆಳೆ ನಾಶ



• **ಕನಕಪುರ:** ತಾಲೂಕಿನ ಕಸಬಾ ಹೋಬಳಿ ಕೂನೂರು ದಾಖ್ಲೆ ಬೆಟ್ಟೇಗೌಡನದೊಡ್ಡಿ ಗ್ರಾಮದ ಬಳಿ ಕಾಡಾನೆ ದಾಳಿ ನಡೆಸಿ ಕೃಷಿ ಬೆಳೆ ನಾಶಪಡಿಸಿರುವ ಘಟನೆ ನಡೆದಿದೆ.

ಭಾನುವಾರ ಮಧ್ಯರಾತ್ರಿಗ್ರಾಮದ ಪುಟ್ಟಸೋಮಾರಾಧ್ಯ ಎಂಬುವವರ ತೋಟಕ್ಕೆ ನುಗ್ಗಿದ ಕಾಡಾನೆ ಹಲವು ಬೆಳೆಗಳನ್ನು ತುಳಿದು ಹಾನಿಗೊಳಿಸಿದೆ. ತೆಂಗು, ಬಾಳೆ, ಮಾವಿನ ಬೆಳೆಗಳನ್ನು ಹಾನಿಗೊಳಿಸಿದೆ, ಈ ದಾಳಿಯಿಂದ ರೈತನಿಗೆ ಅಪಾರ ಪ್ರಮಾಣದ ನಷ್ಟ ಉಂಟಾಗಿದೆ ಎಂದು ನೋವು ತೋಡಿಕೊಂಡರು. ವರ್ಷ ಪೂರ್ತಿ ಬೆಳೆದ ಬೆಳೆಗಳನ್ನು ಕಾಡಾನೆ ದಾಳಿ ನಾಶ ಮಾಡಿರುವುದಲ್ಲದೇ ಗ್ರಾಮದ ಜನರಲ್ಲಿ ಭಯದ ವಾತಾವರಣ ಇದೆ, ಕೂಡಲೇ ಕಾಡಾನೆ ಸೆರೆಹಿಡಿದು ರೈತರಿಗೆ ಸೂಕ್ತ ಪರಿಹಾರ ಕೊಡುವ ಪ್ರಯತ್ನ ಆಗಬೇಕಿದೆ ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ತೆಂಗಿನಕಲ್ಲು ಅರಣ್ಯದಲ್ಲಿ 9 ಆನೆಗಳು

ತೆಂಗಿನಕಲ್ಲು ಅರಣ್ಯಕ್ಕೆ 25ರಿಂದ 30 ಆನೆಗಳು ಬರುತ್ತವೆ. ಅವು ವಿಂಗಡಣೆಯಾಗಿ ಹಂದಿಗೊಂದಿಯಲ್ಲಿ ಐದಾರು, ಚಿಕ್ಕಮಣ್ಣುಗುಡ್ಡೆಯಲ್ಲಿ ಎರಡು ಈ ರೀತಿಯಲ್ಲಿ ಅರಣ್ಯದಿಂದ ಅರಣ್ಯಕ್ಕೆ ಓಡಾಡುತ್ತವೆ. ಜತೆಗೆ ಕನಕಪುರ, ಕಬ್ಬಾಳು ಮತ್ತಿತರ ಅರಣ್ಯ ಪ್ರದೇಶದಲ್ಲೂ ಆನೆಗಳು ಇರುತ್ತವೆ. ಸದ್ಯ ತೆಂಗಿನಕಲ್ಲು ಅರಣ್ಯದಲ್ಲಿ 11, ಚಿಕ್ಕಮಣ್ಣುಗುಡ್ಡೆಯಲ್ಲಿ 5, ಹಂದಿಗೊಂದಿಯಲ್ಲಿ 3 ಆನೆಗಳಿವೆ. ಕಳೆದ ವಾರ 9 ಆನೆಗಳನ್ನು ತೆಂಗಿನಕಲ್ಲು ಅರಣ್ಯದಿಂದ ಸ್ವಸ್ಥಾನಕ್ಕೆ ಅಟ್ಟಲಾಗಿದೆ ಎಂದು ಅರಣ್ಯ ಇಲಾಖೆ ತಿಳಿಸಿದೆ.

3 ಮೀಟರ್ ಆಳ, 3.5 ಮೀಟರ್ ಅಗಲದ ಕಂದಕ

ಆನೆಗಳು ದಾಟಲಾಗದಂತೆ ಕಂದಕವು 3 ಮೀಟರ್ ಆಳ, 3.5 ಮೀಟರ್ ಅಗಲವಿದೆ. ಅವು ಕಂದಕದಲ್ಲಿ ಇಳಿದರೆ ಮೇಲೇರಲು ಆಗುವುದಿಲ್ಲ. ಇದರಿಂದಾಗಿ ಕಾವೇರಿ, ಬನ್ನೇರುಘಟ್ಟ ಅರಣ್ಯದಿಂದ ಬರುವ ಆನೆಗಳು ತೆಂಗಿನಕಲ್ಲು ಅರಣ್ಯದಲ್ಲೇ ಉಳಿಯುತ್ತವೆ. ಅವು ಚಿಕ್ಕಮಣ್ಣುಗುಡ್ಡೆ ಭಾಗಕ್ಕೆ ಬರದಂತೆ ತಡೆಗಟ್ಟುವುದರಿಂದ ಸುಲಭವಾಗಿ ಕಾರ್ಯಾಚರಣೆ ನಡೆಸಬಹುದು. ಮಾನವ ಹಾನಿ, ರೈತರ ಫಸಲು ನಷ್ಟಕ್ಕೆ ಬ್ರೇಕ್ ಬೀಳಲಿದೆ. ಹಾಗಾಗಿ ಆನೆಕಂದಕ ಉಪಯುಕ್ತ ಕ್ರಮ ಎಂದು ಅರಣ್ಯ ಇಲಾಖೆಯ ಡಿಎಫ್‌ಒ ಎಂ. ರಾಮಕೃಷ್ಣಪ್ಪ ತಿಳಿಸಿದರು.

ಸರಕಾರದಿಂದ ಕಂದಕ ನಿರ್ಮಾಣಕ್ಕೆ ಅನುಮತಿ

ಮೂರೂವರೆ ಕಿಮೀ ಉದ್ದ ಆನೆ ಕಂದಕ ನಿರ್ಮಾಣಕ್ಕೆ ಸರ್ಕಾರ ಅನುಮತಿ ನೀಡಿತ್ತು. ಅದರಲ್ಲಿ ಇನ್ನೂ ಒಂದು ಕಿಮೀಗೆ ಆಗುವಷ್ಟು ಹಣ ಉಳಿದಿದೆ. ಆ ಒಂದು ಕಿಮೀ ಕಾಮಗಾರಿ ನಡೆಸಲು ಅನುಮತಿ ಕೇಳಲಾಗಿದ್ದು, ಶೀಘ್ರವೇ ಕೆಲಸ ಪ್ರಾರಂಭವಾಗಲಿದೆ. ಸದ್ಯಕ್ಕೆ ಒಟ್ಟಾರೆ ನಾಲ್ಕೂವರೆ ಕಿಮೀ ಕಂದಕ ನಿರ್ಮಾಣವಾಗಲಿದೆ. ಈ ಭಾಗದಲ್ಲಿ ಆನೆ ಕಂದಕ ನಿರ್ಮಾಣ ಮಾಡುತ್ತಿರುವುದರಿಂದ ಚಿಕ್ಕಮಣ್ಣುಗುಡ್ಡೆಗೆ ತೆಂಗಿನಕಲ್ಲು ಅರಣ್ಯದಿಂದ ಆನೆಗಳು ಬರದಂತೆ ತಡೆಗಟ್ಟಬಹುದಾಗಿದೆ ಎಂದು ಚನ್ನಪಟ್ಟಣ ವಲಯ ಅರಣ್ಯಾಧಿಕಾರಿ ಮಲ್ಲೇಶ್ ಮಾಹಿತಿ ನೀಡಿದರು.

ನಿರಾತಂಕ ಕೃಷಿಗೆ ಅನುಕೂಲ

ತೆಂಗಿನಕಲ್ಲು ಅರಣ್ಯದ ಗಡಿ ಭಾಗದ ರೇವಣ ಸಿದ್ದೇಶ್ವರ ಬೆಟ್ಟ, ಕೆಲಮಲೆ, ಕೆರೆಮೇಗಳದೊಡ್ಡಿ ಭಾಗದಲ್ಲಿ ಆನೆ ಕಂದಕ ನಿರ್ಮಾಣ ಮಾಡಿದರೆ ಹಂದಿಗೊಂದಿ ಅರಣ್ಯ ಪ್ರದೇಶ ಮತ್ತು ಅಚ್ಚೇರಹಳ್ಳಿ ಸುತ್ತಮುತ್ತಲ ಗ್ರಾಮಗಳಲ್ಲಿ ಆನೆಗಳ ಉಪಟಳ ತಪ್ಪಿಸಬಹುದು. ಚಿಕ್ಕಮಣ್ಣುಗುಡ್ಡೆ ಭಾಗಕ್ಕೆ ಆನೆ ಹಾವಳಿ ತಪ್ಪಿಸಲು ಕೈಗೊಂಡಿರುವ ಆನೆ ಕಂದಕ ನಿರ್ಮಾಣ ಈ ಭಾಗದಲ್ಲೂ ಆಗಬೇಕಿದೆ. ಆಗಲೇ ರೈತರು ನಿರಾತಂಕವಾಗಿ ಕೃಷಿ ಕಾರ್ಯದಲ್ಲಿ ತೊಡಗಬಹುದು ಎಂದು ಕೃಷ್ಣಾಪುರದೊಡ್ಡಿಯ ಪ್ರಗತಿಪರ ರೈತ ದಾಸು ಪುಟ್ಟಮಾಸ್ತಿಗೌಡ ತಿಳಿಸಿದರು.

ಕೊರಳೂರಿನಲ್ಲಿ ಸಾಮ್ರಾಟ ಸುಯೋಧನ ನಾಟಕ ಪ್ರದರ್ಶನ

ಯುವಕರು ರಂಗಕಲೆ ಉಳಿವಿಗೆ ಶ್ರಮಿಸಿ

• **ತಾವರೆಕೆರೆ:** ಗ್ರಾಮೀಣ ಭಾಗದ ರಂಗಭೂಮಿ ನಾಟಕ ಇತರ ಕಲೆಗಳ ಉಳಿವಿಗೆ ಯುವಕರು ಮುಂದಾಗಬೇಕೆಂದು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ನಾರಾಯಣಸ್ವಾಮಿ ತಿಳಿಸಿದರು.

ತಾಲೂಕಿನ ಕೊರಳೂರು ಗ್ರಾಮದಲ್ಲಿ ವೇಣುಗೋಪಾಲ ಸ್ವಾಮಿ ನಾಟಕ ಮಂಡಳಿಯಿಂದ ಆಯೋಜಿಸಲಾಗಿದ್ದ ಸಾಮ್ರಾಟ್ ಸುಯೋಧನ ಅಥವಾ ಗೀತೋಪದೇಶ ನಾಟಕ ಪ್ರದರ್ಶನ ಮತ್ತು ಕಲಾವಿದರಿಗೆ ಸನ್ಮಾನ ಮಾಡಿ ಮಾತನಾಡಿ,

ನಮ್ಮ ಜೀವನದ ಸಂಸ್ಕೃತಿ ಆಚಾರ-ವಿಚಾರಗಳು ಅಡಗಿರುವ ನಾಟಕ ಮತ್ತು ಇತರ ಕಲೆಗಳ ಉಳಿವಿಗೆ ಯುವಕರು ಮುಂದಾಗಬೇಕು. ಇಂತಹ ಕಲೆಗಳು ನಮ್ಮ ನಾಡಿನ ಅಸ್ಮಿತೆಯಾಗಿದೆ. ಇವುಗಳನ್ನು ಮುಂದಿನ ಪೀಳಿಗೆಗೆ ದಾಟಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆಂದರು.

ಹೊಸಕೋಟೆ ಯೋಜನಾ ಪ್ರಾಧಿಕಾರದ ಸದಸ್ಯರಾದ ಕೆ.ಸಿ. ಸುರೇಶ್‌ಗೌಡಮಾತನಾಡಿ, ಆಧುನಿಕತೆಯ ಅಬ್ಬರದಲ್ಲಿ ಜನಪದ, ಗ್ರಾಮೀಣ ಕಲೆಗಳು ಮರೆಯಾಗುತ್ತಿವೆ. ಇಂತಹ ಸಂದರ್ಭದಲ್ಲಿ ನಾಟಕದ ಮೂಲಕ ಕಲೆಯನ್ನು ಜೀವಂತವಾಗಿರಿಸುತ್ತಿರುವ ಕಲಾವಿದರ ಸೇವೆ ಶ್ಲಾಘನೀಯವಾಗಿದೆಂದು ಹೇಳಿದರು.

ಗ್ರಾಮದ ಎಲ್ಲಾ ಜಾತಿ ಜನಾಂಗಧರ್ಮ ಪಕ್ಷದವರನ್ನೂ ಕೂಡ ಒಂದೆಡೆ ಸೇರಿಸಿ ಬಾಂಧವ್ಯ ಬೆಸೆಯುವ ಶಕ್ತಿ ನಾಟಕ ಕಲೆಗಿದೆ. ಇದಕ್ಕೆ ನಮ್ಮೂರು ಜೀವಂತ ಸಾಕ್ಷಿಯಾಗಿದೆಂದರು.

ತಾಲೂಕು ಕಲಾವಿದರ ಸಂಘದ ಉಪಾಧ್ಯಕ್ಷ ನಟರಾಜ್ ಮಾತನಾಡಿ, ಹಿಂದೆ ರಾಜಮಹಾರಾಜರು ಜಾನಪದ ಕಲೆ ನಾಟಕ ಮತ್ತು ಕಲಾವಿದರಿಗೆ ಆಶ್ರಯ ನೀಡಿ ಪೋಷಿಸುತ್ತಿದ್ದರೂ ಇಂದು ಕೊರಳೂರಿನಲ್ಲಿ ಗ್ರಾಮದ ಮುಖಂಡರು ನಡೆಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. .ಹೀಗೆ ಎಲ್ಲಾ ಕಡೆಯೂ ರಂಗ ಕಲೆ ಪ್ರದರ್ಶನ ನಡೆಯಬೇಕೆಂದರು. ಹೊಸಕೋಟೆ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶಂಕರೇಗೌಡ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಮಮತಾ ಶ್ರೀನಾಥ್, ಶ್ರೀನಿವಾಸ್, ಜೀಲ್ ಮಂಜುನಾಥ್, ಶಂಕರ್, ಗ್ರಾಮದ ಮುಖಂಡರಾದ ಕುಮಾರಸ್ವಾಮಿ, ಮಂಜುನಾಥ್, ದೊಡ್ಡಕೆಂಚಪ್ಪ ಹಾಗೂ ಕಲಾಭಿಮಾನಿಗಳು ಭಾಗವಹಿಸಿದ್ದರು. ಸಾಮ್ರಾಟ ಸುಯೋಧನ ನಾಟಕದ ಪ್ರದರ್ಶನ ಪ್ರೇಕ್ಷಕರ ಮನಸೂರೆಗೊಂಡಿತು.



ಅವೈಜ್ಞಾನಿಕ ವರದಿ ವಿರೋಧಿಸಿ ನಾಳೆ ಪ್ರತಿಭಟನೆ



• **ದೊಡ್ಡಬಳ್ಳಾಪುರ:** ಒಳಮೀಸಲಾತಿ ವಿಷಯದಲ್ಲಿ ನಾಗಮೋಹನ್ ದಾಸ್ ಆಯೋಗ ನೀಡಿರುವ ಅವೈಜ್ಞಾನಿಕ ವರದಿಯನ್ನು ತಿರಸ್ಕರಿಸುವಂತೆ ಸರ್ಕಾರವನ್ನು ಒತ್ತಾಯಿಸಿ ಮಾ.25 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಬೃಹತ್ ಪ್ರತಿಭಟನೆಹಮ್ಮಿಕೊಂಡಿರುವುದಾಗಿರಾಜ್ಯ ಬಲಗೈ ಜಾತಿಗಳ ಮಹಾ ಒಕ್ಕೂಟದ ಮುಖಂಡ ಜಿ.ಲಕ್ಷ್ಮೀಪತಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸರ್ಕಾರ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರ ಅಧ್ಯಕ್ಷತೆಯಲ್ಲಿ ಒಳಮೀಸಲಾತಿ ಏಕ ಸದಸ್ಯ ವಿಚಾರಣಾ ಆಯೋಗವನ್ನು ನೇಮಕ ಮಾಡಿ ಸಮೀಕ್ಷೆ ನಡೆಸಿದ ವರದಿಯನ್ನು ಪಡೆದು ಸಚಿವ ಸಂಪುಟದಲ್ಲಿ ನಿರ್ಣಯ ಕೈಗೊಂಡು ನೇರ ನೇಮಕಾತಿಗೆ ಸಂಬಂಧಿಸಿದಂತೆ ಹೊರಡಿಸಿರುವ ಆದೇಶ ಪರಿಶಿಷ್ಟ ಜಾತಿ ಬಲಗೈ ಸಮುದಾಯಕ್ಕೆ ಮರಣ ಶಾಸನವಾಗಿದೆ ಎಂದು ಆತಂಕಪಟ್ಟರು.

15+3ರ ಮೀಸಲಾತಿಯಲ್ಲಿ ಒಳಮೀಸಲಾತಿ ಅಳವಡಿಸಬಾರದು. ತಪ್ಪಿದ್ದಲ್ಲಿ ಮುಂದೆ ಆಗುವ ಎಲ್ಲಾ ಅನಾಹುತಗಳಿಗೆ ರಾಜ್ಯ ಸರ್ಕಾರವೇ ಜವಾಬ್ದಾರಿಯಾಗಬೇಕಾಗುತ್ತದೆ. ರಾಜ್ಯ ಬಲಗೈ ಜಾತಿಗಳ ಒಕ್ಕೂಟ ಸರ್ಕಾರಕ್ಕೆ ಈ ಮೂಲಕ ಸ್ಪಷ್ಟವಾಗಿ ಎಚ್ಚರಿಸುತ್ತದೆ ಎಂದು ತಿಳಿಸಿದರು.

ತಾಲ್ಲೂಕು ಛಲವಾದಿ ಮಹಾಸಭಾ ನಿಕಟಪೂರ್ವಅಧ್ಯಕ್ಷ ಗುರುರಾಜಪ್ಪ ಮಾತನಾಡಿ, ಈ ಪ್ರತಿಭಟನೆ ನಮ್ಮ ಹಕ್ಕು ಪಡೆಯಲು ನಡೆಯುತ್ತಿದೆ. ಈ ಪ್ರತಿಭಟನೆ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಶ್ರೀ ಜ್ಞಾನ ಪ್ರಕಾಶ್ ಸ್ವಾಮೀಜಿ ಮಾರ್ಗದರ್ಶನದಲ್ಲಿ ನಡೆಯಲಿದೆಂದರು.

ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದ ಸಂಚಾಲಕರಾದ ನಿವೃತ್ತ ಐಎಎಸ್ ಅಧಿಕಾರಿ ಸಿದ್ದಯ್ಯ, ಸಂಪತ್ ರಾಜ್, ಪುರುಷೋತ್ತಮ್, ನಾಗೇಶ್ ರಾವ್ ಸೇರಿದಂತೆ ಹಲವು ಸಮುದಾಯದ ಪ್ರಮುಖರು ಭಾಗವಹಿಸಲಿದ್ದಾರೆ.

ಸಮು ದಾಯದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ನಮ್ಮ ಹಕ್ಕು ಪಡೆಯಲು ಸಹಕರಿಸಬೇಕೆಂದು ಮನವಿ ಮಾಡಿದರು. ಮುಖಂಡರಾದ ದೇವನಹಳ್ಳಿ ಶ್ರೀನಿವಾಸ್, ಗುರುರಾಜಪ್ಪ , ಲೋಕೇಶ್, ನಿವೃತ್ತ ಪ್ರಾಧ್ಯಾಪಕ ಪ್ರೊ. ಚಂದ್ರಪ್ಪ, ರಾಮಣ್ಣ, ಗಂಗಾಧರ್, ಕಮಲಮ್ಮ ಸೇರಿದಂತೆ ಅನೇಕರಿದ್ದರು.

ವರದರಾಜಸ್ವಾಮಿಗೆ ವಿಶೇಷ ಅಲಂಕಾರ



• **ಹೊಸಕೋಟೆ:** ತಾಲೂಕಿನ ವಾಗಟ ಗ್ರಾಮದಲ್ಲಿನ ಬ್ರಹ್ಮ ರಥೋತ್ಸವ ಅಂಗವಾಗಿ ಶ್ರೀ ಯೋಗಪುರಿ ಭೂನೀಳಾದೇವಿ ಸಮೇತ ವರದರಾಜಸ್ವಾಮಿಗೆ ವಿಶೇಷ ಹೂವಿನ ಅಲಂಕಾರ ಎಲ್ಲರ ಗಮನ ಸೆಳೆಯಿತು.

ರಸ್ತೆ ಡಿವೈಡರ್‌ಗೆ ಬಸ್ ಡಿಕ್ಕಿ: ನಾಲ್ವರ ಸಾವು

• **ಚನ್ನಪಟ್ಟಣ:** ಸೋಮವಾರ ಮುಂಜಾನೆ ಬೆಂಗಳೂರು- ಮೈಸೂರು ಹೆದ್ದಾರಿಯ ಚನ್ನಪಟ್ಟಣ ತಾಲ್ಲೂಕಿನ ಪುಟ್ಟಪ್ಪನದೊಡ್ಡಿ ಬಳಿ ಭೀಕರ ಬಸ್ ಅಪಘಾತ ಸಂಭವಿಸಿದ್ದ ಪರಿಣಾಮ, ನಾಲ್ವರು ಸ್ಥಳದಲ್ಲೇ ಮೃತ ಪಟ್ಟಿದ್ದು, ಹಲವರು ಗಾಯ ಗೊಂಡಿ ದ್ದಾರೆ. ಮೃತರನ್ನು ಮಹಮ್ಮದ್ ಪರಾನ್ (22), ರಫೀಕ್ (45) ಇಬ್ಬರೂ ಕೇರಳ ಮೂಲದವರು, ಬೆಂಗಳೂರು ಮೂಲದ ರಶೀದ್(45), ಸಹೀರ್ (27) ಎಂದು ಗುರುತಿಸಲಾಗಿದೆ.

ಅಬ್ದುಲ್ ಹಾಗೂ ಅಲೀಸ್ ಎಂಬುವವರು ತೀವ್ರವಾಗಿ ಗಾಯಗೊಂಡಿದ್ದಾರೆ. ರಾತ್ರಿ ಕೇರಳದಿಂದ ಹೊರಟಿದ್ದು ಬಸ್ ಸೋಮವಾರ ಬೆಳಗ್ಗೆ ಬೆಂಗಳೂರು ತಲುಪಬೇಕಿತ್ತು.

ಚಾಲಕ ನಿದ್ದೆ ಮಂಪರಿನಲ್ಲಿ ಬಸ್, ಡಿವೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಮೃತರಾಗಿದ್ದಾರೆ. ಮೃತದೇಹ ಗಳನ್ನು ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಲಾಗಿದೆ. ಅಪಘಾತಕ್ಕೊಳಗಾದ ಬಸ್ ಕೇರಳ ಮೂಲದ ಪಿಎಂ ಟ್ರಾವೆಲ್ಸ್ ಗೆ ಸೇರಿದ್ದಾಗಿದೆ. ಚಾಲಕನ ಅಜಾಗರೂಕತೆಯೇ ಅಪಘಾತಕ್ಕೆ ಕಾರಣ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಪೊಲೀಸರು, ವಾಹನ ತೆರವುಗೊಳಿಸಿದ್ದಾರೆ.

ಚನ್ನಪಟ್ಟಣ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಪಘಾತ ನಡೆದಿದ್ದು, ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್‌ಗೌಡ ಭೇಟಿ ನೀಡಿ ಪರಿಶೀಲಿಸಿದರು.



ಹೋಮ-ಹವನ, ಕ್ಷೀರಾಭಿಷೇಕ | ಅಪಾರ ಸಂಖ್ಯೆಯಲ್ಲಿ ಭಕ್ತರು ಭಾಗಿ

ನಿಡವಂದದಲ್ಲಿ ಬಸವೇಶ್ವರ ಬ್ರಹ್ಮರಥೋತ್ಸವ

• **ದಾಬಸ್‌ಪೇಟೆ:** ಐತಿಹಾಸಿಕ ಹಿನ್ನೆಲೆ ಇರುವ ನಿಡವಂದ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವ ವಿವಿಧ ಧಾರ್ಮಿಕ ಪೂಜಾ ವಿಧಿವಿಧಾನದೊಂದಿಗೆ ಹೋಮ ಪೂಜೆ ರುದ್ರಾಭಿಷೇಕ, ಕ್ಷೀರಾಭಿಷೇಕ, ಬಿಲ್ವಾರ್ಚನೆ ಮತ್ತು ವಿಶೇಷ ಪೂಜೆ ನಡೆಯಿತು.

ನೆಲದೇವರಿಗೆ ವಿಶೇಷ ಪೂಜೆ ಅಲಂಕಾರ, ರಥಾಂಗ ಹೋಮ, ರಥ ಪ್ರತಿಷ್ಠೆ, ಲಿಂಗದ ವೀರರಸರ್ಜನ,ನಂದಿಧ್ವಜಕುಣಿತ,ಸೂರ್ಯ ಮಂಡಲ ಪೂಜೆಯನ್ನು ನಡೆಸಲಾಯಿತು,

ಹೋಮ ಹವನ ನಡೆದ ನಂತರ ಅಗ್ನಿ ಕುಂಡಕ್ಕೆ ಪೂರ್ಣಾಹುತಿಯನ್ನು ಅರ್ಪಿಸಿದರು. ನಂತರ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಮೆರವಣಿಗೆ ದೇವರಾದ ಶ್ರೀ ಬಸವೇಶ್ವರ ಸ್ವಾಮಿಯನ್ನು ರಥೋತ್ಸವಕ್ಕೆ ಮೂರು ಭಾರಿ ಪ್ರದಕ್ಷಿಣೆ ಹಾಕುವಾಗ ಭಕ್ತರು ಬಸವೇಶ್ವರಸ್ವಾಮಿಗೆ ಜಯ ಘೋಷ ಹಾಕಿದರು.

ವೀರಭದ್ರ ವೇಷಧಾರಿಗಳು ಮತ್ತು ನಂದಿ ಧ್ವಜಧಾರಿಗಳು ದೇವರ ಮೆರವಣಿಗೆಯ ಮುಂದೆ ಕರಡಿ ವಾದ್ಯಕ್ಕೆ ತಾಳ ಹಾಕುತ್ತಾ ಮುಂದೆ ಸಾಗಿದರು. ಭಕ್ತರು ದವನ ಕಟ್ಟಿದ ಸೂರುಬಾಳೆಯನ್ನು ರಥೋತ್ಸವದ ಮೇಲೆ ಎಸೆಯುವುದರ ಮೂಲಕ ತಮ್ಮ ಇಷ್ಟಾರ್ಥವನ್ನು ನೆರವೇರಿಸಿಕೊಂಡರು.



ಬೆಳಗ್ಗೆ ಕವಣಾಪುರದ ಬಸವನ ಮೆರವಣಿಗೆ ಮಾಡಲಾಯಿತು. ಭಕ್ತರು ಬಸವನಿಗೆ ಪೂಜೆ ಸಲ್ಲಿಸಿ ಹರಕೆ ಹೊತ್ತು ಪೂಜಿಸಿದರು. ರಥೋತ್ಸವದಲ್ಲಿ ಹಲವು ಗಣ್ಯವ್ಯಕ್ತಿಗಳು, ಆಡಳಿತಗಾರರು, ದಾನಿಗಳು, ಸಾವಿರಾರು ಭಕ್ತರು ಪಾಲ್ಗೊಂಡು ಭಕ್ತಿಯ ನಮನ ಸಲ್ಲಿಸಿ ಕೃತಜ್ಞತೆ ಸಲ್ಲಿಸಿದರು.

ಪ್ರಧಾನ ಅರ್ಚಕರಾದ ತೋಂಟದಾರಾಧ್ಯ ಕುಟುಂಬದವರು ಮತ್ತು ಇತರೆ ಪುರೋಹಿತರು ರಥೋತ್ಸವದ ಪೂಜೆ, ಹೋಮವನ್ನು ನೆರವೇರಿಸಿದರು. ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾಪಂಚಾಯಿತಿ ಮಾಜಿ ಸದಸ್ಯರು ಭಾಗವಹಿಸಿದ್ದರು. ಗ್ರಾಮದ ಮುಖ್ಯಸ್ಥರಾದ ಇಂದ್ರಮ್ಮ ಆ.ಪರಮೇಶ್, ಲಾವಣ್ಯ ಜಗದೀಶ್, ಆನಂದಕುಮಾರ್, ಕರವೇ ಅಧ್ಯಕ್ಷ ಸಂತೋಷ್ ಕುಮಾರ್, ಕಾಂತರಾಜು, ಪರಮೇಶ್, ಜಗದೀಶ್, ಭೋಜರಾಜ್, ಕುಮಾರಸ್ವಾಮಿ, ಗಂಗರಾಜ್, ಜಯಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಅರವಂಟಿಗೆಗಳಲ್ಲಿ ಮತ್ತು ಟ್ರ್ಯಾಕ್ಟರ್ ನಿಲ್ಲಿಸಿಕೊಂಡು ಹೆಸರು ಬೇಳೆ, ಮಜ್ಜಿಗೆ ಪಾನಕವನ್ನು ವಿತರಿಸಿದರು. ಎರಡು ಕೊಪ್ಪರಿಗೆನಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಪೊಲೀಸರು ಬಿಗಿ ಭದ್ರತೆ ನೀಡಿದ್ದರು. ಮಹಿಳಾ ಪೇದೆಗಳು ಹೋಂಗಾರ್ಡ್‌ಗಳು ಭದ್ರತಾ ವ್ಯವಸ್ಥೆಯಲ್ಲಿದ್ದರು.

ಆದ್ಯವಚನಕಾರ ದೇವರ ದಾಸಿಮಯ್ಯ ಜಯಂತ್ಯುತ್ಸವ | ವಿವಿಧ ಕ್ಷೇತ್ರದ ಗಣ್ಯರಿಗೆ ಸನ್ಮಾನ

ಶರಣರ ವಚನಗಳಲ್ಲಿದೆ ವೈಜ್ಞಾನಿಕ ಚಿಂತನೆ

• **ದೊಡ್ಡಬಳ್ಳಾಪುರ:** ಮೂಢನಂಬಿಕೆತೊರೆದುವೈಜ್ಞಾನಿಕತೆಯನ್ನು ಬಿತ್ತುವುದೇ ವಚನ ಚಳವಳಿಯ ಸಿದ್ಧಾಂತವಾಗಿದೆ. ಆದ್ಯವಚನಕಾರ ದೇವರ ದಾಸಿಮಯ್ಯ ಸಮಾಜದ ಕಂದಾಚಾರಗಳ ವಿರುದ್ಧ ದನಿಯೆತ್ತಿದ ದಾರ್ಶನಿಕ ಎಂದು ತಹಶೀಲ್ದಾರ್ ಡಾ.ಮಲ್ಲಪ್ಪ ಯರಗೋಳ ಹೇಳಿದರು.

ಇಲ್ಲಿನ ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ದೇವಾಂಗಮಂಡಲಿ ನೇತೃತ್ವದಲ್ಲಿ, ಸೋಮವಾರ ತಾಲೂಕು ಕಚೇರಿ ಸಮ್ಮೇಳನ ಸಭಾಂಗಣದಲ್ಲಿ ನಡೆದ ಆದ್ಯವಚನಕಾರ ದೇವರ ದಾಸಿಮಯ್ಯ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿ, ಶ್ರೇಷ್ಠ ವ್ಯಕ್ತಿಗಳನ್ನು ಒಂದು ವರ್ಗಕ್ಕೆ ಸೀಮಿತಗೊಳಿಸಬಾರದು. ಅವರ ಸಂದೇಶ ಮನುಕುಲದ ಒಳಿತಿನ ಆಶಯ ಹೊಂದಿದೆ. ಪ್ರತಿಯೊಬ್ಬರೂ ಪಾಲಿಸುವ ಮೂಲಕ ಸಮಾಜದಲ್ಲಿ ಸಾಮರಸ್ಯ ಮೂಡಿಸುವ ಕೆಲಸ ಆಗಬೇಕು. ವಚನ ಸಾಹಿತ್ಯದ ಮೂಲಕ ಲಿಂಗ ಸಮಾನತೆಯ ಮೌಲಿಕ ವಿಚಾರ ಪ್ರಸ್ತಾಪಿಸಿದ ಮೊದಲಿಗ ಎಂದರು.ದೇವಾಂಗ ಮಂಡಲಿ ಅಧ್ಯಕ್ಷ ಎಂ.ಜಿ.ಶ್ರೀನಿವಾಸ್ ಮಾತನಾಡಿ,ದಾಸಿಮಯ್ಯನವರ ಕುರಿತು ಚಾರಿತ್ರಿಕವಾಗಿ ಅನೇಕ ನಂಬಿಕೆಗಳಿವೆ. ನೇಕಾರ ಸಮುದಾಯ ಪ್ರಾತಿನಿಧಿಕ ವ್ಯಕ್ತಿಯಾಗಿರುವ ದಾಸಿ ಮಯ್ಯ ಎಲ್ಲ ಸಮುದಾಯಗಳೂ ಆರಾಧಿಸಬೇಕಾದ ಅನನ್ಯ ಶರಣ ಎಂದರು. ಕಸಾಪ ಮಾಜಿ ಅಧ್ಯಕ್ಷ ಡಿ.ಶ್ರೀಕಾಂತ ಮಾತನಾಡಿ, ಕನ್ನಡ ಸಾಹಿತ್ಯ ಲೋಕದಲ್ಲಿ ತೀವ್ರ ಸಂಚಲನ ಸೃಷ್ಟಿಸಿದ ಮತ್ತು ಸಾಮಾಜಿಕ ಬದಲಾವಣೆಗೆ ಕಾರಣವಾದ ವಚನ ಚಳವಳಿಯ ಆದ್ಯ ಪ್ರವರ್ತಕರಾದ ದಾಸಿಮಯ್ಯ, ತನ್ನ ಕಾಯಕ ನಿಷ್ಠೆಯ ಮೂಲಕ ಸಮಾಜದ ಚಿಕಿತ್ಸಕ ಶಕ್ತಿ ಯಾಗಿ ಬೆಳೆದವರೆಂದು ಹೇಳಿದರು. ಬಸವಾದಿ ಶರಣರಿಗೆ ಹಿರಿಯನಾಗಿ ದಾಸಿಮಯ್ಯ ಬಹುಮೂಲ್ಯ ದಿಕ್ಸೂಚಿಯನ್ನು ಕೊಟ್ಟಿದ್ದಾರೆ. ಕಳೆದ ಕೆಲ ವರ್ಷದ ಹಿಂದೆ ಹಂಪಿ ವಿಶ್ವವಿದ್ಯಾಲಯದಲ್ಲಿ ಆರಂಭವಾದ ದಾಸಿಮಯ್ಯ ಅಧ್ಯಯನ ಪೀಠಕ್ಕೆ ಪುನಶ್ಚೇತನ ಅಗತ್ಯ ವಾಗಿದೆ. ದಾಸಿಮಯ್ಯ ಕುರಿತು ಹೆಚ್ಚಿನ ಸಂಶೋಧನೆ ಅಗತ್ಯ ಎಂದರು. ವಿವಿಧ ಕ್ಷೇತ್ರಗಳಲ್ಲಿ ಗುರ್ತಿಸಿಕೊಂಡಿರುವ ದೇವಾಂಗ ಸಮುದಾಯದ ಆರೂಢಿ ರಾಮಕೃಷ್ಣಪ್ಪ, ಕೆ.ಪಿ. ಜಗನ್ನಾಥ್, ಕೆ.ಪಿ.ನಾಗರಾಜ್, ಪಿ.ಸಿ.ಲಕ್ಷ್ಮೀನಾರಾಯಣ್, ಕೆ.ಎಸ್.ಸುರೇಂದ್ರ, ಕೆ.ಪಿ.ವಾಸುದೇವ್, ಪ್ರೊ.ಕೆ.ಆರ್. ರವಿಕಿರಣ್, ಡಿ.ಶ್ರೀಕಾಂತ, ಕೆ.ಎಸ್.ಪ್ರಭಾ, ಎ.ಜಯಮ್ಮ ಮತ್ತು ಎಂ.ಕೆ.ವತ್ಸಲಾ ಸೇರಿದಂತೆ 11 ಜನರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಗರಸಭೆ ಪೌರಾಯುಕ್ತ ಕಾರ್ತಿಕೇಶ್ವರ್, ದೇವಾಂಗ ಮಂಡಲಿ ಗೌರವ ಕಾರ್ಯದರ್ಶಿ ಪ್ರೊ.ಎಂ.ಜಿ.ಅಮರನಾಥ್, ಉಪಾಧ್ಯಕ್ಷರಾದ ಬಿ.ಜಿ.ಅಮರನಾಥ್, ಎಸ್.ಎಸ್.ಚಿಕ್ಕಣ್ಣ, ಖಜಾಂಚಿ ಎಚ್.ಎ.ಅಖಿಲೇಶ್, ನಗರಸಭಾ ಸದಸ್ಯರಾದ ಎಚ್.ಎಸ್. ಶಿವಶಂಕರ್, ವತ್ಸಲಾ, ನವೀನ್ ಮತ್ತಿತರರಿದ್ದರು.



IN THE COURT OF THE CITY CIVIL JUDGE AT BENGALURU (CCH-5)

O.S. No. 4398/2023

BETWEEN : 1. Smt. Puttamma, W/o Narayanaswamy, D/o. G. Anjinappa, aged about 47 years, **2. Sri. Shiva Kumar R,** Son of Rangappa .N, Aged about 19 years, **3. Smt. A. Muthamma,** Wife of Srinivas, Daughter of G. Anjinappa, Aged about 39 years, **4. Smt. Manjula M,** Wife of Nagaraj, Daughter of G. Anjinappa, Aged about 38 years, 1 to 4 are residing at: R/at No. 1198, 12th Cross, Behind J.S.S. School Road, Ganapathipura, Konanakunte, Bengaluru 560 062. **...PLAINTIFFS**

AND : 1. Sri. G. Anjinappa, Son of late Gangadharappa, Aged about 66 years, **2. Sri. Manjunath. A,** Son of G. Anjinappa, Aged about 36 years, **3. Kum. Hemisha,** Daughter of Manjunath A, Aged about 3 years. (Since minor represented by Her mother and Natural Guardian) Smt. Pratiksha, Wife of Manjunath A. 1 & 3 are R/at No. 1198-1, 12th Cross, Behind J.S.S School Road Ganapathipura, Konanakunte, Bengaluru 560 062. **...DEFENDANTS**

DEFENDANT : 2. Sri. Manjunath. A, Son of G. Anjinappa, Aged about 36 years, **3. Kum. Hemisha,** Daughter of Manjunath A, Aged about 3 years. (Since minor represented by Her mother and Natural Guardian) Smt. Pratiksha, Wife of Manjunath A. 2 & 3 are R/at No. 1198-1, 12th Cross, Behind J.S.S School Road, Ganapathipura, Konanakunte, Bengaluru 560062.

Whereas, the above named plaintiff have instituted a suit seeking relief of Partition and separate possession with respect to the suit schedule property before City Civil Court Bangalore.

Whereas you have been shown as Defendant No.2 & 3 in the above case.

The above you are hereby summoned to appear before City Civil Court Bangalore in person or by a pleader duly instructed and able to answer all material questions relating to suit **on 29th day of April 2026 at 11:00 in the forenoon**, to answer the claim.

SCHEDULE

All that piece and parcel of the House property bearing No. 5, Khata No. 6/13, situated at Ganapathipura, Konanakunte Village, Uttarahalli Hobli, Bangalore South Taluk, Bengaluru measuring East to West 40 feet and North to South 30 feet totally measuring 1200 square feet bounded as follows:- **East by** : Property No.6, **West by** : Property No.4, **North by** : Property belonging to H. Byrappa, **South by** : Road.

Take notice that in default of your appearance on the day before mentioned, the suit will be heard and determined in your absence.

Given under my hand and the seal of the court, this 5th day of March 2026.

By Order of the Court, Senior Sheristedar, City Civil Court, Bengaluru.

IN THE COURT OF THE PRINCIPAL CIVIL JUDGE AND J.M.F.C AT GOWRIBIDANUR

Original Suit No. 337/2017

BETWEEN: Smt. Muddegangamma, W/o Manjunatha, D/o Smt. Gangamma, aged about 27 years, R/at Madanahalli, ward No.22, Gauribidanur Town, Chikkaballapur District. **...Plaintiff**

AND: 1. Sri. Thimmarajappa S/o Late Nagamma, aged about 60 years, Residing at: Arsapura 4Majara, Hosapalya, Holavanahalli Hobli, Koratagere Taluk, Tumkur District. **2. Sri. Sanjeevamma** D/o Late Nanjundappa, aged about 55 years Residing at: Chennanahalli Village, Kasaba Hobli, Gowribidanur Taluk, Chikkaballapur District. **3. Smt. Sakamma** D/o Late Nanjundappa, aged about 50 years, **4. Govindappa** S/o Late Hanumanthappa, aged about 65 years, **5. Sri. Narayanappa,** S/o Late Hanumanthappa, aged about 62 years, Dead by LRS Defendant No.5, **5(a). Smt. Kempamma** W/o Late. Narayanappa, aged about 60 years, **5(b). Sri. Raghavendra** S/o Late. Narayanappa, aged about 26 years, **5(c). Smt. Nagamani** D/o Late. Narayanappa, aged about 22 years, LRs of Defendant No.5(a) to (c), are R/at Madanahalli Village, Kasaba Hobli, Gowribidanur Town and Taluk, Chikkaballapur District. **6. Sri Ramakrishnappa** S/o Late Hanumanthappa, aged about, 60 years, **7. Sri Gangadharappa** S/o Kamalamma, aged about, 40 years, **8. Sri. Gangarathnamma** D/o Kamalamma, aged about, 35 years, **9. Sri. Hanumanthappa** S/o Late Venkataravanappa, aged about 65 years, **10. Sri. Lakshmamma** D/o Late Venkataravanappa, aged about 40 years, Defendant No. 3 to 10 are R/at. Madanahalli village, Kasaba Hobli, Gowribidanur Taluk, Chikkaballapur District. **...Defendants**

NOTICE

It is hereby notified that the plaintiff have filed a suit in O.S.NO.337/2017 in this Court seeking the relief of partition and separate possession in the plaint schedule property mentioned below.

PROPOSED DEFENDANT No.5(c)and 7

Defendant No.5(c). Smt. Nagamani D/o Late. Narayanappa, aged about 22 years, R/at Madanahalli Village, Kasaba Hobli, Gowribidanur Town and Taluk, Chikkaballapur District.

Defendant No.7: Sri. Gangadharappa S/o Kamalamma, aged about 40 years, are residing at Madanahalli village, Kasaba Hobli, Gowribidanur Taluk, Chikkaballapur District.

Have any interest in the schedule property/ies are required to appear before this Court at **11:00 AM**, on **04/04/2026** without fail in person or through their his/her counsel as the case may be along with necessary documents in their favour. If you fail to appear before the court, you have NO interest in the above matter, the court will held you ex parte in the matter and proceed with the suit further.

SCHEDULE

1. The land bearing Survey Number 142/3 measuring 0-11 guntas, situated at Madanahalli Village, Kasaba Hobli, Gowribidanur Taluk, Chikkaballapur district and its bounded as follows: **East by:** Land belongs to Sri.Puttan's land, **West by:** Markunu Kaluve, **North by:** Pitaki Najaiah's land, **South by:** Sri. Nanjundappa's land

2. The land bearing Survey Number 87/3 measuring 0-14 guntas, situated at Madanahalli Village, Kasaba Hobli, Gowribidanur Taluk, Chikkaballapur district and its bounded as follows: **East by:** Nagabhushanappa's land, **West by:** Mallaiah's land, **North by:** Sanjeevarayappa's land, **South by:** Eshwaramma's land

3. The land bearing Survey Number 43/2 measuring 0-17 guntas, situated at Madanahalli Village, Kasaba Hobli, Gowribidanur Taluk, Chikkaballapur district and its bounded as follows: **East by:** Sanjeevarayappa's land, **West by:** Rajakaluve, **North by:** Ramanjinappa's land, **South by:** Hanumakka's land

4. The land bearing Survey Number 51/2 measuring 1-03 guntas, karab measuring 0-03 guntas, situated at Madanahalli Village, Kasaba Hobli, Gowribidanur Taluk, Chikkaballapur district and its bounded as follows: **East by:** Ramnjinappa's land, **West by:** Narayanappa's land, **North by:** Seenappa's land, **South by:** Krishanappa's land

5. The land bearing Survey Number 58/2A measuring 0-28 guntas, situated at Madanahalli Village, Kasaba Hobli, Gowribidanur Taluk, Chikkaballapur district and its bounded as follows: **East by:** [illegible]

[illegible]

AFFIDAVIT

I, **BANGALORE RAMACHANDRAIAH NAGARATHNA,** W/o. Muniswamappa Thimma Naik, Aged about 68 years, R/at No. 509, 4th Main, 3rd Block, HBR Layout, 1st Stage, Kalyananagar, Bangalore - 560 043, do hereby declare that my original name in Aadhar No. 9651 7958 9706 is **B.R NAGARATHNA,** whereas in the passport bearing No. Z3475300 issued on 21/06/2006 is **RAMACHANDRAIAH NAGARATHNA,** my correct name is to be entered as **BANGALORE RAMACHANDRAIAH NAGARATHNA W/o Muniswamappa Thimma Naik** vide affidavit dated 23.03.2026 sworn before Ramachandrappa. C, Advocate & Notary Public, Govt. of India, Bengaluru.

IN THE COURT OF THE 1st ADDITIONAL SENIOR CIVIL JUDGE, AT NELAMANGALA

O.S. NO. 146/2016

PLAINTIFFS: Sri. Vijayakumar and another.

-V/s-

DEFENDANTS: Sri. Ashwathnarayana and others.

NOTICES TO DEFENDANTS No. 3 TO 5 AS FOLLOWS:

DEFENDANT No. 3: Smt. Manjula, D/o Hanumakka and Chikkanna, Wife of Sri. Parthasarathi, aged 50 years, residing at No. 212, 2nd Cross, Sampige Layout, 4th Cross, Ward No. 103, Kaveripuram, Bangalore-79.

DEFENDANT No. 4: Smt. Mallamma, D/o Late: Veeradevaiah, wife of Mallikarjunappa, aged 68 years, residing at No. 184, 13th Cross, 27th Main Road, Ward No. 103, Nandagokula School Road, Kaveripuram, Kamakshipalya, Bangalore-79.

DEFENDANT No. 5: Smt. Lakshmamma, D/o Late: Veeradevaiah W/o Kempaiah, aged 65 years, residing at No. 35, 10th Cross, 5th Main Road, Ward No. 106, Agrahara Dasarahali, Bangalore-79.

NOTICE UNDER V RULE XX (1) (A) OF THE CODE OF CIVIL PROCEDURE

Take Notice that, the plaintiffs Sri. Vijayakumar S/o Late Veerabhadraiah, aged 58 years, and another residing at Bylakonenahalli Village, Dasanapura Hobli, Bangalore North Taluk, have filed a suit for partition and permanent injunction on the file of 1st Additional Senior Civil Judge, at Nelamangala in O.S. No. 146/2016 and the same is pending. The hearing of the said case is fixed hearing on **23-04-2026** at 11.00 A.M. Hence, you are hereby directed to appear before the Court personally or through your Advocate, failing which the matter will be decided ex-parte.

SCHEDULE

1) The land Bearing Sy No.39/3, measuring to an extent of 2.27 guntas, assessed at Rs.3.25 paise, and bounded on: East by: Lankappa's Land, West by: Munikempaiah's land, West by: Munikempaiah's land, North by: K. Siddagangaiah's land, South by: Erappa's land

2) The Land bearing Sy. No. 36/1, measuring to an extent of 0-09 guntas, assessed at Rs.1-00 and bounded on East by: Dyavaiah's Land, West by: Siddagangappa's Land, North by: Kodihalla, South by: Ramalingappa's Land.

3) The Land bearing Sy. 40/3, (New Sy No 40/5, measuring to an extent of 0-10 guntas, assessed at Rs. 1-00 and bounded as follows: East by: Joint family's Property, West by: Channarayappa's Land, North by: Solur Munikempaiah's Land, South by: Channarayappa's Land

Item No. 1 to 3 are situated at Bylakonenahalli Village, Dasanapura Hobli, Bangalore North Taluk.

4) Property bearing Municipal No.1, situated at 13th B-Cross, Agrahara Dasarahalli, PID No. 21/66-1, measuring to an extent of East to West: 30 feet and North to South: 40 feet, situated at Agrahara Dasarahalli Village, Bangalore City and bounded on: East by: Private Property, West by: Road, North by: Private Property, South by: Road.

Given under my hand and the seal of this court on 17-03-2026.

By order of the Court, Sheristadar, Court of Senior Civil Judge and JMFC Nelamangala.

Sri. R. KEMPAIAH, Advocate
Behind K.S.R.T.C. Bus Stand, T.A.P.C.M.S. Building, Nelamangala Town 562 123, Bangalore Rural District.

[illegible]

IN THE COURT OF HON'BLE ADDL. SENIOR CIVIL JUDGE AT GUBBI

O.S.No.48/2025

Plaintiffs : Doddathayamma and others

-V/s-

Defendants : Rangamma and others

LR of D4(d): Jayamma W/o Chandraiah D/o Late Govindaiah Aged 47 years, R/at Ammanaghatta village, Nittur Hobli, Gubbi Taluk, Tumakuru District.

LR of D4(f): Shivamma W/o Shivalingaiah D/o Late Govindaiah, Aged 43 years, R/at Byadigere village, Madenahalli Post, Gubbi Taluk, Tumakuru District.

LR of D4(i): Mamatha W/o Bhadresh D/o Late Govindaiah Aged 37 years, R/at Honnebagi village, C.S.Pura Hobli, Gubbi Taluk, Tumakuru District.

Whereas, the above the plaintiffs have instituted the suit against the defendants for relief sought in the plaint. The Defendants No.4, LR of D4(d), D4(f) and D4(i) in the above case, you are hereby summoned to appear in this court in person or by Pleader duly entrusted and able to answer all material questions relating to the case on the 4.04.2026 day of At 3 AM the forenoon.Take notice that in the event of the case not being contented the case shall be heard and determining exparte. Give under my hand and the seal of the court on this Day of 16.03.2026 at Gubbi.

SCHEDULE

The land bearing Sy.No.43/4 measuring 3-00 acres situated at Bidarehalli Kaval, Nittur Hobli, Gubbi Taluk, bounded by: East: Land of Palaiah, West: Lands of Sharkarappa and Giriyappa, North: Land of Poojariah, South: Land of Giriyappa and Shankarappa. 2. The land bearing Old Sy.No.42 and New Sy.No.42/1 measuring 0-21 guntas, 42/3 measuring 0-30 guntas and 42/5 measuring 0-09 guntas total 1-00 acre situated at Bidarehalli Kaval, Nittur Hobli, Gubbi Taluk, having common boundaries: East: Land of Palaiah and North: Land of Dni, West: Lands of Poojari Thimmaiah, Shanmukhaiah, South: Land of Lakkappa.

By Order of the Court,
Shirestedar (ASTR) Judge S.D. & JMFC
Court GUBBI

Advocate for Plaintiffs: **D.Krishnappa,** B.Com.,LL.B., Advocate, KRD Law Associates, 7th Cross, Sriramanagara,Tumakuru Mob No.9880540433

[illegible]

By Order of the Court
Sub Sheristedar
Court of Chief Judicial Magistrate
Bangalore Rural District, Bengaluru

IN THE COURT OF THE ADDITIONAL CIVIL JUDGE (JUNIOR DIVISION) AND J.M.F.C. AT MAGADI

Crl. Mis. No. 58/2026

PETITIONER : Sri. Suresh, S/o late. Doddanarasimhaiah, aged about 46 years, R/at Kudluru Village, Solur Hobli, Magadi Taluk, Bangalore South District. -V/s-

RESPONDENTS: 1.TheTahsildar Magadi. 2. Sri. Mahesh, S/o Late. Tellamma, aged about 26 years, R/at Kudluru Village, Solur Hobli, Magadi Taluk, Bangalore South District.

SUMMONS/NOTICE TO RESPONDENTS

WHEREAS, the petitioner above named has filed the above petition against the Respondents for obtaining the death certificate of petitioner sister by name Smt. Tellamma W/o Late Ravikumar who died on 15/06/2018, before this Hon'ble Court of J.M.F.C. at Magadi.

AND WHEREAS the above case is fixed for hearing of **25/04/2026** at **11:00 A.M.** before the Additional Civil Judge (Jr.Dn) and J.M.F.C. at Magadi you are here by summoned who are interested in this regard to appear in this Court in personally or pleader to file objection the same. If you failing which ex petitioner will be disposed on enquiry.

Given under my hand and seal of the Court on this 18/03/2026

By order of the Court, Sheristedar, Civil Judge & J.M.F.C Court, Magadi

SRI. RANGASWAMY .B, Advocate
Near civil bus stand, Hospete Road, Magadi Town.

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ,

ವಿದ್ಯುತ್ ವಿಭಾಗ, ಕೆ.ಆರ್.ವೃತ್ತ, ಬೆಂಗಳೂರು.

ಸಂ:ಕಾ.ಇಂ.(ವಿ)/ಲೋ.ಇ./ವಿದ್ಯುತ್/2025-26/3032 ದಿನಾಂಕ:23.03.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು KW-3 STD ಪತ್ರಿಕೆಗಳನ್ವಯ ಕೆ.ಪಿ.ಪಿ.ಪಿ. ಮೂಲಕ ಅಲ್ಪಾವಧಿ ಎರಡನೇ ಕರೆಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಕೆಳಕಂಡಂತಿದೆ.

Sl. No.	WORK INDENTS	Work Value (Rs.in Lakhs)
1	PWD/2025-26/EL/WORK_INDENT29344 Call-2 (Others)	59.31
2	PWD/2025-26/EL/WORK_INDENT29169 Call-2 (Others)	63.28

ಮೇಲಿನ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್: **https:// kppp.karnataka.gov.in** ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು **ದಿನಾಂಕ:23.03.2026** ರಿಂದ **30.03.2026, 16.00 ಗಂಟೆಯವರೆಗೆ** ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ **ದಿನಾಂಕ: 30.03.2026 ರಂದು 16.00 ಗಂಟೆಯವರೆಗೆ** ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು Karnataka Public Procurement Portal ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ)
ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು.

ವಾಸಾಸಂಇ/ಬಿಎ-ಸಿ.ಪು/6392/ಕೆಎಸ್‌ಎಂಸಿಎ/2025-26

ಜಿಲ್ಲಾಧಿಕಾರಿಗಳ ಕಾರ್ಯಾಲಯ

ಬೆಂಗಳೂರು ದಕ್ಷಿಣ ಜಿಲ್ಲೆ

ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ-562159

Phone: 080-27274106/27276074, E-Mail: ka.ramanagara.dudc@gmail.com

ಸಂ: [illegible](1)/3rd Party Inspection/[illegible]/42/2025-26 ದಿನಾಂಕ: 18.03.2026

ಟೆಂಡರ್ ಅಧಿಸೂಚನೆ

ಬೆಂಗಳೂರು ದಕ್ಷಿಣ ಜಿಲ್ಲೆಯ ನಗರಸಭೆ-ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಪುರಸಭೆ-ಬಿಡದಿ, ಮಾಗಡಿ ಮತ್ತು ಪ.ಪಂ-ಹಾರೋಹಳ್ಳಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಯೋಜನೆ/ಅನುದಾನಗಳಡಿ ಕೈಗೊಳ್ಳುವ ಅಭಿವೃದ್ಧಿ/ನಿರ್ಮಾಣ ಕಾಮಗಾರಿಗಳ ಗುಣಮಟ್ಟ ಪರಿಶೀಲನೆಗೆ 3ನೇ ವ್ಯಕ್ತಿ ತಪಾಸಣೆ ಸಮಾಲೋಚಕರ ಏಜೆನ್ಸಿ ನೇಮಿಸಲು ಟೆಂಡರನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಟೆಂಡರ್‌ನ ಮೊತ್ತ ರೂ. ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ. ಲಕ್ಷಗಳಲ್ಲಿ	ಗುತ್ತಿಗೆ ಅವಧಿ
1	ಇಂಡೆಂಟ್ ಸಂಖ್ಯೆ DMA/2025-26 SE7493	86.04	1.29	One year from the date of award

ಆಸಕ್ತಿಯುಳ್ಳ ಬಿಡ್‌ದಾರರು ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಟೆಂಡರನ್ನು ಹಾಗೂ ನಿಗದಿಪಡಿಸಿರುವ ಇ.ಎಂ.ಡಿ. ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ಮೂಲಕ ವಿದ್ಯುನ್ಮಾನವಾಗಿ ಸಲ್ಲಿಸುವುದು.

[illegible] **3:00 ಗಂಟೆಗೆ. 2)** ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 07.04.2026 ರಂದು ಸಂಜೆ 05.00 ಗಂಟೆಗೆ.** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 09.04.2026 ರಂದು ಸಂಜೆ 5:30 ಗಂಟೆಗೆ.**

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಈ ಕಚೇರಿಯ ಇ-ಮೇಲ್ ಮೂಲಕ ಪಡೆಯಬಹುದು. **ಸೂಚನೆ:-1)** ಬಿಡ್‌ದಾರರು ಆರ್ಥಿಕ ಬಿಡ್‌ನಲ್ಲಿ ನಕಾರಾತ್ಮಕ/ಅನಿಯಮಿತ ದರವನ್ನು ನಮೂದಿಸಿದ್ದಲ್ಲಿ ಬಿಡ್‌ನ್ನು ತಿರಸ್ಕರಿಸಲಾಗುವುದು.

ಸಹಿ/- ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ.

DIPR/BSD/715/SA/2025-26

[illegible]

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂಕಾನಿಅ/ಲೋಇ/ಬವಿ/ಟಿ.ಎಸ್-3/ಕೆಪಿಪಿಆರ್‌ಎ/2025-26/6712 ದಿನಾಂಕ: 12-03-2026.

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

[illegible] **https:kppp.karnataka.gov.in** [illegible]

[illegible] – **PWD/2025-26/SE1109, PWD/2025-26/SE1117, PWD/2025-26/SE1118, PWD/2025-26/SE1111, PWD/2025-26/SE1112, PWD/2025-26/SE1113, PWD/2025-26/SE1119, PWD/2025-26/SE1114, PWD/2025-26/SE1120, PWD/2025-26/SE1110, PWD/2025-26/SE1121, PWD/2025-26/SE1122, PWD/2025-26/SE1123, PWD/2025-26/SE1124, PWD/2025-26/SE1125, PWD/2025-26/SE1126, PWD/2025-26/SE1127, PWD/2025-26/SE1128, PWD/2025-26/SE0821**

[illegible]

ದಿನಾಂಕ: 24-03-2026 ... 01-04-2026 ... 16.00 ಗಂಟೆ ... 30-03-2026 ... 02-04-2026 [illegible]

ಡಿಐಪಿಆರ್/ಬಳ್ಳಾರಿ/1174/ಕೆಎಸ್‌ಎಂಸಿಎ/2025-26

CHANGE OF NAME

I, **PUSHPAVATHI SHESHADRI** (Old Name), aged about 46 years, W/o. CHANDRASHEKHAR MANDUR SHAMANNA, RESIDING AT NO.226, MANDUR VILLAGE AND POST, MANDUR, BANGALURU EAST, BENGALURU, KARNATAKA-560049, declare that I have changed my name from **PUSHPAVATHI SHESHADRI** (Old Name) to **PUSHPA CHANDRASHEKHAR** (New Name), henceforth I shall be known and called as **PUSHPA CHANDRASHEKHAR** (New Name) for all my personal, official & legal purpose, vide Affidavit dated : 11/03/2026 before Notary **GANGARAJU.B.N.** at BENGALURU

CHANGE OF NAME

I, **SHANTHAMMA M,** w/o Niranjanamurthy, age 53 years, R/at Byrasandra Village, Horalura Post, Guluru Hobli, Tumakuru Taluk, Tumakuru District do hereby declare that both the names i.e. **SHANTHAMMA M** and **SHANTHAKUMARI** are one and the same and refers to me only, henceforth I shall be known and called as **SHANTHAMMA M** for all purposes, vide affidavit dated 23-03-2026, sworn before Advocate and Notary 23-03-2026, sworn before Advocate and Notary **H.J. VIJAYALAKSHAMMA** at Tumkur

CHANGE OF NAME

I, **ANURADHA BADEKKILA** (Old Name), aged about 46 years, W/o. GIRIDHARA KAJE, RESIDING AT SORA 24, PHOENIX KESSAKU, NO.1, DR.RAJKUMAR ROAD, RAJAJINAGAR, BENGALURU-560010, KARNATAKA, declare that I have changed my name from **ANURADHA BADEKKILA** (Old Name) to **ANURADHA KAJE** (New Name), henceforth I shall be known and called as **ANURADHA KAJE** (New Name) for all my personal, official & legal purpose, vide Affidavit dated : 23/03/2026 before Notary **GANGARAJU.B.N.** at BENGALURU

CHANGE OF NAME

I, **KERA RAM** son of MANGI LAL resident of No 24, 1st Floor, 2nd Cross, Saibabanagar, Srirampuram, Bengaluru, Karnataka - 560021. Have changed the name of my minor daughter aged 1 years From **ROSHINI** and she shall hereafter be known as **RISHIKA PRAJAPATI,** for all purposes, vide affidavit dated 12th AUGUST 2025, sworn before Advocate and Notary **R VISHWANATH** at Bangalore.

:: ಓದುಗರ ಗಮನಕ್ಕೆ ::

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

KARNATAKA RURAL INFRASTUCTURE DEVELOPMENT LTD.

(Formerly Karnataka Land Army Corporation Limited)

No.1106, 10th Main Road, RPC Layout, Vijayanagar, Bengaluru - 560040

ಸಂ: ಕಾಘಟ-4/ಕೆಆರ್‌ಐಡಿಎಲ್/ಟೆಂಡರ್/2025-26/1287 ದಿನಾಂಕ:23.03.2026

ಇ-ಟೆಂಡರ್ ಅಧಿಸೂಚನೆ

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (KRIDL) ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಕಾರ್ಯಪಾಲಕ ಇಂಜಿನಿಯರ್, BBMP ವಿಭಾಗ-4 ಅವರು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (KPPP) ಮೂಲಕ ಎರಡು ಕವರ್ ಪದ್ಧತಿಯ ಇ-ಟೆಂಡರ್‌ಗಳನ್ನು ಆಹ್ವಾನಿಸುತ್ತಿದ್ದಾರೆ. ಟೆಂಡರ್ ಸೂಚನೆ ಸಂಖ್ಯೆ (KRIDL/2025-26/RD/WORK_INDENT 43, 45 and 46) ಅಡಿಯಲ್ಲಿ ಪ್ರತಿ ಕಾಮಗಾರಿಯ ಅಂದಾಜು ಮೊತ್ತ ರೂ.995.00 ಲಕ್ಷಗಳು ಹಾಗೂ EMD ಮೊತ್ತ ರೂ.11.50 ಲಕ್ಷಗಳು ಆಗಿರುತ್ತದೆ. ಅರ್ಹ ಗುತ್ತಿಗೆದಾರರು/ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಲು KPPP ವೆಬ್‌ಸೈಟ್ https://kppp.karnataka.gov.in ಮೂಲಕ ಮಾತ್ರ ಟೆಂಡರ್ ವಿವರಗಳನ್ನು ವೀಕ್ಷಿಸಿ, ಡೌನ್‌ಲೋಡ್ ಮಾಡಿ ಹಾಗೂ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಟೆಂಡರ್ ವೇಳಾಪಟ್ಟಿ ಕೆಳಗಿನಂತಿದೆ:

ಟೆಂಡರ್ ಪ್ರಕಟಣೆಯ ದಿನಾಂಕ	23.03.2026
ಆನ್‌ಲೈನ್ ಪ್ರಶ್ನೆಗಳಿಗಾಗಿ ಕೊನೆಯ ದಿನಾಂಕ	30.03.2026, 17:30
ಪ್ರಿ-ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ	02.04.2026, 11:30
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	13.04.2026, 15:00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	15.04.2026, 15:30
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	22.04.2026, 15:30

ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in.** ವೆಬ್‌ಸೈಟ್‌ಗೆ ಭೇಟಿ ನೀಡಿ

ಸಹಿ/- ಕಾರ್ಯಪಾಲಕ ಅಭಿಯಂತರರು-4,
ಕೆಆರ್‌ಐಡಿಎಲ್, ಬೆಂಗಳೂರು

ಡಿಐಪಿಆರ್/ಸಿ.ಪು/6400/ಸಿಎಂಸಿಎ/2025-26

ಫಾರ್ಮ್ ನಂ. ಯುಆರ್ಸಿ-2

[illegible]

ದಿನಾಂಕ: 24ನೇ ಮಾರ್ಚ್ 2026

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್. ಸ್ಟೇಷನ್ ಎದುರು, ಹೈವೇಸ್ಟ್ರ ರೋಡ್ ರಸ್ತೆ, ಹೂಟಗಳ್ಳಿ
ಮೈಸೂರು ಜಿಲ್ಲೆ - 570018, ದೂ: 0821-2001737
ಇ-ಮೇಲ್: ka.hootagalli.cmc@gmail.com, ವೆಬ್‌ಸೈಟ್: ka.hootagalli.cmc@gmail.com

ಸಂ: ನಗಸಹೂ/ತಾಂತ್ರಿಕ/ಟೆಂಡರ್ ಪ್ರಕಟಣೆ/ಸಿ.ಆರ್.-19/2025-26 ದಿನಾಂಕ: 20.03.2026

ಟೆಂಡರ್ ಪ್ರಕಟಣೆ

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2023-24ನೇ ಸಾಲಿನ ನಗರಸಭಾ ನಿಧಿ ಅನುದಾನದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ 2000ದ ಪ್ರಕಾರ ಕೆ.ಜಿ-01 ನಿಯಮದಂತೆ ಕೆ.ಪಿ.ಪಿ. ಪೋರ್ಟಲ್ ಮೂಲಕ ಸಾಮಗ್ರಿ ಸರಬರಾಜು ಮಾಡಲು ಐಟಂವಾರು ಟೆಂಡರ್ ಕರೆಯಲಾಗಿದ್ದು, ನೋಂದಾಯಿತ ಗುತ್ತಿಗೆದಾರರು/ಏಜೆನ್ಸಿಯಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು **https://kppp.karnataka.gov.in** ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಅರ್ಹ ಗುತ್ತಿಗೆದಾರರು/ಏಜೆನ್ಸಿಯಿಂದ ಟೆಂಡರ್ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 04.04.2026 ಸಂಜೆ 5:30 ಗಂಟೆಯವರೆಗೆ,** ಟೆಂಡರ್ ತೆರೆಯುವ **ದಿನಾಂಕ: 06.04.2026 ಬೆಳಗ್ಗೆ 11.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆಯ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.

ಕ್ರ. ಸಂ.	ಇಂಡೆಂಟ್ ವಿವರಗಳು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	DMA/2025-26/IND6094	10.00	25,000/-

ಸಹಿ/- ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

DIPR/MYS/1864/SA/2025-26

---

onmobile

ಆನ್‌ಮೊಬೈಲ್ ಗ್ಲೋಬಲ್ ಲಿಮಿಟೆಡ್

ನೋಂದಾಯಿತ ಕಚೇರಿ: ಆನ್‌ಮೊಬೈಲ್ ಗ್ಲೋಬಲ್ ಲಿಮಿಟೆಡ್, ಇ-ಸಿಟಿ, ಟವರ್-1, 94/1ಸಿ & 94/2, ವೀರಸಂದ್ರ ವಿಲೇಜ್, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಎಲೆಕ್ಟ್ರಾನಿಕ್ ಸಿಟಿ ಫೇಸ್-1, ಬೆಂಗಳೂರು-560 100, ಕರ್ನಾಟಕ, ಭಾರತ
ಕಾರ್ಪೊರೇಟ್ ಐಡೆಂಟಿಟಿ ನಂ. (ಸಿಐಎನ್): L64202KA2000PLC027860
ದೂ.: + 91 80 4009 6000 ಫ್ಯಾಕ್ಸ್: + 91 80 4009 6009 ಇ-ಮೇಲ್: investors@onmobile.com ವೆಬ್‌ಸೈಟ್: www.onmobile.com

ಅಂಚೆ ಮತಪತ್ರದ ಬಗ್ಗೆ ನೋಟೀಸು

[illegible] ... 2013 ("ಕಾಯ್ದೆ") ... 110 ... 2014 ("ನಿಯಮಗಳು") ... 20 ಮತ್ತು 22 ... 44 ... 2015 ... 14/2020 ... 2020, ... 17/2020 ... 13, 2020, ... 20/2020 ... 5, 2020, ... 22/2020 ... 15, 2020, ... 33/2020 ... 28, 2020, ... 39/2020 ... 31, 2020, ... 10/2021 ... 23, 2021, ... 20/2021 ... 8, 2021, ... 3/2022 ... 5, 2022, ... 11/2022 ... 28, 2022, ... 09/2023 ... 25, 2023, ... 09/2024 ... 19, 2024 ... 03/2025 ... 22, 2025 ... [illegible]

#	ನಿರ್ಣಯದ ವಿವರಣೆ	ನಿರ್ಣಯದ ಪ್ರಕಾರ
1	[illegible] (ಡಿನ್: 00043930) [illegible]	[illegible]

[illegible] ... ಮಾರ್ಚ್ 20, 2026 ... ಮಾರ್ಚ್ 23, 2026 ... [illegible]

[illegible] (www.onmobile.com) ... (www.nseindia.com) ... (www.bseindia.com) ... [illegible]

ಎ) SEBI ... SEBI/HO/MIRSD/MIRSD-PoD-1/P/CIR/2023/37, ... [illegible]

... https://ris.kfintech.com/clientservices/isc/isrforms.aspx ... https://ris.kfintech.com/faq.html ... einward.ris@kfintech.com ... investors@onmobile.com ... [illegible]

#	ವಿವರಗಳು	ವಿವರಣೆ
1	[illegible]	https://evoting.kfintech.com/ [illegible]
2	[illegible]	[illegible] FCS 7834 ... CP No. 13784 ... FCS 8750 ... CP No. 8239 ... Email: pramod@pmpandco.com
3	[illegible]	ಶುಕ್ರವಾರ, ಮಾರ್ಚ್ 20, 2026
4	[illegible]	ಮಂಗಳವಾರ, ಮಾರ್ಚ್ 24, 2026 ... ಬುಧವಾರ, ಏಪ್ರಿಲ್ 22, 2026 ... [illegible]
5	[illegible]	ಬುಧವಾರ, ಏಪ್ರಿಲ್ 24, 2026 ... [illegible]
6	[illegible]	https://evoting.kfintech.com ... einward.ris@kfintech.com ... evoting@kfintech.com ... 1800-309-4001 [illegible]

ದಿನಾಂಕ : ಮಾರ್ಚ್ 23, 2026
ಸ್ಥಳ : ಬೆಂಗಳೂರು

ಮಂಡಳಿಯ ಆದೇಶದಂತೆ
ಆನ್‌ಮೊಬೈಲ್ ಗ್ಲೋಬಲ್ ಲಿಮಿಟೆಡ್ ಪರವಾಗಿ
ಸಹಿ/-
ಪಿ.ವಿ. ವರದರಾಜ್
ಕಂಪನಿ ಸೆಕ್ರೆಟರಿ

ಟ್ರಾಫಿಕ್, ಪಾರ್ಕಿಂಗ್ ಸಮಸ್ಯೆಗೆ ಶಾಶ್ವತ ಪರಿಹಾರ | ಜಿಬಿಎ ವ್ಯಾಪ್ತಿಯ ಪಾಲಿಕೆಗಳಿಂದ ಪ್ರಯೋಗ

ರಸ್ತೆ ಬದಿ ಖಾಸಗಿ ಖಾಲಿ ಜಾಗವೇ ಪಾರ್ಕಿಂಗ್

• **ಬೆಂಗಳೂರು:** ನಗರದಲ್ಲಿ ಟ್ರಾಫಿಕ್ ಮತ್ತು ಪಾರ್ಕಿಂಗ್ ಸಮಸ್ಯೆ ಬಹುದೊಡ್ಡ ಸವಾಲಾಗಿದೆ. ಪಾರ್ಕಿಂಗ್ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಐದು ಪಾಲಿಕೆಗಳು ಅನೇಕ ಪ್ರಯೋಗಕ್ಕೆ ಮುಂದಾಗಿವೆ.

ಮುಂದುವರೆದು ಪಾರ್ಕಿಂಗ್ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಜಿಬಿಎ ವಿನೂತನ ಮಾಸ್ಟರ್ ಪ್ಲಾನ್ ಒಂದನ್ನು ಸಿದ್ಧಪಡಿಸಿದೆ. ನಗರದ ರಸ್ತೆ ಪಕ್ಕದಲ್ಲಿರುವ ಬಳಕೆಯಾಗದ ಖಾಸಗಿ ಖಾಲಿ ಜಾಗವನ್ನು ತಾತ್ಕಾಲಿಕ ಪಾರ್ಕಿಂಗ್ ವಲಯವನ್ನಾಗಿ ಪರಿವರ್ತಿಸಲು ಮುಂದಾಗಿದೆ.

ನಗರದ ಪ್ರಮುಖ ರಸ್ತೆಗಳ ಬದಿಯಲ್ಲಿ ಅನೇಕ ಖಾಸಗಿ ಮಾಲೀಕತ್ವದ ನಿವೇಶನಗಳು ದಶಕದಿಂದ ಖಾಲಿ ಬಿದ್ದಿವೆ. ಮತ್ತೊಂದೆಡೆ, ರಸ್ತೆಗಳಲ್ಲಿ ಅಡ್ಡಾದಿಡ್ಡಿ ವಾಹನ ನಿಲುಗಡೆಯಿಂದಾಗಿ ಸಂಚಾರ ದಟ್ಟಣೆ ಮಿತಿಮೀರುತ್ತಿದೆ. ಇದನ್ನು ಗಮನಿಸಿರುವ ಜಿಬಿಎ ಅಂತಹ ಖಾಲಿ ಜಾಗವನ್ನು ಗುರುತಿಸಿ ಅವುಗಳನ್ನು ಅಧಿಕೃತ ಪಾರ್ಕಿಂಗ್ ತಾಣಗಳನ್ನಾಗಿ ಬಳಸಿಕೊಳ್ಳಲು ನಿರ್ಧರಿಸಿದೆ.

ಖಾಲಿ ಜಾಗ ಸಮೀಕ್ಷೆ ಆರಂಭ: ಜಿಬಿಎ ವ್ಯಾಪ್ತಿಗೆ ಬರುವ ಐದು ಪಾಲಿಕೆಗಳ ವ್ಯಾಪ್ತಿಯಲ್ಲಿ ಈಗಾಗಲೇ ಈ ಕುರಿತು ಸಮಗ್ರ ಅಧ್ಯಯನ ಆರಂಭವಾಗಿದೆ. ರಸ್ತೆ ಬದಿಯಲ್ಲಿರುವ ಅಂತಹ ಎಷ್ಟು ಖಾಲಿ ನಿವೇಶನಗಳು ಲಭ್ಯವಿವೆ ಎಂಬ ಬಗ್ಗೆ ಅಧಿಕಾರಿಗಳು ದತ್ತಾಂಶ ಸಂಗ್ರಹಿಸುತ್ತಿದ್ದಾರೆ.



ಮಾಲೀಕರಿಗೆ ಆಕರ್ಷಕ ರಿಯಾಯಿತಿ: ತಮ್ಮ ಖಾಲಿ ಜಾಗವನ್ನು ಪಾರ್ಕಿಂಗ್‌ಗೆ ಬಿಟ್ಟುಕೊಡುವ ಮಾಲೀಕರಿಗೆ ವಿಶೇಷ ಪ್ರೋತ್ಸಾಹಧನ ಅಥವಾ ತೆರಿಗೆ ವಿನಾಯಿತಿ ನೀಡುವ ಬಗ್ಗೆ ಜಿಬಿಎ ಚಿಂತನೆ ನಡೆಸಿದೆ. ಜಾಗದ ಹಕ್ಕು ಮಾಲೀಕರಿಗೇ ಇರಲಿದ್ದು, ಕೇವಲ ಬಳಕೆಗೆ ಮಾತ್ರ ಒಪ್ಪಂದ ಮಾಡಿಕೊಳ್ಳಲಾಗುವ ಬಗ್ಗೆ ಯೋಜನೆ ರೂಪಿಸಲಾಗುತ್ತಿದೆ. ರಸ್ತೆ ಬದಿಯಲ್ಲಿ ಅನಧಿಕೃತವಾಗಿ ವಾಹನ ನಿಲ್ಲಿಸುವುದರಿಂದ ಉಂಟಾಗುವ ಅಡೆತಡೆಗಳನ್ನು ತಪ್ಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸವಾಲು ಮತ್ತು ಪರಿಹಾರ

ನಗರದಲ್ಲಿ ಸುಸಜ್ಜಿತ ಪಾರ್ಕಿಂಗ್ ವಲಯಗಳಿದ್ದರೂ ಸಹ, ಜನರು ಸೋಮಾರಿತನದಿಂದ ಅಥವಾ ಹತ್ತಿರದ ಜಾಗಕ್ಕಾಗಿ ರಸ್ತೆಗಳಲ್ಲೇ ವಾಹನ ನಿಲ್ಲಿಸುತ್ತಿದ್ದಾರೆ. ಈ ಅಭ್ಯಾಸಕ್ಕೆ ಇತಿಶ್ರೀ ಹಾಡಲು ಖಾಸಗಿ ಜಾಗಗಳ ಬಳಕೆ ಅತ್ಯಂತ ಪ್ರಾಯೋಗಿಕ ಮತ್ತು ಸುಸ್ಥಿರ ಮಾರ್ಗ ಎಂದು ಜಿಬಿಎ ಅಭಿಪ್ರಾಯಪಟ್ಟಿದೆ. ನಗರದ ಪಾರ್ಕಿಂಗ್ ಸಮಸ್ಯೆ ನೀಗಿಸಲು ಇದು ಹೊಸ ಪ್ರಯತ್ನ. ಖಾಸಗಿ ಜಾಗದ ಮಾಲೀಕರಿಗೆ ಇದರಿಂದ ಆರ್ಥಿಕ ಅನುಕೂಲವಾಗುವುದಲ್ಲದೆ, ನಗರದ ಸಂಚಾರ ವ್ಯವಸ್ಥೆಯೂ ಸುಧಾರಿಸಲಿದೆ. ಈ ಬಗ್ಗೆ ಶೀಘ್ರದಲ್ಲೇ ಕಾರ್ಯಸಾಧ್ಯತಾ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಜಿಬಿಎ ಸೂಚನೆ ನೀಡಿದೆಯಂತೆ. ಸದ್ಯ ಈ ಪ್ರಸ್ತಾವನೆಯು ಅಧ್ಯಯನದ ಹಂತದಲ್ಲಿದೆ. ವರದಿ ಸಲ್ಲಿಕೆಯಾದ ಬಳಿಕ ಅನುಷ್ಠಾನದ ಕುರಿತು ಸ್ಪಷ್ಟ ರೂಪರೇಷೆಗಳು ಹೊರಬೀಳಲಿವೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬ್ಯಾನರ್ ತೆರವು



ಯುಗಾದಿ ಮತ್ತು ರಂಜಾನ್ ಹಬ್ಬದ ಪ್ರಯುಕ್ತ ನಗರದ ವಿವಿಧೆಡೆ ಅನಧಿಕೃತವಾಗಿ ಅಳವಡಿಸಲಾಗಿದ್ದ ಫ್ಲೆಕ್ಸ್, ಬ್ಯಾನರ್ ತೆರವು ಕಾರ್ಯಾಚರಣೆಯನ್ನು ಐದು ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಸಲಾಯಿತು.

ಕಿರುಸುದ್ದಿ

ಸುಳ್ಳು ದಾಖಲೆ ಸೃಷ್ಟಿ: ಕ್ರಮಕ್ಕೆ ಆಗ್ರಹ



• **ಬೆಂಗಳೂರು:** ಕೊತ್ತನೂರು ಗ್ರಾಮದ ಆರ್‌ಬಿಐ ಬಡಾವಣೆಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸೇರಿದ ಜಾಗವನ್ನು ಕೆಲವು ಕಿಡಿಗೇಡಿಗಳು ಸುಳ್ಳು ದಾಖಲೆ ಸೃಷ್ಟಿಸಿ, ಕಬಳಿಕೆ ಮಾಡುತ್ತಿರುವುದನ್ನು ಸರ್ಕಾರ ತಕ್ಷಣ ತಡೆಯಬೇಕೆಂದು ಆರ್‌ಬಿಐ ಬಡಾವಣೆಯ ಕಲ್ಯಾಣ ಸಂಘ ಆಗ್ರಹಿಸಿದೆ. ಪಾರ್ಕ್‌ಗೆ ಸೇರಿದ ಜಾಗವನ್ನು ಕೆಲವು ವ್ಯಕ್ತಿಗಳು ಅಕ್ರಮವಾಗಿ ಕಬಳಿಕೆ ಮಾಡಿ ಅನಧಿಕೃತವಾಗಿ ಶೆಡ್ ನಿರ್ಮಾಣ ಮಾಡಿಕೊಂಡಿದ್ದಾರೆ. ಇದಕ್ಕೆ ಅನಧಿಕೃತವಾಗಿ ಜಿಬಿಎಯಿಂದ ಖಾತೆಯನ್ನು ಸಹ ಸೃಷ್ಟಿಸಿದ್ದಾರೆ. ಇದು ಸಾರ್ವಜನಿಕ ಆಸ್ತಿ ಎಂಬುದು ಸಾರ್ವಜನಿಕರಿಗೆ ಚೆನ್ನಾಗಿ ತಿಳಿದಿದ್ದು, ಕೆಲವು ಪ್ರಭಾವಿ ರಾಜಕೀಯ ವ್ಯಕ್ತಿಗಳ ಹೆಸರು ದುರುಪಯೋಗ ಮಾಡಿಕೊಂಡು ಈ ರೀತಿಯಲ್ಲಿ ಕಬಳಿಕೆ ಮಾಡುತ್ತಿದ್ದಾರೆ. ಈ ಪ್ರಕರಣದಲ್ಲಿ ಮೇಲು ನೋಟಕ್ಕೆ ಸರ್ಕಾರಿ ಅಧಿಕಾರಿಗಳು ಶಾಮೀಲಾಗಿರುವುದು ಕಂಡು ಬಂದಿದ್ದು, ರಾಜ್ಯ ಸರ್ಕಾರ ಕೂಡ ಪರೋಕ್ಷವಾಗಿ ಸಾಥ್ ನೀಡುತ್ತಿದೆ ಎಂದು ಸಂಘದ ಪದಾಧಿಕಾರಿಗಳು ಆರೋಪಿಸಿದ್ದಾರೆ. ಆರ್‌ಬಿಐ ಬಡಾವಣೆಯ ಕಲ್ಯಾಣ ಸಂಘ ಸದಸ್ಯ ಉಮೇಶ್ ಮಾತನಾಡಿ, ಸರ್ಕಾರಕ್ಕೆ ಸೇರಿರುವ ಜಾಗವನ್ನು ಅನಧಿಕೃತರ ಹೆಸರಿಗೆ ಖಾತೆಯನ್ನು ಮಾಡಿಕೊಡಲಾಗಿದೆ. ಕಬ್ಜ ಮಾಡಿರುವ ಸ್ಥಳವನ್ನು ಜಿಬಿಎ ಕಾರ್ಯನಿರ್ವಾಹಕ ಅಭಿಯಂತರರು ಕೂಡಲೇ ಕ್ರಮವಹಿಸಿ ಸಾರ್ವಜನಿಕರ ಹಿತಾಸಕ್ತಿಯಿಂದ ಸ್ಥಳವನ್ನು ಬಿಡಿಸಿಕೊಡಬೇಕು. ಅಲ್ಲದೆ, ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವ ಅಧಿಕಾರಿಗಳ ವಿರುದ್ಧವೂ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದ್ದಾರೆ.

ನಾಳೆ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆ

• **ಬೆಂಗಳೂರು:** ಒಳಮೀಸಲಾತಿ ಕುರಿತು ನ್ಯಾ.ನಾಗಮೋಹನ್ ದಾಸ್ ಆಯೋಗದ ವರದಿ ತಿರಸ್ಕರಿಸಿ, ಮರುಸಮೀಕ್ಷೆ ನಡೆಸುವಂತೆ ಆಗ್ರಹಿಸಿ ಮಾ.25 ರಂದು ಸ್ವಾತಂತ್ರ್ಯ ಉದ್ಯಾನವನದಲ್ಲಿ ಬೃಹತ್ ಪ್ರತಿಭಟನಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ತಿಳಿಸಿದರು. ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿ ಅಲ್ಲದೇ, ಒಳಮೀಸಲಾತಿಯು 101 ಜಾತಿಗಳಿಗೆ ಸಮಾನವಾಗಿ ಹಂಚಿಕೆಯಾಗುವ ದೃಷ್ಟಿಯಿಂದ ಪ್ರಮಾಣ ಹೆಚ್ಚಾಗಬೇಕಾದ್ದುದ್ದು ಅನಿವಾರ್ಯವಾಗಿರುತ್ತದೆ. ಆದರೆ, 101 ಜಾತಿಗಳ ಪೈಕಿ 1 ಜಾತಿಯ ಒತ್ತಡಕ್ಕೆ ಸರ್ಕಾರ ಮಣಿದು ಶೇ.15+3ರ ಮೀಸಲಾತಿಯಲ್ಲಿ ಒಳಮೀಸಲಾತಿ ಜಾರಿಗೊಳಿಸಲು ಮುಂದಾದರೆ, ಬಲಗೈ ಸಮುದಾಯಗಳ ಪ್ರತಿರೋಧವನ್ನು ರಾಜ್ಯ ಸರ್ಕಾರ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕೈಗೊಂಡಿರುವ ಕುಟುಂಬಗಳ ಸಮೀಕ್ಷೆ ವರದಿ ಲಭ್ಯವಾದ ನಂತರ, ಸದರಿ ಅಂಕಿ ಅಂಶಗಳೊಂದಿಗೆ ನಾಗಮೋಹನ್‌ದಾಸ್ ಆಯೋಗದ ಅಂಕಿ ಅಂಶಗಳನ್ನು ಹೋಲಿಕೆ ಮಾಡಿ, ವ್ಯತ್ಯಾಸಗಳು ಕಂಡುಬಂದಲ್ಲಿ ಪರಿಶಿಷ್ಟ ಜಾತಿಯ ಎಲ್ಲ ಕುಟುಂಬಗಳ ಸಮೀಕ್ಷೆಯನ್ನು ಮತ್ತೊಮ್ಮೆ ಕೈಗೊಳ್ಳಬೇಕು. ರಾಜ್ಯ ಸರ್ಕಾರ 2025ರ ಸೆ.3 ರಂದು ಯಾವುದೇ ಮಾನದಂಡವನ್ನು ಅನುಸರಿಸದೇ ಅವೈಜ್ಞಾನಿಕವಾಗಿ ಹೊರಡಿಸಿರುವ ಮೀಸಲಾತಿ ಆದೇಶವನ್ನು ಹಿಂಪಡೆಯಬೇಕು ಎಂದು ಅವರು ಒತ್ತಾಯಿಸಿದರು.

ತಿಗಳರಪೇಟೆ ಶ್ರೀಧರ್ಮರಾಯಸ್ವಾಮಿ ದೇಗುಲದಲ್ಲಿ ಆಚರಣೆ | ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆ

ಇಂದು ಐತಿಹಾಸಿಕ ಕರಗೋತ್ಸವಕ್ಕೆ ಚಾಲನೆ

• **ಬೆಂಗಳೂರು:** ತಿಗಳರಪೇಟೆಯಲ್ಲಿನ ಶ್ರೀ ಧರ್ಮರಾಯ ಸ್ವಾಮಿ ದೇವಾಲಯದಲ್ಲಿ ನಡೆಯುವ ಐತಿಹಾಸಿಕ ಪ್ರಸಿದ್ಧ ಬೆಂಗಳೂರು ಕರಗ ಉತ್ಸವಕ್ಕೆ ಮಂಗಳವಾರ (ಮಾ.24) ಚಾಲನೆ ದೊರೆಯಲಿದೆ.

ಮಾ.24ರಿಂದ ಏ.3ರವರೆಗೆ ನಡೆಯುವ ಕರಗ ಮಹೋತ್ಸವಕ್ಕೆ ಮಂಗಳವಾರ ಧ್ವಜಾರೋಹಣದೊಂದಿಗೆ ಹಬ್ಬದ ಮೊದಲ ದಿನ ಪ್ರಾರಂಭವಾಗುತ್ತದೆ. ಮಾ.25 ರಿಂದ ಏ.3ರವರೆಗೆ ಪ್ರತಿದಿನ ವಿಶೇಷ ಪೂಜೆ ಮತ್ತು ಮಹಾ ಮಂಗಳಾರತಿ ನಡೆಯಲಿದೆ. ಇದರೊಂದಿಗೆ ದೇವಾಲಯದ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಯಲಿದೆ. ಏ. 1 ರಂದು ಮಧ್ಯರಾತ್ರಿ ಬೆಂಗಳೂರು ಕರಗ ಶಕ್ತ್ಯೋತ್ಸವ ನಡೆಯಲಿದೆ. ಆ ದಿನ ದ್ರೌಪದಿ ದೇವಿಯ ಹೂವಿನ ಕರಗವು ನಾಡಪ್ರಭು ಕೆಂಪೇಗೌಡ ನಿರ್ಮಿಸಿದ ಪೇಟೆಗಳ ಮೂಲಕ ಸಂಚರಿಸಿ ಲಕ್ಷಾಂತರ ಭಕ್ತರಿಗೆ ದರ್ಶನ ನೀಡಲಿದೆ.

ಈ ಬಾರಿಯೂ ಪೂಜಾರಿ ಎ.ಜ್ಞಾನೇಂದ್ರ ಅವರು ಕರಗ ಹೊರಲಿದ್ದಾರೆ. ಇವರು ಕಳೆದ 14 ವರ್ಷದಿಂದ ಕರಗವನ್ನು ಹೋರುತ್ತಿದ್ದಾರೆ.

ಬೆಂಗಳೂರು ಕರಗ ಹಿನ್ನೆಲೆಯಲ್ಲಿ ಧರ್ಮರಾಯ ದೇವಸ್ಥಾನದಲ್ಲಿ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸೋಮವಾರ ಬೆಳಗ್ಗೆಯಿಂದಲೇ ದೇವಾಲಯದ ಸ್ವಚ್ಛತಾ ಕಾರ್ಯ ನಡೆದಿದೆ. ಸಿಬ್ಬಂದಿಯು ದೇವಾಲಯ, ರಥ ಸೇರಿದಂತೆ ಸಂಪೂರ್ಣ ಶುಚಿಗೊಳಿಸಿದ್ದಾರೆ. ದೇವಾಲಯ ಸುತ್ತಲೂ ಹೂವಿನ ಅಲಂಕಾರ ಮಾಡಿ ತಯಾರು ಮಾಡಲಾಗಿದೆ.



ತುರ್ತು ಸೇವೆಗೆ ಕ್ರಮ

ಕರಗ ಮಹೋತ್ಸವಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಅಗತ್ಯವಿರುವ ಎಲ್ಲಾ ಕಡೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಸಮರ್ಪಕವಾಗಿ ಒದಗಿಸಲಾಗುತ್ತದೆ. ಭಕ್ತಾಧಿಗಳಿಗೆ ಅನುಕೂಲವಾಗುವಂತೆ ಮುಂಜಾಗ್ರತಾ ಕ್ರಮವಾಗಿ ತುರ್ತುಸೇವೆ ಒದಗಿಸಲು ಆಂಬ್ಯುಲೆನ್ಸ್ ಸಹಿತ ವೈದ್ಯಕೀಯ ತಂಡ, ಅಗ್ನಿ ಅವಘಡ ಸಂಭವಿಸದಂತೆ ಮುಂಜಾಗ್ರತಾ ಕ್ರಮವಾಗಿ ಅಗ್ನಿ ಶಾಮಕ ವಾಹನ ಮುಂತಾದ ಸೇವೆ ಒದಗಿಸಲಾಗುತ್ತದೆ.



ಸಂಚಾರಕ್ಕೆ ಅಡ್ಡಿಯಾಗದಂತೆ ವ್ಯವಸ್ಥೆ



ಕರಗ ಮಹೋತ್ಸವಕ್ಕೆ ಕಾರ್ಯಕ್ರಮಕ್ಕೆ ಆಗಮಿಸುವ ಅತಿ ಗಣ್ಯರು, ಗಣ್ಯರು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕ ಭಕ್ತಾಧಿಗಳು ಆಗಮಿಸುವುದರಿಂದ ಕಾನೂನು ಸುವ್ಯವಸ್ಥೆಯಲ್ಲಿ ಯಾವುದೇ ಲೋಪವಾಗದಂತೆ ಅಗತ್ಯ ಪ್ರಮಾಣದಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ ಮತ್ತು ಅವಕಾಶವಿರುವ ಕಡೆಗಳಲ್ಲಿ ವಾಹನ ನಿಲುಗಡೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ ಸಾರ್ವಜನಿಕ ಸಂಚಾರಕ್ಕೆ ಯಾವುದೇ ಅಡ್ಡಿಯಾಗದಂತೆ ಅಗತ್ಯ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ವಿದ್ಯುತ್ ದೀಪಾಲಂಕಾರ



ಕರಗ ಮಹೋತ್ಸವಕ್ಕೆ ಮೈಸೂರು ದಸರಾ ಮಾದರಿ ವಿದ್ಯುತ್ ದೀಪಾಲಂಕಾರಕ್ಕೆ ನಿರ್ಧಾರ ಕೈಗೊಳ್ಳಲಾಗಿದೆ. ಅದರಲ್ಲೂ ದೇಗುಲದ ಆವರಣ, ಹಡ್ಸನ್ ಸರ್ಕಲ್, ಟೌನ್ ಹಾಲ್ ವೃತ್ತ, ಸಿಟಿ ಮಾರುಕಟ್ಟೆ ವೃತ್ತ, ಮೈಸೂರು ಬ್ಯಾಂಕ್ ವೃತ್ತ, ಜಿಬಿಎ ಮುಖ್ಯ ಕಚೇರಿ ಆವರಣ ಕೆಂಪೇಗೌಡ ವೃತ್ತ, ಹಳೇ ಪೇಟೆ ಇತರೆ ಮುಖ್ಯ ರಸ್ತೆಗಳಿಗೆ ದೀಪಾಲಂಕಾರ ಮಾಡಲಾಗುತ್ತಿದೆ.

ಶೀಘ್ರ ಕಸ ವಿಲೇವಾರಿ

ಪ್ರಯೋಗಿಕರ ಸುರಕ್ಷತೆ ದೃಷ್ಟಿಯಿಂದ ದೇವಾಲಯದ ಆವರಣದಲ್ಲಿ ಬೀದಿ ದೀಪ, ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಇದರೊಂದಿಗೆ ಕರಗವು ಸಾಗುವ ಮಾರ್ಗಗಳಲ್ಲಿ ಸಂಗ್ರಹವಾಗುವ ಕಸವನ್ನು ಆಗಿಂದ್ದಾಗ್ಗೆ ವಿಲೇವಾರಿ ಮಾಡಿ ಸ್ವಚ್ಛ ಮಾಡಲಾಗುತ್ತದೆ.

ಅಸಹಾಯಕ ಮಹಿಳೆಯರಿಗೆ ಮದುವೆ ಆಮಿಷ

ಖಾಸಗಿ ಸಂಸ್ಥೆ ಮಾಲೀಕ ಬಂಧನ

• **ಬೆಂಗಳೂರು:** ಅಸಹಾಯಕ ಮಹಿಳೆಯರನ್ನೇ ಗುರಿಯಾಗಿಸಿಕೊಂಡು ಮದುವೆಯ ಆಮಿಷ ವೊಡ್ಡಿ ವಂಚಿಸುತ್ತಿದ್ದ ಆರೋಪಿಯನ್ನು ಪರಪ್ಪನ ಅಗ್ರಹಾರ ಠಾಣಾ ಪೊಲೀಸರು ಬಂಧಿಸಿದ್ದಾರೆ.

ನಗರದ ಸೂರ್ಯ ಮ್ಯಾನೇಜ್‌ಮೆಂಟ್ ಸರ್ವೀಸ್ ಸಂಸ್ಥೆಯ ಮಾಲೀಕ ರಾಮಾಂಜಿ (38) ಎಂಬಾತನ ವಿರುದ್ಧ ಗಂಭೀರ ಪ್ರಕರಣ ದಾಖಲಾಗಿದೆ. ಆರೋಪಿ ರಾಮಾಂಜಿ ಹೌಸ್ ಕೀಪಿಂಗ್ ಮತ್ತು ಸೆಕ್ಯೂರಿಟಿ ಸೇವೆ ಒದಗಿಸುವ ಸಂಸ್ಥೆಯನ್ನು ನಡೆಸುತ್ತಿದ್ದನು. ತನ್ನ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯರು ಹಾಗೂ ಹೊರಗಿನ ಮಹಿಳೆಯರನ್ನು ಈತ ಬಲೆಗೆ ಬೀಳಿಸಿಕೊಳ್ಳುತ್ತಿದ್ದನು. ವಿಶೇಷವಾಗಿ ಪತಿಯನ್ನು ಕಳೆದುಕೊಂಡವರು, ವಿಚ್ಛೇದನ ಪಡೆದವರು ಅಥವಾ ತೀವ್ರ ಆರ್ಥಿಕ ಸಂಕಷ್ಟದಲ್ಲಿರುವ ಮಹಿಳೆಯರನ್ನೇ ಗುರಿಯಾಗಿಸಿಕೊಂಡು ಮದುವೆಯ ಭರವಸೆ ನೀಡುತ್ತಿದ್ದನು ಎನ್ನಲಾಗಿದೆ.

ದೈಹಿಕ ಸಂಪರ್ಕಕ್ಕೆ ಬಳಕೆ: ಮದುವೆಯಾಗುವ ನಾಟಕವಾಡುತ್ತಿದ್ದ ಈತ, ಮಹಿಳೆಯರ ನಂಬಿಕೆ ಗಳಿಸಿ ಅವರೊಂದಿಗೆ ದೈಹಿಕ ಸಂಪರ್ಕ ಬೆಳೆಸುತ್ತಿದ್ದನು. ನಂತರ ಸಂತ್ರಸ್ತರಿಂದ ಹಣ ಹಾಗೂ ಚಿನ್ನಾಭರಣಗಳನ್ನು ಪಡೆದುಕೊಂಡು ಕೈಕೊಡುತ್ತಿದ್ದನು. ಸದ್ಯ ಐವರು ಮಹಿಳೆಯರು ಈತನ ವಿರುದ್ಧ ದೂರು ನೀಡಿದ್ದು, ವಂಚನೆಯ ವ್ಯಾಪ್ತಿ ಇನ್ನೂ ದೊಡ್ಡದಿರುವ ಸಾಧ್ಯತೆಯಿದೆ. ತನ್ನ ಸಂಸ್ಥೆಯಲ್ಲಿ 60ಕ್ಕೂ ಹೆಚ್ಚು ಉದ್ಯೋಗಿಗಳನ್ನು ಹೊಂದಿದ್ದ ಈತ, ಅಧಿಕಾರ ಮತ್ತು ಹಣದ ಆಮಿಷವನ್ನೊಡ್ಡುತ್ತಿದ್ದ ಎನ್ನಲಾಗಿದೆ.

ಬಲಿಜ ಸಂಘದಿಂದ ಶ್ರೀ ಯೋಗಿ ಕೈವಾರ ತಾತಯ್ಯ ಜಯಂತಿ

ಸಾಮಾಜಿಕ ಕಳಕಳಿಯ ಕೈವಾರ ತಾತಯ್ಯ

• **ಕೆಂಗೇರಿ:** ಕೈವಾರ ತಾತಯ್ಯ ಸಾಮಾಜಿಕ ಕಳಕಳಿ ಹೊಂದಿದ್ದ ಮಹಾನ್ ಪುರುಷ. ಇವರ ಆದರ್ಶವನ್ನು ಎಲ್ಲರೂ ಮೈಗೂಡಿಸಿಕೊಂಡು ಬಲಿಜ ಸಮುದಾಯದ ಏಳಿಗೆಗೆ ಶ್ರಮಿಸಬೇಕು ಎಂದು ಸಂಸದ ಪಿ.ಸಿ.ಮೋಹನ್ ಹೇಳಿದರು.

ಕೆಂಗೇರಿ ಉಪನಗರದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಯಶವಂತಪುರ ಕ್ಷೇತ್ರದ ಬಲಿಜ ಸಂಘದ ವತಿಯಿಂದ ಆಯೋಜಿಸಿದ್ದ ಶ್ರೀ ಯೋಗಿನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಅವರ 300 ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ, ಕೈವಾರ ತಾತಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿ, ಕೈವಾರ ತಾತಯ್ಯ ಜಯಂತಿಯನ್ನು ಹಿಂದೆ ಕೈವಾರದಲ್ಲಿ ಮಾತ್ರ ಆಚರಣೆ ಮಾಡಲಾಗುತ್ತಿತ್ತು ಎಂದರು.



ನಂತರ ಬಿಜೆಪಿ ಪಕ್ಷ ಅಧಿಕಾರದಲ್ಲಿದ್ದಾಗ ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿ, ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಚರಣೆ ಆಗಬೇಕು ಮತ್ತು ಬಲಿಜಿಗ ಸಮುದಾಯಕ್ಕೆ ಪ್ರತ್ಯೇಕ ನಿಗಮ ಮಂಡಳಿ ಸ್ಥಾಪನೆ ಆಗಬೇಕು ಎಂದು ಮನವಿ ಮಾಡಿದ, ನಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅನುಮೋದನೆ ನೀಡಿದರು. ಅಂದಿನಿಂದ ಎಲ್ಲಾ ಕಡೆ ಕೈವಾರ ತಾತಯ್ಯ ಜಯಂತಿ ಆಚರಣೆ ಮಾಡಲಾಗುತ್ತಿದೆ ಎಂದರು. ರಾಮೋಹಳ್ಳಿ ನವದುರ್ಗಾ ಪೀಠದ ಡಾ. ಶಾಕ್ಯ ಶಕ್ತಿ ಬಾಲ ಅಮ್ಮ ಸ್ವಾಮೀಜಿ ಮಾತನಾಡಿ, ಬಲಿಜ ಸಮುದಾಯದ ಎಲ್ಲರೂ ಪಕ್ಷ ಭೇದವಿಲ್ಲದೆ ತಮ್ಮ ವೈಮನಸ್ಸು ಮರೆತು, ನಮ್ಮ ಸಮಾಜ ಆರ್ಥಿಕವಾಗಿ, ರಾಜಕೀಯವಾಗಿ ಶೈಕ್ಷಣಿಕವಾಗಿ ಪ್ರಗತಿ ಹೊಂದಲು ಒಗ್ಗಟ್ಟಿನಿಂದ ಶ್ರಮಿಸಿದಾಗ ಮಾತ್ರ ಏಳಿಗೆ ಕಾಣಲು ಸಾಧ್ಯ ಎಂದರು. ಬಿಜೆಪಿ ರಾಜ್ಯ ರೈತ ಮೋರ್ಚಾ ಅಧ್ಯಕ್ಷ ಎಂ. ರುದ್ರೇಶ್, ಜಿಬಿಎ ಮಾಜಿ ಸದಸ್ಯ ರ.ಆಂಜನಪ್ಪ, ಬಿಜೆಪಿ ರಾಜ್ಯ ರೈತ ಮೋರ್ಚಾ ಅಧ್ಯಕ್ಷ ಎಂ.ರುದ್ರೇಶ್, ಉಪೇಂದ್ರ, ಮೋಹನ್ ಕುಮಾರ್, ಜೆ.ರಮೇಶ್, ಸಿ.ಎಂ.ಸಿ. ಸತ್ಯನಾರಾಯಣ, ಸ್ಟಾರ್ ನಾಗರಾಜ್ ಗೇರು ಪಾಳ್ಯ, ಮಹೇಶ್, ಲಕ್ಷ್ಮಣ ಹಾಗೂ ಮತ್ತಿತರರಿದ್ದರು.

ಕಾಮಗಾರಿ ಪೂರ್ಣಗೊಳಿಸದಿದ್ದರೆ ದಂಡ

• **ಬೆಂಗಳೂರು:** ಜಕ್ಕೂರು ರೈಲ್ವೇ ಸೇತುವೆ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸದಿದ್ದಲ್ಲಿ ಗುತ್ತಿಗೆದಾರರಿಗೆ ದಂಡ ವಿಧಿಸುವಂತೆ ಅಧಿಕಾರಿಗಳಿಗೆ ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪಿ.ಸುನೀಲ್ ಕುಮಾರ್ ಸೂಚಿಸಿದರು.

ಜಕ್ಕೂರು ರೈಲ್ವೇ ಸೇತುವೆ ಕಾಮಗಾರಿಯನ್ನು ಪರಿಶೀಲಿಸಿದ ಅವರು, ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕಾಮಗಾರಿಯ ಪ್ರಗತಿ, ಬಾಕಿ ಇರುವ ಕೆಲಸಗಳು ಹಾಗೂ ಎದುರಾಗುತ್ತಿರುವ ತಾಂತ್ರಿಕ ಅಡಚಣೆಗಳ ಕುರಿತು ಸ್ಥಳದಲ್ಲೇ ಪರಿಶೀಲನೆ ನಡೆಸಿ ಸಂಬಂಧಿತ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು.



ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸದಿರುವುದಕ್ಕೆ ಸಂಬಂಧಿಸಿದ ಗುತ್ತಿಗೆದಾರರು ಹಾಗೂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಸದರಿ ಕಾಮಗಾರಿಯನ್ನು ಏ. 20 ರೊಳಗೆ ಪೂರ್ಣಗೊಳಿಸಲು ಸೂಚನೆ ನೀಡಿದರು. ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳ್ಳದಿದ್ದಲ್ಲಿ ಗುತ್ತಿಗೆದಾರರಿಗೆ ದಂಡ ವಿಧಿಸಲು ನಿರ್ದೇಶಿಸಿದರು.

ಆಸ್ತಿ ಸ್ವಾಧೀನಪಡಿಸಿಕೊಳ್ಳಲು ಆದೇಶ | ಜಿಬಿಎಯಿಂದ ಕಟ್ಟುನಿಟ್ಟಿನ ಕ್ರಮ

ದೀರ್ಘಕಾಲದ ಆಸ್ತಿ ತೆರಿಗೆ ಬಾಕಿ ವಸೂಲಿಗೆ ಸೂಚನೆ

• **ಬೆಂಗಳೂರು:** ದೀರ್ಘಕಾಲದಿಂದ ಬಾಕಿಯುಳಿದಿರುವ ಆಸ್ತಿ ತೆರಿಗೆ ವಸೂಲಾತಿಗೆ ಪರಿಣಾಮಕಾರಿ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ, ನಗರ ಪಾಲಿಕೆಗಳು ದೀರ್ಘಕಾಲದ ಆಸ್ತಿ ತೆರಿಗೆ ಬಾಕಿದಾರರ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲಿವೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ತಿಳಿಸಿದೆ. ಈ ಬಗ್ಗೆ ಮಾಧ್ಯಮ ಪ್ರಕಟಣೆ ನೀಡಿರುವ ಜಿಬಿಎ, ದೀರ್ಘಕಾಲದಿಂದ ಆಸ್ತಿ ತೆರಿಗೆ ಬಾಕಿದಾರರ ವಿರುದ್ಧ ಕೊನೆಯ ಹಂತದ ಕ್ರಮ ಜಾರಿಗೊಳಿಸಲು ಪಾಲಿಕೆಗಳು ಮುಂದಾಗಿವೆ. ಬೇಡಿಕೆ ನೋಟಿಸ್ ಜಾರಿ, ಆಸ್ತಿ ಅಟ್ಯಾಚ್ಮೆಂಟ್, ಸಾರ್ವಜನಿಕ ಹರಾಜು ಮೂಲಕ ವಸೂಲಾತಿ ಸೇರಿದಂತೆ ಕಾನೂನುಬದ್ಧ ಕ್ರಮಗಳನ್ನು ಹಲವು ಬಾರಿ ಕೈಗೊಂಡಿದ್ದರೂ, ಕೆಲವು ಪ್ರಕರಣದಲ್ಲಿ ಬಾಕಿ ಪಾವತಿ ಆಗದೇ ಇರುವುದರಿಂದ ಹಾಗೂ ಹರಾಜು ಪ್ರಕ್ರಿಯೆಯಲ್ಲಿ ಯಾರೂ ಭಾಗವಹಿಸದಿರುವುದರಿಂದ ಸಮಸ್ಯೆಗಳು ಬಗೆಹರಿಯದೆ ಉಳಿದಿವೆ. ಕಾನೂನುಬದ್ಧ ಎಲ್ಲಾ ವಸೂಲಾತಿ ಕ್ರಮಗಳು ಪೂರ್ಣಗೊಂಡು ಹರಾಜು ಪ್ರಕ್ರಿಯೆಗಳು ವಿಫಲವಾದಲ್ಲಿ, ನಗರ ಪಾಲಿಕೆಗಳು ಈಗ ಸೂಚಿಸಲಾದ ಅಧಿಸೂಚಿತ ಬೆಲೆಗೆ ಆಸ್ತಿಗಳನ್ನು ಸ್ವತಃ ಖರೀದಿಸುವ ಕ್ರಮ ಕೈಗೊಳ್ಳಲಿವೆ ಎಂದು ಜಿಬಿಎ ಮಾಹಿತಿ ನೀಡಿದೆ. ಎಲ್ಲಾ ಕಾನೂನುಬದ್ಧ ಪ್ರಕ್ರಿಯೆ ಪೂರ್ಣಗೊಂಡ ನಂತರ ಜಾರಿಗೊಳಿಸಲಾಗುವುದು.



ಬಾಕಿದಾರರಿಗೆ ಅಂತಿಮ ಅವಕಾಶ

ಬಾಕಿದಾರರಿಗೆ ಒಂದು ತಿಂಗಳ ಅಂತಿಮ ಅವಧಿಯನ್ನು ನೀಡಿ, ಬಡ್ಡಿ ಸೇರಿದಂತೆ ಎಲ್ಲಾ ಬಾಕಿ ಮೊತ್ತವನ್ನು ಪಾವತಿಸಲು ಅವಕಾಶ ನೀಡಲಾಗುತ್ತದೆ. ಈ ಅವಧಿಯಲ್ಲಿ ಪಾವತಿ ಮಾಡಿದಲ್ಲಿ ಸ್ವಾಧೀನ ಕ್ರಮವನ್ನು ಹಿಂತೆಗೆದುಕೊಳ್ಳಲಾಗುತ್ತದೆ ಮತ್ತು ಆಸ್ತಿಯನ್ನು ಹಿಂತಿರುಗಿಸಲಾಗುತ್ತದೆ. ನಾಗರಿಕರು ತಮ್ಮ ಆಸ್ತಿ ತೆರಿಗೆ ಬಾಕಿಗಳನ್ನು ಸಮಯಕ್ಕೆ ಸರಿಯಾಗಿ ಪಾವತಿಸಿ, ಬಲವಂತದ ವಸೂಲಾತಿ ಕ್ರಮಗಳನ್ನು ತಪ್ಪಿಸಿಕೊಳ್ಳುವಂತೆ ಜಿಬಿಎ ಮನವಿ ಮಾಡಿದೆ.

ಉದ್ಯೋಗ ಕೊಡಿಸುವುದಾಗಿ ಕೋಟ್ಯಂತರ ರೂ.ವಂಚನೆ

ಸಿಸಿಬಿ ಪೊಲೀಸರಿಂದ ದಂಪತಿ ಸೆರೆ

• **ಬೆಂಗಳೂರು:** ನ್ಯಾಯಾಲಯದಲ್ಲಿ ಸರ್ಕಾರಿ ಉದ್ಯೋಗ ಕೊಡಿಸುವುದಾಗಿ ನಂಬಿಸಿ ನೂರಾರು ನಿರುದ್ಯೋಗಿಗಳಿಗೆ ಕೋಟ್ಯಂತರ ರೂಪಾಯಿ ಹಣ ವಂಚಿಸಿದ್ದ ದಂಪತಿಯನ್ನು ನಗರದ ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ಮೂಲದ ಜೇಸನ್ ಡಿಸೋಜಾ ಮತ್ತು ಲವೀನಾ ಬಂಧಿತ ಆರೋಪಿಗಳು. ಬಂಧಿತ ದಂಪತಿ ಪ್ರಮುಖವಾಗಿ ನಿರುದ್ಯೋಗಿಗಳು ಹಾಗೂ ಕಡಿಮೆ ವೇತನಕ್ಕೆ ಖಾಸಗಿ ಕಂಪನಿಗಳಲ್ಲಿ ದುಡಿಯುವವರನ್ನು ಗುರಿಯಾಗಿಸಿಕೊಂಡಿದ್ದರು. ನ್ಯಾಯಾಲಯಗಳಲ್ಲಿ ಡಿ-ಗ್ರೂಪ್ ಹುದ್ದೆಯನ್ನು ಕೊಡಿಸುವುದಾಗಿ ನಂಬಿಸಿ, ಒಬ್ಬೊಬ್ಬರಿಂದ 10 ಲಕ್ಷದಿಂದ 25 ಲಕ್ಷ ರೂ. ವರೆಗೆ ಹಣ ವಸೂಲಿ ಮಾಡುತ್ತಿದ್ದರು. ಈ ಮೂಲಕ ಸುಮಾರು 25 ಕೋಟಿ ರೂ.ಗೂ ಅಧಿಕ ಹಣವನ್ನು ದೋಚಿದ್ದಾರೆ ಎಂಬ ಆಘಾತಕಾರಿ ಅಂಶ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ನ್ಯಾಯಾಧೀಶರ ಸಹಿ ಕೂಡ ನಕಲಿ: ಅಭ್ಯರ್ಥಿಗಳಿಗೆ ನ್ಯಾಯಾಧೀಶರ ಸಹಿ ಇರುವ ನಕಲಿ ನೇಮಕಾತಿ ಆದೇಶ ಪತ್ರಗಳನ್ನು ನೀಡುತ್ತಿದ್ದರು. ಏಜೆಂಟ್‌ಗಳ ಮೂಲಕ ಜನರನ್ನು ಸಂಪರ್ಕಿಸಿ, ಐಷಾರಾಮಿ ಹೋಟೆಲ್‌ಗಳಲ್ಲಿ ದಾಖಲೆ ಪರಿಶೀಲನೆಯ ನಾಟಕವಾಡಿ ನಕಲಿ ಆಫರ್ ಲೆಟರ್‌ಗಳನ್ನು ಹಸ್ತಾಂತರಿಸುತ್ತಿದ್ದರು. ಉದ್ಯೋಗದ ಬಗ್ಗೆ ಸಂತ್ರಸ್ತರು ಪ್ರಶ್ನಿಸಿದಾಗ ಕಾಲಹರಣ ಮಾಡಿ, ನಂತರ ನಾಪತ್ತೆಯಾಗುತ್ತಿದ್ದರು.

ಹಳೆಯ ಚಾಳಿ ಬಿಡದ ವಂಚಕರು: ವಿಶೇಷವೆಂದರೆ, ಈ ದಂಪತಿ ಹೊಸಬರೇನಲ್ಲ, 2024ರಲ್ಲಿಯೂ ಇದೇ ರೀತಿಯ ವಂಚನೆ ಪ್ರಕರಣದಲ್ಲಿ ಜೈಲು ಸೇರಿದ್ದರು. ಆದರೆ, ಜಾಮೀನಿನ ಮೇಲೆ ಹೊರಬಂದ ನಂತರವೂ ಕೃತ್ಯ ಮುಂದುವರೆಸಿದ್ದರು. ಜೈಲಿನಿಂದ ಹೊರಬರುತ್ತಿದ್ದಂತೆಯೇ ಮತ್ತೆ ಅದೇ ಹಳೆಯ ವಂಚನೆಯ ದಂಧೆಯನ್ನು ಮುಂದುವರಿಸಿ, ಸಂತ್ರಸ್ತರು ನೀಡಿದ ಸಾಲು ಸಾಲು ದೂರುಗಳ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿದ ಸಿಸಿಬಿ ಪೊಲೀಸರು, ಇದೀಗ ಇಬ್ಬರನ್ನೂ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ರಾಮಚಂದ್ರಸ್ವಾಮಿ ಜಾತ್ರೋತ್ಸವ

• **ಕೆಂಗೇರಿ:** ಬೆಂಗಳೂರು ದಕ್ಷಿಣ ತಾಲ್ಲೂಕು ರಾಮೋಹಳ್ಳಿಯಲ್ಲಿ ಇತಿಹಾಸ ಪ್ರಸಿದ್ಧ ರಾಮಚಂದ್ರಸ್ವಾಮಿ ದೇವರ ಬ್ರಹ್ಮ ರಥೋತ್ಸವ ಹಾಗೂ ಜಾನಪದ ಜಾತ್ರೆ, ಸಡಗರ, ಸಂಭ್ರಮದಿಂದ ಅದ್ದೂರಿಯಾಗಿ ನೆರವೇರಿತು.

ಸಾವಿರಾರು ಭಕ್ತರು ಇದಕ್ಕೆ ಸಾಕ್ಷಿಯಾಗಿದ್ದರು. ರಾಮಚಂದ್ರಸ್ವಾಮಿ, ಆಂಜನೇಯ, ಸೀತಾ, ಲಕ್ಷ್ಮಣ, ಭರತ, ಶತ್ರುಘ್ನ ದೇವರುಗಳ ವಿಗ್ರಹಗಳನ್ನಿಟ್ಟು ಪೂಜೆ ಸಲ್ಲಿಸುವುದರ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಭಕ್ತಾದಿಗಳು ಜಯಘೋಷದೊಂದಿಗೆ ರಥವನ್ನು ಎಳೆದು ಹೂವು, ಬಾಳೆ ಹಣ್ಣುಗಳನ್ನು ಎಸೆಯುವುದರ ಮೂಲಕ ಕೃತಾರ್ಥರಾದರು.



ನಾಡಿನ ವಿವಿಧ ಜಾನಪದ ಕಲಾ ತಂಡಗಳಾದ ಪೂಜಾ ಕುಣಿತ, ಪಟ್ಟದ ಕುಣಿತ ಸೇರಿದಂತೆ ಹಲವು ಪ್ರದರ್ಶನಗಳು ಜನರ ಗಮನ ಸೆಳೆದವು.

ಶಾಸಕ ಎಸ್.ಟಿ.ಸೋಮಶೇಖರ್, ರಾಜ್ಯ ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಡಿ. ಹನುಮಂತಯ್ಯ, ರಾಮೋಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ವಿ. ವೇಣುಗೋಪಾಲ್, ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಆರ್.ಪಿ. ಪ್ರಕಾಶ್, ಜಿ.ಮಹೇಶ್, ಚೇತನ್ ಸೇರಿದಂತೆ ಇತರರಿದ್ದರು.

ಅಂತರಶಿಸ್ತೀಯ ಯೋಜನೆ ಆಧಾರಿತ ಕಲಿಕೆ ಕಾರ್ಯಾಗಾರ

ಪರಿಣತರಿಗೆ ಉದ್ಯೋಗ ಸುಲಭ

• **ಬೆಂಗಳೂರು:** ಇಂಜಿನಿಯರಿಂಗ್ ವಿದ್ಯಾರ್ಥಿಗಳು ಕೇವಲ ಒಂದು ವಿಷಯದಲ್ಲಿ ಮಾತ್ರ ಪರಿಣಿತಿ ಹೊಂದಿದ್ದರೆ ಸಾಲದು. ಅಂತರಶಿಸ್ತೀಯವಾಗಿ ಎಲ್ಲ ವಿಷಯಗಳ ಬಗ್ಗೆ ಜ್ಞಾನವನ್ನು ಹೊಂದಿದಾಗ ಮಾತ್ರ ಉದ್ಯೋಗಾವಕಾಶಗಳು ಸುಲಭವಾಗಿ ಸಿಗಲಿವೆ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಇಂಜಿನಿಯರಿಂಗ್ ವಿಭಾಗ ಡೀನ್ ಡಾ. ಎಚ್. ಎ.ಸಂಜಯ್ ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಎರಾ ಫೌಂಡೇಷನ್ ಸಹಾಯದೊಂದಿಗೆ ವೆಂಕಟೇಶ್ವರ ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ (ಎಸ್‌ವಿಸಿಇ) ಅಂತರಶಿಸ್ತೀಯ ಯೋಜನೆ ಆಧಾರಿತ ಕಲಿಕೆ ಕುರಿತು ಆಯೋಜಿಸಿದ್ದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಪ್ರಾಯೋಗಿಕ ಶಿಕ್ಷಣದ ಬಗ್ಗೆ ಹೆಚ್ಚು ಗಮನ ನೀಡಬೇಕು. ಇಂದು ಪಠ್ಯಪುಸ್ತಕದ ಬೋಧನೆಗಿಂತ ವಿದ್ಯಾರ್ಥಿಗಳು ಪ್ರಯೋಗಾಲಯಗಳಲ್ಲಿ ಕಲಿಯುವ ವಿಷಯಗಳು ಹೆಚ್ಚು ಮುಖ್ಯವಾಗುತ್ತವೆ. ಹೀಗಾಗಿ ಬೋಧಕರು ಸಹ ವಿದ್ಯಾರ್ಥಿಗಳನ್ನು ಹೆಚ್ಚಾಗಿ ಪ್ರಾಯೋಗಿಕ ಶಿಕ್ಷಣಕ್ಕೆ ಒಳಪಡಿಸಬೇಕು ಎಂದರು.

ವಿಟಿಯು ಕಾರ್ಯಕಾರಿ ಪರಿಷತ್‌ನ ಸದಸ್ಯ ಡಾ. ಬಿ.ಕರುಣಾಕರ ರೈ ಮಾತನಾಡಿ, ನಮ್ಮ ಪಾಲಕರ ಕಾಲದಲ್ಲಿ ಇಂಜಿನಿಯರ್ ಎಂದರೆ, ಕನಿಷ್ಠ ತಮ್ಮ ಮನೆಗಳಲ್ಲಿ ಎದುರಾಗುತ್ತಿದ್ದ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಅವರೇ ಕಂಡುಕೊಳ್ಳುತ್ತಿದ್ದರು. ಇಂದು ಕಾಲ ಬದಲಾಗಿದೆ. ಬಹುತೇಕ ವಿದ್ಯಾರ್ಥಿಗಳಿಗೆ ಮನೆಯಲ್ಲಿ ವಿದ್ಯುತ್ ಕಡಿತವಾದಾಗ ಸಣ್ಣ ಫ್ಯೂಸ್ ಪರಿಶೀಲಿಸುವುದಕ್ಕೂ ಬಾರದೇ ಇರುವುದು ದುರಂತವಾಗಿದೆ. ಇದಕ್ಕೆ ಕಾರಣ ಇಂದಿನ ವಿದ್ಯಾರ್ಥಿಗಳು ಒಂದೇ ವಿಭಾಗಕ್ಕೆ ಅಂಟಿಕೊಂಡಿರುವುದಾಗಿದೆ. ಇದರಿಂದ ವಿದ್ಯಾರ್ಥಿಗಳು ಹೊರಬರಬೇಕಿದೆ ಎಂದರು.



ಈ ಕಾರ್ಯಕ್ರಮದಲ್ಲಿ ವಿಟಿಯು ಬೆಂಗಳೂರು ಪ್ರಾದೇಶಿಕ ಕಚೇರಿಯ ನಿರ್ದೇಶಕ ಡಾ.ಎಚ್.ಆರ್. ಸುದರ್ಶನ ರೆಡ್ಡಿ, ವಿಟಿಯು ಕಾರ್ಯಕಾರಿ ಪರಿಷತ್‌ನ ಸದಸ್ಯ ಪ್ರೊ.ಕೇಶವಮೂರ್ತಿ, ವಿಶೇಷಾಧಿಕಾರಿ ಡಾ.ಹರೀಶ್ ಬೆಂಡಿಗೇರಿ ಸೇರಿದಂತೆ ಇತರರಿದ್ದರು.

ಇಂದು ನಗರದಲ್ಲಿ...

- ಭೂ ವಿಜ್ಞಾನ ಮತ್ತು ಕ್ರಿಯೆಯ ತಿಳುವಳಿಕೆಗಾಗಿ ಯುಗಾ ಯೂತ್ ಉದ್ಘಾಟನೆ, ಸ್ಥಳ: ಭಾರತೀಯ ವಿದ್ಯಾ ಭವನ, ಬೆಳಗ್ಗೆ 10.00
- ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ -2026, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಗ್ಗೆ 11.00
- ರಾಮಾಯಣದ ಜೀವನ ಮೌಲ್ಯಗಳು ಕುರಿತು ಉಪನ್ಯಾಸ, ಸ್ಥಳ: ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಿಮಂಡಳಿ ಟ್ರಸ್ಟ್, ಸಂಜೆ 6.30

ಕಿರುಸುದ್ದಿ

ವಯಸ್ಸು 60 ಆದ್ರೇಲೂ ಆಡ್ತಾರಂತೆ ಧೋನಿ!

• **ಚೆನ್ನೈ:** ವಯಸ್ಸು 60 ಆದ್ರೇಲೂ ಐಪಿಎಲ್‌ನಲ್ಲಿ ಧೋನಿ ಆಡ್ತಾರಂತೆ! ಹೌದು, ಐಪಿಎಲ್ ಪೂರ್ವಭಾವಿಯಾಗಿ ನಡೆದ ಸಿಎಸ್‌ಕೆ ರೋರ್ ಕಾರ್ಯಕ್ರಮದಲ್ಲಿ ನಟ ಶಿವಕಾರ್ತಿಕೇಯನ್, ನೀವು ಐಪಿಎಲ್‌ನಿಂದ ನಿವೃತ್ತಿ ಪಡೆಯುವಂತೆ ಕಾಣಿಸುತ್ತಿಲ್ಲ, ವಯಸ್ಸು 60 ದಾಟಿದ ಮೇಲೂ ಸಿಎಸ್‌ಕೆ ಪರ ಆಡುತ್ತೀರಾ? ಎಂದು ಪ್ರಶ್ನಿಸಿದ್ದರು. ಇದಕ್ಕೆ ಧೋನಿ ನಗುತ್ತಲೇ, ತುಂಬಾ ಕಷ್ಟ ಎಂದಿದ್ದಾರೆ. ನಿಮ್ಮ ಫಿಟ್ನೆಸ್ ನೋಡಿದರೆ ಹಾಗೆ ಅನಿಸುತ್ತಿಲ್ಲ ಎಂದು ಶಿವಕಾರ್ತಿಕೇಯನ್ ಹೇಳಿದ್ದು, ಖಂಡಿತಾ ಪ್ರಯತ್ನಿಸುತ್ತೇನೆ ಎಂದು ಧೋನಿ ಪ್ರತಿಕ್ರಿಯೆ ನೀಡಿದ್ದಾರೆ. ಧೋನಿ ಉತ್ತರ ಕೇಳುತ್ತಿದ್ದಂತೆ ಇಡೀ ಚೆಪಾಕ್ ಮೈದಾನದಲ್ಲಿ ಅಭಿಮಾನಿಗಳ ಹರ್ಷೋದ್ಗಾರ ಮುಗಿಲುಮುಟ್ಟಿತ್ತು.

ಮಯಾಮಿ ಓಪನ್: ಹೊರಬಿದ್ದ ಅಲ್ಕರಾಜ್

• **ಮಯಾಮಿ:** ವಿಶ್ವದ ಅಗ್ರ ಶ್ರೇಯಾಂಕದ ಟೆನಿಸಿಗ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಮಯಾಮಿ ಓಪನ್ 2026ರ ಮೂರನೇ ಸುತ್ತಿನಲ್ಲೇ ಹೊರಬಿದ್ದು ದೊಡ್ಡ ಆಘಾತಕ್ಕೊಳಗಾಗಿದ್ದಾರೆ. ಭಾನುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಸೆಬಾಸ್ಟಿಯನ್ ಕೋರ್ಡಾ ವಿರುದ್ಧ 3-6, 7-5, 4-6 ಸೆಟ್‌ಗಳ ಅಂತರದಿಂದ ಸೋಲುಂಡು ಪಂದ್ಯಾವಳಿಯಿಂದ ಹೊರಬಿದ್ದಿದ್ದಾರೆ. ಕಳೆದ ವಾರ ನಡೆದಿದ್ದ ಇಂಡಿಯನ್ ವೆಲ್ಸ್ ಸೆಮಿಫೈನಲ್‌ನಲ್ಲಿ ಡೇನಿಲ್ ಮೆಡ್ವೆಡೆವ್ ಅವರ ವಿರುದ್ಧ ಸೋಲುಂಡು ಹೊರಬಿದ್ದಿದ್ದರು.

ಜಿಮ್ನಾಸ್ಟ್ ಹರ್ಷಿತ್‌ಗೆ ಸ್ವರ್ಣ

• **ಹೊಸದಿಲ್ಲಿ:** ಜರ್ಮನಿಯ ಸ್ಟಟ್‌ಗಾರ್ಟ್‌ನಲ್ಲಿ ನಡೆದ ಪ್ರತಿಷ್ಠಿತ ಅಂತಾರಾಷ್ಟ್ರೀಯ ಜಿಮ್ನಾಸ್ಟಿಕ್ ಸ್ಪರ್ಧೆ ಡಿಟಿಬಿ ಪೋಕಲ್ 2026ರಲ್ಲಿ ಭಾರತೀಯ ಜಿಮ್ನಾಸ್ಟ್ ಹರ್ಷಿತ್ ದಾಮೋದರನ್ ಸ್ವರ್ಣ ಪದಕ ಗೆದ್ದುಕೊಂಡಿದ್ದಾರೆ. ಜೂನಿಯರ್ ವಿಶ್ವಕಪ್ ಪುರುಷರ ಪ್ಲೋರ್ ವಿಭಾಗದಲ್ಲಿ ಒಟ್ಟು 13.666 ಅಂಕಗಳನ್ನು ಸಂಪಾದಿಸುವ ಮೂಲಕ ಸ್ವರ್ಣ ಪದಕಕ್ಕೆ ಮುತ್ತಿಟ್ಟಿದ್ದಾರೆ. ಬಲಿಷ್ಠ ಅಂತಾರಾಷ್ಟ್ರೀಯ ಸ್ಪರ್ಧಿಗಳ ನಡುವೆ ನಿಖರ, ಶಕ್ತಿ ಮತ್ತು ಸಮತೋಲನದಿಂದ ಕೂಡಿದ ಪ್ರದರ್ಶನ ನೀಡಿ ಗಮನಸೆಳೆದ ಹರ್ಷಿತ್ ಭಾರತೀಯ ಜಿಮ್ನಾಸ್ಟಿಕ್ ಇತಿಹಾಸದಲ್ಲಿ ಮಹತ್ವದ ಸಾಧನೆಗೈದಿದ್ದಾರೆ. ಹರ್ಷಿತ್ ಸಾಧನೆಯಿಂದ ಭಾರತೀಯ ಜಿಮ್ನಾಸ್ಟಿಕ್ ವಿಭಾಗ ಮುನ್ನೆಲೆಗೆ ಬಂದಿದೆ.

ಕ್ಯಾಂಡಿಡೇಟ್ಸ್ ಕಪ್‌ನಿಂದ ಹೊರಗುಳಿದ ಹಂಪಿ

• **ಹೊಸದಿಲ್ಲಿ:** ಮಧ್ಯಪ್ರಾಚ್ಯ ಯುದ್ಧ ಹಿನ್ನೆಲೆ ವೈಯಕ್ತಿಕ ಸುರಕ್ಷತೆಯ ಕಾರಣಗಳನ್ನು ನೀಡಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ಅವರು ಸೈಪ್ರಸ್‌ನಲ್ಲಿ ನಡೆಯಲಿರುವ 2026ರ ಫಿಡೆ ಮಹಿಳಾ ಕ್ಯಾಂಡಿಡೇಟ್ಸ್ ಪಂದ್ಯಾವಳಿಯಿಂದ ಹಿಂದೆ ಸರಿದಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಪ್ರಕಟಣೆ ಮೂಲಕ ತಮ್ಮ ನಿರ್ಧಾರವನ್ನು ಹಂಪಿ ತಿಳಿಸಿದರು.

ವಿದೇಶಿ ಕ್ರಿಕೆಟಿಗರಿಗೆ ಪಾಕ್ ಉಗ್ರ ಸಂಘಟನೆ ಬೆದರಿಕೆ

• **ಇಸ್ಲಾಮಾಬಾದ್:** ಪಿಎಸ್‌ಎಲ್ 2026ರ ಆವೃತ್ತಿಯಲ್ಲಿ ಪಾಲ್ಗೊಂಡರೆ ಪಂದ್ಯಾವಳಿಗೆ ಆಡ್ಡಿಪಡಿಸುವುದಾಗಿ ವಿದೇಶಿ ಆಟಗಾರರಿಗೆ ಪಾಕಿಸ್ತಾನದ ಉಗ್ರ ಸಂಘಟನೆಯೊಂದು ಬೆದರಿಕೆಯೊಡ್ಡಿದೆ. ಆಸ್ಟ್ರೇಲಿಯಾದ ಡೇವಿಡ್ ವಾರ್ನರ್, ಸ್ಟೀವ್ ಸ್ಮಿತ್ ಹಾಗೂ ನ್ಯೂಜಿಲೆಂಡ್ ಆಟಗಾರ ಡೇರಿಲ್ ಮಿಚೆಲ್ ಅವರಿಗೆ ಉಗ್ರ ಸಂಘಟನೆ ಜಮಾತ್-ಉಲ್-ಅಹ್ರಾರ್ ಟೂರ್ನಿಯಲ್ಲಿ ಪಾಲ್ಗೊಳ್ಳದಂತೆ ಬೆದರಿಕೆಯೊಡ್ಡಿದೆ. ಮಧ್ಯಪ್ರಾಚ್ಯ ಯುದ್ಧ ಹಿನ್ನೆಲೆ ಪಾಕ್ ತೈಲ, ಅನಿಲ ಕೊರತೆ ಸಹಿತ ಆರ್ಥಿಕ ಸಂಕಷ್ಟ ಎದುರಿಸುತ್ತಿರುವಾಗ ಮನರಂಜನೆಗಿದು ಸೂಕ್ತವಾದ ಸಮಯವಲ್ಲ ಎಂದು ಜಮಾತುಲ್ ಪ್ರಕಟಣೆ ಹೊರಡಿಸಿದೆ. ಬೆದರಿಕೆಯ ಬೆನ್ನಲ್ಲೇ ಸ್ಮಿತ್ ಲಾಹೋರ್ ವಿಮಾನ ನಿಲ್ದಾಣದಲ್ಲಿ ಬಂದಿಳಿದಿದ್ದಾರೆ.

ಐಪಿಎಲ್ ಉದ್ಘಾಟನಾ ಪಂದ್ಯಕ್ಕೆ ಭರ್ಜರಿ ತಯಾರಿ | ಮೊದಲ ಅಭ್ಯಾಸ ಪಂದ್ಯದಲ್ಲಿ ಒಟ್ಟು 450+ ರನ್

ಅಭ್ಯಾಸ ಪಂದ್ಯದಲ್ಲಿ ಆರ್‌ಸಿಬಿ ರನ್ ಮಳೆ



• **ಬೆಂಗಳೂರು:** ಐಪಿಎಲ್ 19ನೇ ಆವೃತ್ತಿ ಆರಂಭವಾಗಲು ಇನ್ನು ನಾಲ್ಕು ದಿನಗಳಷ್ಟೇ ಉಳಿದಿದ್ದು, ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡ ಭರ್ಜರಿ ತಯಾರಿ ನಡೆಸುತ್ತಿದೆ. ಇದರ ಭಾಗವಾಗಿ ನಡೆದ ಮೊದಲ ಅಭ್ಯಾಸ ಪಂದ್ಯದಲ್ಲಿ ಬ್ಯಾಟರ್‌ಗಳು ರನ್ ಮಳೆಯನ್ನೇ ಸುರಿಸಿದ್ದಾರೆ.

ಅಭ್ಯಾಸ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಉತ್ತಮ ಲಯದಲ್ಲಿ ಕಾಣಿಸಿಕೊಂಡಿದ್ದು, ಇತರ ಎಲ್ಲಾ ಬ್ಯಾಟರ್‌ಗಳು ಸ್ಫೋಟಕ ಬ್ಯಾಟಿಂಗ್ ಪ್ರದರ್ಶನದೊಂದಿಗೆ ಗಮನಸೆಳೆದಿದ್ದಾರೆ. ಈ ಆವೃತ್ತಿಯ ಹರಾಜಿನಲ್ಲಿ ರೂ. 7 ಕೋಟಿಗೆ ಖರೀದಿಸಲ್ಪಟ್ಟ ವೆಂಕಟೇಶ್ ಅಯ್ಯರ್ ನೇತೃತ್ವದ ಟೀಮ್ ವೆಂಕಿ ಮತ್ತು ಆಲ್‌ರೌಂಡರ್ ಕೃಣಾಲ್ ಪಾಂಡ್ಯ ನಾಯಕತ್ವದ ಟೀಮ್ ಕೃಣಾಲ್ ತಂಡಗಳು ಎದುರಾದವು.

ಮೊದಲು ಬ್ಯಾಟ್ ಮಾಡಿದ ಟೀಮ್ ವೆಂಕಿ ಪರ, ಜಿತೇಶ್ ಶರ್ಮಾ 37 ಎಸೆತ ಗಳಲ್ಲಿ ಸ್ಫೋಟಕ 81 ರನ್ ಚಚ್ಚಿದರೆ, ವಿರಾಟ್ ಕೊಹ್ಲಿ 12 ಎಸೆತ ಗಳನ್ನು ಎದುರಿಸಿ 29 ರನ್ ಬಾರಿಸಿದರು. ಇವರನ್ನು ಹೊರತುಪಡಿಸಿದರೆ, ಟಿಮ್ ಡೇವಿಡ್ 14 ಎಸೆತಗಳಿಂದ 36 ರನ್ ಹೊಡೆದರು. ನಾಯಕ ವೆಂಕಟೇಶ್ 16 ಎಸೆತಗಳಿಂದ 36 ರನ್ ಹೊಡೆದರು. ಇವರ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನದಿಂದ ಟೀಮ್ ವೆಂಕಿ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 234 ರನ್ ಪೇರಿಸಿತು.

235 ರನ್ ಸವಾಲನ್ನು ಬೆನ್ನತ್ತಿದ ಟೀಮ್ ಕೃಣಾಲ್ ಪರ, ಆರ್‌ಸಿಬಿ ಹನ್ನೊಂದರ ಬಳಗ ಸೇರಬೇಕೆಂಬ ಗುರಿ ಹೊಂದಿರುವ ಕರ್ನಾಟಕ ನಾಯಕ ದೇವದತ್ ಪಡಿಕ್ಕಲ್ 33 ಎಸೆತಗಳಿಂದ 63 ರನ್ ಚಚ್ಚಿದರು. ನಾಯಕ ಕೃಣಾಲ್ 33 ಎಸೆತಗಳಿಂದ 58 ರನ್ ಕೊಡುಗೆ ನೀಡಿದರು. ಆದರೆ ಆರ್‌ಸಿಬಿ ನಾಯಕ ರಜತ್ ಪಾಟಿದಾರ್ ತಮ್ಮ ವಿಸ್ಫೋಟಕ ಬ್ಯಾಟಿಂಗ್‌ನಿಂದ ಗಮನಸೆಳೆದರು. ಕೇವಲ 25 ಎಸೆತಗಳಿಂದ 74 ರನ್ ಚಚ್ಚಿ ಬಿಸಾಕುವ ಮೂಲಕ ಪಾಟಿದಾರ್ ಟೀಮ್ ಕೃಣಾಲ್ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.



ಒಟ್ಟಿನಲ್ಲಿ ಉದ್ಘಾಟನಾ ಪಂದ್ಯವನ್ನಾಡಲು ತುದಿಗಾಲಿನಲ್ಲಿ ಅಭ್ಯಾಸ ನಡೆಸುತ್ತಿರುವ ಆರ್‌ಸಿಬಿ ಬ್ಯಾಟರ್‌ಗಳೆಲ್ಲರೂ ಸ್ಫೋಟಕ ಲಯದಲ್ಲಿ ಕಾಣಿಸಿಕೊಂಡಿದ್ದಾರೆ. ಮಾ.28ರಂದು ಎಂ.ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಐಪಿಎಲ್ 2026 ಉದ್ಘಾಟನಾ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಆರ್‌ಸಿಬಿ ಎದುರಿಸಲಿದೆ.

ಹಿಟ್ಸ್ ಹೊರಬಂದು ಆಡುವುದು ಮುಖ್ಯ: ಜಿತೇಶ್‌ನಂತಹ ಬ್ಯಾಟರ್‌ಗಳು 35 ಎಸೆತಗಳನ್ನು ಎದುರಿಸಿ 80ಕ್ಕಿಂತ ಅಧಿಕ ರನ್ ಗಳಿಸುವುದು ಮತ್ತು ರಜತ್ ಅವರ ಸುಂದರ ಹೊಡೆತಗಳನ್ನು ನೋಡಲು ಖುಷಿ ಸಿಗುತ್ತದೆ. ನಿಜಕ್ಕೂ ಫಲಪ್ರದ ಅಭ್ಯಾಸ ನಡೆಸಿದ್ದೇವೆ. ಇಂತಹಾ ಸ್ಪರ್ಧಾತ್ಮಕವಾದ ಪರಿಸ್ಥಿತಿಯಲ್ಲಿ ನೆಟ್ಸ್‌ನಿಂದ ಹೊರಬಂದು ಅಭ್ಯಾಸ ನಡೆಸುವುದು ಬಹಳ ಮುಖ್ಯ ಎಂದು ಆರ್‌ಸಿಬಿ ಮುಖ್ಯ ಕೋಚ್ ಆ್ಯಂಡಿ ಫ್ಲವರ್ ಹೇಳಿದ್ದಾರೆ.

ಯುವ ಬೌಲರ್ಸ್ ಬಗ್ಗೆ ಫ್ಲವರ್ ಮೆಚ್ಚುಗೆ: ಯುಪಿ ಟಿ20 ಲೀಗ್‌ನಲ್ಲಿ ಲಖನೌ ಪರ ಆಡಿದ್ದ ಅಭಿನಂದನ್ ಸಿಂಗ್‌ರನ್ನು 2026ರ ಹರಾಜಿನಲ್ಲಿ ಆರ್‌ಸಿಬಿ ಖರೀದಿಸಿತ್ತು. ಅಭಿನಂದನ್ ರಂತಹ ಯುವ ಬೌಲರ್‌ಗಳ ಕುರಿತು ಕೋಚ್ ಫ್ಲವರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕೆಲವು ಯುವ ಆಟಗಾರರು ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಅಭಿನಂದನ್, ರಸಿಕ್ ದರ್ ಉತ್ತಮ ಬೌಲಿಂಗ್ ನಡೆಸಿದ್ದಾರೆ. ಎಡಗೈ ಸ್ಪಿನ್ನರ್ ವಿಕ್ಕಿ ಓಸ್ವಾಲ್ ಸಹ ತಮ್ಮ ಕೌಶಲ ಪ್ರದರ್ಶಿಸಿದ್ದಾರೆ ಎಂದು ಫ್ಲವರ್ ಹೇಳಿದ್ದಾರೆ.



ವಿರಾಟ್ ಕೊಹ್ಲಿ ಇರಾದೆ ಮೆಚ್ಚಿದ ಕೃಣಾಲ್ ಪಾಂಡ್ಯ

ವಿರಾಟ್ ಕೊಹ್ಲಿ ಕ್ರೀಸ್‌ಗಿಳಿದು ಸ್ಫೋಟಕ ಇರಾದೆಯಿಂದ ಬ್ಯಾಟ್ ಬೀಸಿದ್ದನ್ನು ಹೊಗಳಿದ ಕೃಣಾಲ್ ಪಾಂಡ್ಯ, ಜಿತೇಶ್ ಅವರ ಸ್ಫೋಟಕ ಬ್ಯಾಟಿಂಗ್‌ಗೂ ಮೆಚ್ಚುಗೆ ವ್ಯಕ್ತಪಡಿಸಿದರು. ಜಿತೇಶ್ ಚೆನ್ನಾಗಿ ಆಡಿದ್ದಾರೆ. ಅವರ ಇನ್ನಿಂಗ್ಸ್‌ನಲ್ಲಿ ಕೆಲವು ಉತ್ತಮ ಹೊಡೆತಗಳಿದ್ದವು. ಡೇವಿಡ್, ವೆಂಕಿ ಸಹ ಚೆನ್ನಾಗಿ ಆಡಿದ್ದಾರೆ. ಕೊಹ್ಲಿ ದೊಡ್ಡ ಇನ್ನಿಂಗ್ಸ್ ಆಡದಿದ್ದರೂ ಸ್ಫೋಟಕ ಬ್ಯಾಟಿಂಗ್ ನಡೆಸುವ ಇರಾದೆಯೊಂದಿಗೆ ಕ್ರೀಸ್‌ಗಿಳಿದಿದ್ದರು. ಇಂದು ವಿರಾಟ್ ಅವರ ಆಟ ಅತ್ಯುತ್ತಮವಾಗಿತ್ತು, ಉತ್ತಮ ಲಯದಲ್ಲಿದ್ದಾರೆ. ಇದು ಆರ್‌ಸಿಬಿಗೆ ಶುಭ ಸೂಚನೆ ಎಂದು ಕೃಣಾಲ್ ಹೇಳಿದ್ದಾರೆ.

ಸಂಕ್ಷಿಪ್ತ ಸ್ಕೋರ್

ಟೀಮ್ ವೆಂಕಿ: 234/7 (20)
ಜಿತೇಶ್ 81(37), ಡೇವಿಡ್ 36(14), ವೆಂಕಟೇಶ್ 30(16), ಕೊಹ್ಲಿ 29(12)
ಟೀಮ್ ಕೃಣಾಲ್: 247 (20)
ಪಡಿಕ್ಕಲ್ 63(33), ಕೃಣಾಲ್ 58(33), ಪಾಟಿದಾರ್ 74(25).
ಫಲಿತಾಂಶ: ಟೀಮ್ ಕೃಣಾಲ್‌ಗೆ ಜಯ
(ಒಟ್ಟು 40 ಓವರ್‌ಗಳಲ್ಲಿ 481 ರನ್)

ಫೈನಲ್‌ನಲ್ಲಿ ಉಕ್ರೇನ್ ಆಟಗಾರ್ತಿ ವಿರುದ್ಧ ಗೆಲುವು

ಪೋಲಿಶ್ ಓಪನ್ ಗೆದ್ದ ಉನ್ನತಿ

• **ಹೊಸದಿಲ್ಲಿ:** ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ತಾರೆ ಉನ್ನತಿ ಹುಡಾ ತಮ್ಮ ಅತ್ಯುತ್ತಮ ಲಯದಲ್ಲಿ ಆಟ ಮುಂದುವರಿಸಿದ್ದು, 20,000 ಡಾಲರ್ ಮೌಲ್ಯದ ಪೋಲಿಶ್ ಓಪನ್ ಪ್ರಶಸ್ತಿಯನ್ನು ಇದೇ ಮೊದಲ ಬಾರಿಗೆ ಗೆದ್ದುಕೊಂಡಿದ್ದಾರೆ.

ಭಾನುವಾರ ತಡರಾತ್ರಿ ನಡೆದ ಮೂರು ಸೆಟ್‌ಗಳ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ದ್ವಿತೀಯ ಶ್ರೇಯಾಂಕದ ಉಕ್ರೇನ್ ಆಟಗಾರ್ತಿ ಪೊಲಿನಾ ಬುಹ್ರೋವಾರನ್ನು ಮಣಿಸುವ ಮೂಲಕ ಉನ್ನತಿ ಪ್ರಶಸ್ತಿ ಗೆದ್ದಿದ್ದಾರೆ. 47 ನಿಮಿಷಗಳ ಕಾಲ ನಡೆದ ಫೈನಲ್‌ನಲ್ಲಿ 10-21, 21-15, 21-8 ಸೆಟ್‌ಗಳ ಅಂತರದಿಂದ ಉನ್ನತಿ ಗೆಲುವು ಸಾಧಿಸಿದರು.

28ನೇ ಶ್ರೇಯಾಂಕಿತೆ ಉನ್ನತಿ ಮೊದಲ ಸೆಟ್ ಅನ್ನು 10-21 ಅಂಕಗಳ ಅಂತರದಿಂದ ಕಳೆದುಕೊಂಡಿದ್ದರು. ಆದರೆ ಮೊದಲ ಸೆಟ್ ಸೋತ ಬಳಿಕ ಮಾನಸಿಕ ದೃಢತೆಯನ್ನು ಪ್ರದರ್ಶಿಸಿದ ಹುಡಾ, ಮುಂದಿನ ಎರಡು ಸೆಟ್‌ಗಳಲ್ಲಿ ಪ್ರಾಬಲ್ಯ ಮೆರೆದು ಮಹಿಳಾ ಸಿಂಗಲ್ಸ್ ಕಿರೀಟವನ್ನು ಮುಡಿಗೇರಿಸಿದ್ದಾರೆ.

ಎರಡನೇ ಅಂತಾರಾಷ್ಟ್ರೀಯ ಪ್ರಶಸ್ತಿ: ಇದು ಉನ್ನತಿ ವೃತ್ತಿಜೀವನದ ಎರಡನೇ ಅಂತಾರಾಷ್ಟ್ರೀಯ ಚಾಲೆಂಜ್ ಪ್ರಶಸ್ತಿಯಾಗಿದೆ. ತಮ್ಮ 14ನೇ ವಯಸ್ಸಿನಲ್ಲೇ ಸೂಪರ್ 100 ಬಿಡಬ್ಲ್ಯುಎಫ್ ವರ್ಲ್ಡ್ ಟೂರ್ ಪ್ರಶಸ್ತಿ ಗೆದ್ದ ಅತ್ಯಂತ ಕಿರಿಯ ಭಾರತೀಯ ಬ್ಯಾಡ್ಮಿಂಟನ್ ಪ್ಲೇಯರ್ ಎಂಬ ದಾಖಲೆ ಬರೆದಿದ್ದರು. ಅದಕ್ಕೂ ಮುನ್ನ ಅವರು 2022ರ ಒಡಿಶಾ ಓಪನ್ ಪ್ರಶಸ್ತಿ ಗೆದ್ದಿದ್ದರು.



ಮೈದಾನದ ಪ್ರವೇಶ, ನಿರ್ಗಮನ ದ್ವಾರ ಅಗಲಗೊಳಿಸಿದ ಕೆಎಸ್‌ಸಿಎ

ಭದ್ರತೆ, ಮೂಲಸೌಕರ್ಯ ಪರಿಶೀಲನೆ

• **ಬೆಂಗಳೂರು:** ಐಪಿಎಲ್ 2026ರ ಉದ್ಘಾಟನಾ ಪಂದ್ಯಕ್ಕೆ ಮುನ್ನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಭದ್ರತೆ ಮತ್ತು ಮೂಲಸೌಕರ್ಯ ಸುಧಾರಣೆಗಳನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹಾಗೂ ಪೊಲೀಸ್ ಸಿಬ್ಬಂದಿ ವರ್ಗ ಸೋಮವಾರ ಪರಿಶೀಲನೆ ನಡೆಸಿದರು. ಕ್ರೀಡಾಂಗಣದ ಪ್ರವೇಶ ದ್ವಾರಗಳ ಅಗಲಗೊಳಿಸುವ ಕಾರ್ಯ ಇದರಲ್ಲಿ ಪ್ರಮುಖ ಮೂಲಸೌಕರ್ಯ ಸುಧಾರಣೆಯಾಗಿದೆ. ಮಾ.28ರಂದು ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ತವರಿನ ತಂಡ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ಮುಖಾಮುಖಿ ಆಗಲಿವೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಮೈದಾನದಲ್ಲಿ ಸಂಭವಿಸಿದ್ದ ಕಾಲ್ತುಳಿತ ದುರಂತದಲ್ಲಿ 11 ಮಂದಿ ಆರ್‌ಸಿಬಿ ಅಭಿಮಾನಿಗಳು ಬಲಿಯಾಗಿದ್ದರು. ಈ ದುರಂತದ ಬಳಿಕ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಪಂದ್ಯ ಇದಾಗಿದ್ದು, ಭಾರೀ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಸುರಕ್ಷತಾ ವ್ಯವಸ್ಥೆಗಳು

- ಜನದಟ್ಟಣೆ ನಿಯಂತ್ರಣ ಯೋಜನೆಗಳು, ನಿಯೋಜನೆ ಕಾರ್ಯತಂತ್ರಗಳು, ಕಣ್ಗಾವಲು ವ್ಯವಸ್ಥೆಗಳು ಮತ್ತು ತುರ್ತು ಪ್ರತಿಕ್ರಿಯೆಗೆ ಪೂರ್ವಸಿದ್ಧತೆ.



ಮೂಲಸೌಕರ್ಯ ಸುಧಾರಣೆಗಳು

- ಕಾಲ್ತುಳಿತದಂತಹ ಪ್ರಸಂಗಗಳನ್ನು ತಡೆಗಟ್ಟುವ ಉದ್ದೇಶದಿಂದ ಕ್ರೀಡಾಂಗಣದ ಪ್ರವೇಶ ಮತ್ತು ನಿರ್ಗಮನ ದ್ವಾರಗಳನ್ನು ಅಗಲಗೊಳಿಸಲಾಗಿದೆ.
- ಸುಧಾರಿತ ಕ್ಯೂ (ಸರತಿ) ನಿರ್ವಹಣಾ ವ್ಯವಸ್ಥೆ ಅಳವಡಿಸಲಾಗುವುದು.
- ಬ್ಯಾರಿಕೇಡ್ ಮತ್ತು ಸೈನೇಜ್‌ಗಳನ್ನು ವಿಸ್ತರಿಸಲಾಗಿವೆ.

ಯಾವುದೇ ರೀತಿಯ ಸಣ್ಣಪುಟ್ಟ ಸಮಸ್ಯೆಗಳಾಗಲಿ ಅಹಿತಕರ ಘಟನೆಗಳಾಗಲಿ ನಡೆಯದ ರೀತಿಯಲ್ಲಿ ಮಾ.28ರಂದು ಐಪಿಎಲ್ 2026ರ ಉದ್ಘಾಟನಾ ಪಂದ್ಯ ನಡೆಸಿಕೊಡುವುದೇ ಕೆಎಸ್‌ಸಿಎ ಮುಂದಿರುವ ಪ್ರಮುಖ ಸವಾಲಾಗಿದೆ.

ಕೆ.ಸಿ.ವ್ಯಾಲಿಯಿಂದ ಅಂತರ್ಜಲ ವೃದ್ಧಿ: ಕೃಷ್ಣಬೈರೇಗೌಡ

• **ಬೆಂಗಳೂರು:** ಕೆ.ಸಿ.ವ್ಯಾಲಿ ಯೋಜನೆಯು ಕೇವಲ ನೀರಿನ ಮೂಲವಾಗಿರದೆ, ಕೋಲಾರ ಮತ್ತು ಸುತ್ತಮುತ್ತಲ ಜಿಲ್ಲೆಗಳ ಸರ್ವಾಂಗೀಣ ಅಭಿವೃದ್ಧಿಯ ಚಾಲಕ ಶಕ್ತಿಯಾಗಿ ಹೊರಹೊಮ್ಮಿದೆ. ಈ ಯೋಜನೆಯಿಂದ ಕೋಲಾರ ಸೇರಿದಂತೆ ಸುತ್ತಮುತ್ತಲ ಜಿಲ್ಲೆಗಳ ಅಂತರ್ಜಲ ವೃದ್ಧಿಸಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ತಜ್ಞರೊಂದಿಗೆ ನಡೆದ ಮಹತ್ವದ ಸಭೆಯಲ್ಲಿ ತಿಳಿದು ಬಂದಿದೆ. ಈ ಮಾಡೆಲ್ ಅನ್ನು ಇಡೀ ದೇಶವೇ ಅನುಸರಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಭಿಪ್ರಾಯಿಸಿದ್ದಾರೆ.

ಸಭೆಯಲ್ಲಿ ಐಐಎಸ್‌ಸಿ ಅಧಿಕಾರಿಗಳು ಮಂಡಿಸಿದ ವರದಿಯ ಪ್ರಕಾರ, ಹಿಂದೆ 1800 ಅಡಿ ಕೊರೆದರೂ ಸಿಗದ ನೀರು, ಪ್ರಸ್ತುತ 50 ರಿಂದ 100 ಅಡಿ ಆಳದಲ್ಲೇ ಲಭ್ಯವಾಗುತ್ತಿದೆ. ಅಂತರ್ಜಲ ಮರುಪೂರಣದಿಂದಾಗಿ ಬತ್ತಿಹೋಗಿದ್ದ ಬಾವಿಗಳು ಮತ್ತೆ ತುಂಬಿ ತುಳುಕುತ್ತಿವೆ. ಐದು ಹಂತದಲ್ಲಿ ನೈಸರ್ಗಿಕವಾಗಿ ಶುದ್ಧೀಕರಣಗೊಳ್ಳುತ್ತಿರುವ ಈ ನೀರು ಮಣ್ಣಿನ ಗುಣಮಟ್ಟವನ್ನು ಹೆಚ್ಚಿಸಿದ್ದು, ಕೃಷಿ ಉತ್ಪಾದನೆಯಲ್ಲೂ ಗಣನೀಯ ಏರಿಕೆ ಕಂಡಿದೆ ಎಂದು ಸಚಿವ ತಿಳಿಸಿದ್ದಾರೆ.



ಲೋಹದ ಅಂಶ ಪತ್ತೆಯಾಗಿಲ್ಲ: 2019ರಿಂದ ಸತತ ಆರು ವರ್ಷಗಳ ಕಾಲ ನಡೆಸಿದ ಸಂಶೋಧನೆಯಲ್ಲಿ ನೀರಿನಲ್ಲಾಗಲಿ ಅಥವಾ ಅಂತರ್ಜಲದಲ್ಲಾಗಲಿ ಯಾವುದೇ ಅಪಾಯಕಾರಿ ಲೋಹದ ಅಂಶಗಳು ಪತ್ತೆಯಾಗಿಲ್ಲ.ಮೂರು ಬಾರಿ ಮನೆ-ಮನೆಗೆ ತೆರಳಿ ನಡೆಸಿದ ಸಮೀಕ್ಷೆಯಲ್ಲಿ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ನೀರಿನಿಂದಾಗಿ ಕಿಡ್ನಿ ಕಲ್ಲು ಸಮಸ್ಯೆ ಗಣನೀಯವಾಗಿ ಕಡಿಮೆಯಾಗಿದೆ ಎಂದು ವರದಿ ತಿಳಿಸಿದೆ.

ಪರಿಸರ ಸಮತೋಲನ: ಕೆರೆಗಳ ವ್ಯಾಪ್ತಿಯಲ್ಲಿ ಪಕ್ಷಿಗಳ ಸಂಕುಲ ಹೆಚ್ಚಿದ್ದು, ಜಲಚರಗಳು ಸಂಪೂರ್ಣ ಆರೋಗ್ಯವಾಗಿವೆ. ಜಾನುವಾರುಗಳಲ್ಲಿ ಹಾಲು ಉತ್ಪಾದನೆ ಹೆಚ್ಚಿದೆ.ಮಣ್ಣಿನಲ್ಲಿ ನೈಟ್ರೋಜನ್ ಅಂಶ ಹೆಚ್ಚಿದೆ ಎಂಬ ಆರೋಪಗಳು ಸುಳ್ಳೆಂದು ಸಾಬೀತಾಗಿದೆ. ಮೆಂತ್ಯೆ, ಸೌತೆಕಾಯಿ, ಟೊಮೆಟೋ ಸೇರಿದಂತೆ ವಿವಿಧ ಬೆಳೆಗಳು ಸಮೃದ್ಧವಾಗಿ ಬೆಳೆಯುತ್ತಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಅಧಿಕಾರಿಗಳ ಬೇಜವಾಬ್ದಾರಿಗೆ ಕೃಷ್ಣಬೈರೇಗೌಡ ಗರಂ: ಒಂದೆಡೆ ಕೆ.ಸಿ. ವ್ಯಾಲಿ ಯೋಜನೆಯಿಂದ ಕೆರೆಗಳು ಶುದ್ಧವಾಗುತ್ತಿದ್ದರೆ, ಮತ್ತೊಂದೆಡೆ ನಗರಸಭೆಗಳ ಬೇಜವಾಬ್ದಾರಿಯಿಂದ ಊರಿನ ಕೊಳಚೆ ನೀರು ನೇರವಾಗಿ ಕೆರೆಗೆ ಸೇರುತ್ತಿರುವುದಕ್ಕೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಶುದ್ಧೀ ಕರಿಸಿದ ನೀರನ್ನು ಹರಿಸುವ ಬೃಹತ್ ಯೋಜನೆಯ ಹೊರಗೆ ಸ್ಥಳೀಯ ಕೊಳಚೆ ನೀರಿನಿಂದ ಮಸಿ ಬಳಿಯಲಾಗುತ್ತಿದೆ. ನಗರಸಭೆ ಅಧಿಕಾರಿಗಳ ಈ ತಪ್ಪನ್ನು ಸಹಿಸಲು ಸಾಧ್ಯವಿಲ್ಲ ಎಂದು ಸಚಿವರು ಎಚ್ಚರಿಸಿದ್ದಾರೆ.

ಇಂಪ್ಯಾಕ್ಟ್ ಪ್ಲೇಯರ್ ನಿಯಮ ಇಷ್ಟವಿಲ್ಲ

• **ಹೊಸದಿಲ್ಲಿ:** ಐಪಿಎಲ್ 2026ರ ಆವೃತ್ತಿಗೆ ದಿಲ್ಲಿ ಕ್ಯಾಪಿಟಲ್ಸ್ (ಡಿಸಿ) ನಾಯಕರಾಗಿ ಬಡ್ತಿ ಪಡೆದಿರುವ ಆಲ್‌ರೌಂಡರ್ ಅಕ್ಷರ್ ಪಟೇಲ್ ಸೋಮವಾರ ಐಪಿಎಲ್‌ನ ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಟೀಕಿಸುವ ಮೂಲಕ ಗಮನಸೆಳೆದರು. ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಟೀಕಿಸಿದ ಅಕ್ಷರ್, ನನಗೆ ಈ ನಿಯಮ ಇಷ್ಟವಿಲ್ಲ ಎಂಬ ಸರಳ ಪ್ರತಿಕ್ರಿಯೆ ನೀಡಿದ್ದಾರೆ. ನಾನು ಸ್ವತಃ ಒಬ್ಬ ಆಲ್‌ರೌಂಡರ್ ಆಗಿರುವುದರಿಂದ ನನಗೆ ಈ ನಿಯಮ ಇಷ್ಟವಾಗಿಲ್ಲ, ಹಿಂದೆ ನಾವು ಬ್ಯಾಟಿಂಗ್ ಮತ್ತು ಬೌಲಿಂಗ್ ಗೋಸ್ಕರ ಆಲ್‌ರೌಂಡರ್‌ಗಳನ್ನು ತಂಡಕ್ಕೆ ಆಯ್ಕೆ ಮಾಡುತ್ತಿದ್ದೆವು. ಆದರೆ ಟೀಮ್ ಮ್ಯಾನೇಜ್‌ಮೆಂಟ್ ಬ್ಯಾಟರ್ ಅಥವಾ ಬೌಲರ್ ಅನ್ನು ಇಂಪ್ಯಾಕ್ಟ್ ಆಟಗಾರನಾಗಿ ಕಳುಹಿಸುವುದರಿಂದ ಆಲ್‌ರೌಂಡರ್ ಪಾತ್ರ ಕಡೆಗಣಿಸಲ್ಪಡುತ್ತದೆ. ನಿಯಮಗಳನ್ನು ನಾವು ಪಾಲಿಸಬೇಕಾಗಿದೆ. ಆದರೆ ವೈಯಕ್ತಿಕವಾಗಿ ನನಗಿದು ಇಷ್ಟವಿಲ್ಲ ಎಂದು ನಾಯಕ ಅಕ್ಷರ್ ಅಭಿಪ್ರಾಯಿಸಿದ್ದಾರೆ.



ಈ ಹಿಂದೆ ರೋಹಿತ್ ಶರ್ಮಾ ಮತ್ತು ಹಾರ್ದಿಕ್ ಪಾಂಡ್ಯ ಅವರೂ ಇಂಪ್ಯಾಕ್ಟ್ ಪ್ಲೇಯರ್ ನಿಯಮದ ವಿರುದ್ಧ ತಮ್ಮ ವೈಯಕ್ತಿಕ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಈ ನಿಯಮದ ಪ್ರಕಾರ, ತಂಡಗಳು ಪಂದ್ಯದ ಯಾವುದೇ ಸಂದರ್ಭ ಹನ್ನೊಂದರ ಬಳಗದಲ್ಲಿರುವ ಒಬ್ಬ ಆಟಗಾರನನ್ನು, ಐವರು ಬದಲಿ ಆಟಗಾರರ ಪಟ್ಟಿಯಲ್ಲಿರುವ ಒಬ್ಬರೊಂದಿಗೆ ಬದಲಾಯಿಸಬಹುದು. ಈ ನಿಯಮವನ್ನು 2023ರಲ್ಲಿ ಐಪಿಎಲ್‌ನಲ್ಲಿ ಪರಿಚಯಿಸಲಾಗಿದ್ದು, ಸದ್ಯ 2027ರವರೆಗೆ ಇರಲಿದೆ.

ಉಪಚುನಾವಣೆ ಗೆಲ್ಲುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್‌ಗೆ ತಕ್ಕ ಪಾಠ

ಕಮಲ ಅರಳುವುದು ಖಚಿತ: ವಿಜಯೇಂದ್ರ

• **ಬಾಗಲಕೋಟೆ:** ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನರಲ್ಲಿ ಆಕ್ರೋಶ ಹೆಚ್ಚಾಗಿದ್ದು, ಬಿಜೆಪಿ ಪಕ್ಷದ ಅಭಿವೃದ್ಧಿ ಪರ ರಾಜಕಾರಣ, ಸಂಘಟಿತ ಶಕ್ತಿ, ಕಾರ್ಯಕರ್ತರ ಉತ್ಸಾಹ ಹಾಗೂ ಮತದಾರರ ಆಶೀರ್ವಾದದಿಂದ ಈ ಬಾರಿ ಬಾಗಲಕೋಟೆಯಲ್ಲಿ ಕಮಲ ಅರಳಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ನಾಮಪತ್ರ ಸಲ್ಲಿಸಿದ ಬಳಿಕ ಬಹಿರಂಗ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಬಡವರ, ದಲಿತರ, ಯುವಕರ ವಿರೋಧಿ ಸರ್ಕಾರ ರಾಜ್ಯದಲ್ಲಿದ್ದು, ಮುಂದಿನ ದಿನಗಳಲ್ಲಿ ಈ ಸರ್ಕಾರವನ್ನು ಕಿತ್ತು ಹಾಕಲು ರಾಜ್ಯದ ಜನ ಸಂಕಲ್ಪ ಮಾಡಿದ್ದಾರೆ. ರಾಜ್ಯದ ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವ ಮೂಲಕ ಕಾಂಗ್ರೆಸ್ ಧೂಳೀಪಟ ಆಗಲಿದೆ ಎಂದರು.ಪಕ್ಷದ ಗೆಲುವಿಗಾಗಿ ಕಾರ್ಯಕರ್ತರು ಸಂಪೂರ್ಣ ಸಜ್ಜಾಗಿದ್ದು, ಹಿರಿಯ ನಾಯಕರ ಮಾರ್ಗದರ್ಶನದಲ್ಲಿ ವಿಜಯದ ದೃಢಸಂಕಲ್ಪ ಕೈಗೊಳ್ಳಲಾಗಿದೆ. ಈ ಉಪಚುನಾವಣೆಯ ಫಲಿತಾಂಶ ರಾಜ್ಯದ ಮುಂದಿನ ರಾಜಕೀಯ ದಿಕ್ಕನ್ನು ನಿರ್ಧರಿಸುವಲ್ಲಿ ಪ್ರಮುಖವಾಗಲಿದೆ ಎಂದರು.



ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ 25 ಸಾವಿರ ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದ ಅವರು, ನಿಗಮದ ದುಡ್ಡು ಹೊಡೆದಿದ್ದು ಹಣದ ಮೂಟೆಯನ್ನು ಹಿಡಿದುಕೊಂಡು ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದವರು ಬರಲಿದ್ದಾರೆ. ಕಾರ್ಯಕರ್ತರಲ್ಲಿ ರಣೋತ್ಸಾಹವಿದ್ದು ಪ್ರಜ್ಞಾವಂತ ಮತದಾರರು ಬಿಜೆಪಿಯನ್ನು ಬೆಂಬಲಿಸಿದ್ದಾರೆ ಎಂದರು.

ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿಯವರು ಜಿಲ್ಲೆಗೆ ಸಾವಿರಾರು ಕೋಟಿ ಅನುದಾನ ನೀಡಿದ್ದಾರೆ. ರಾಜಕೀಯ ಮರುಜನ್ಮ ನೀಡಿದ ಜಿಲ್ಲೆಗೆ ಸಿದ್ದರಾಮಯ್ಯನವರು ಎಷ್ಟು ಅನುದಾನ ನೀಡಿದ್ದಾರೆಂದು ಬಹಿರಂಗಪಡಿಸಲಿ. ಅಭಿವೃದ್ಧಿ ಬಗ್ಗೆ ಸರ್ಕಾರಕ್ಕೆ ಚಿಂತನೆ ಇಲ್ಲ ಎಂದರು. ಸಂಸದ ಜಗದೀಶ ಶೆಟ್ಟರ್ ಮಾತನಾಡಿ, ಚರಂತಿಮಠರದ್ದು ನಾಮಪತ್ರ ಮೆರವಣಿಗೆ ಅಲ್ಲ, ವಿಜಯೋತ್ಸವದ ಮೆರವಣಿಗೆ. ಬಾಗಲಕೋಟೆಯಲ್ಲಿ ಬಿಜೆಪಿ ಶಕ್ತಿ ಏನು ಎಂಬುದನ್ನು ಕಾರ್ಯಕರ್ತರು ತೋರಿಸಿದ್ದಾರೆ ಎಂದರು.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5932

ಎಡದಿಂದ ಬಲಕ್ಕೆ
1. ಪಾಠಕನಿಗಾಗಿ ತಯಾರಿಸಿದ ಅಡುಗೆ (2)
2. ನನಗಾಗಿ ವಾದಿಸಲು ಬಂದ ಸಚಿವ (3)
4. ಶಾಡಪತ್ರಿಯಲ್ಲಿರುವ ಬಿಸಿ (2)
6. ಹಾಡಿನಿಂದ ಕೂಡಿದ ಪ್ರಪಂಚ (4)
8. ಮದುವೆಗೆ ಸಿದ್ಧನಾದ ಗಂಡು (4)
12. ಕ್ಷಾಮದ ದಿನಗಳು ತಿರುಗಿ ಮೂಡಿವೆ (4)
14. ವಿಚಿತ್ರವಾದರೂ ಇದನ್ನು ಬರೆದಿಡಲಾಗಿದೆ (4)
15. ಬೆಣ್ಣೆ ಕಾಯಿಸಿ ತೆಗೆದ ಸಾರ (2)
16. ಸಭಾಸದರೆಡೆಗೆ ನುಗ್ಗಿ ಬಂದವರ ವೇಗ (3)
17. ಪೂರ್ಣ ಪದಾರ್ಥದ ಒಂದು ಅಂಶ (2)

ಮೇಲಿನಿಂದ ಕೆಳಕ್ಕೆ
1. ಆಸ್ತಿಯಲ್ಲಿ ಭಾಗಸ್ವಾಮ್ಯ (4)
2. ಶಾರೀರವನ್ನು ಹೀಗೂ ಹೇಳುತ್ತೇವೆ (3)
3. ದಮನವಾಗದ ಮಾರ ತಲೆಕೆಳಗಾಗಿದ್ದಾನೆ (3)
5. ಇದು ನಾಡಿನ ಒಂದು ಭಾಗ (4)
7. ಜನರ ಕಷ್ಟ-ನಷ್ಟಗಳಿಗೆ ಸಹಾಯ ಮಾಡುವ ಗುಣ (5)
9. ಅನುಚಿತವಾದ ಜಂಭವಿದು (5)
10. ರಸಾಯನಿಕವಾಗಿ ವಿಭಜಿಸಲು ಅಸಾಧ್ಯವಾದ ಘಟಕ (4)
11. ಮನದಲ್ಲುಂಟಾಗುವ ಭಾವನೆ-ವಿಚಾರ (4)
13. ಬರದ ನಡುವೆ ಕಾಳಗವಾಗಿದೆ (3)
14. ಇಚ್ಛೆಗೆ ವಿರುದ್ಧವಾದುದು (3)

5931 ಉತ್ತರ

ಎಡದಿಂದ ಬಲಕ್ಕೆ:
3. ಅಲ್ಲಮಪ್ರಭು
5. ಕೇಳುಗ 6. ಚರ್ಮಿತ
7. ಹವಳ 9. ತಂಗುದಾಣ
11. ಪರಂಪರಾ 14. ಗಣಕ
16. ಅಪಾರ 17. ಜವಾರಿ
18. ಕೊರಳುಪಟ್ಟಿ

ಮೇಲಿನಿಂದ ಕೆಳಕ್ಕೆ :
1. ತೊಡೆಬಲ್ಲಾಣ 2. ಸಂಕೇತ
3. ಅಗಣಿತ 4. ಮಂಗಳ
8. ವರ್ಜಿತ 10. ದಾರುಣ
12. ಪಾತರಗಿತ್ತಿ
13. ಜಗಜಟ್ಟಿ 15. ಕರುಳು
16. ಅರಿಕೆ



ಸದ್ಯದಲ್ಲೇ ಎರಡನೇ ಹಂತದ ಚಿತ್ರೀಕರಣ

ಶೇ.70ರಷ್ಟು ಭಾಗ ಸೆಟ್‌ನಲ್ಲೇ ನಡೆಯೋ ಕಥೆ
ಬಿಲ್ಲ ರಂಗ ಬಾಷ



ಮ್ಯಾಕ್ಸ್, ಮಾರ್ಕ್ ಸರಣಿ ಚಿತ್ರಗಳ ಯಶಸ್ಸಿನ ನಂತರ ಕಿಚ್ಚ ಸುದೀಪ್ ಅವರು ತಮ್ಮ ಮತ್ತೊಂದು ಬಹುನಿರೀಕ್ಷಿತ ಚಿತ್ರ ಬಿಲ್ಲ ರಂಗ ಭಾಷಾ ಚಿತ್ರದ ಚಿತ್ರೀಕರಣಕ್ಕೆ ಅಣಿಯಾಗುತ್ತಿದ್ದಾರೆ. ಮಾರ್ಕ್ ಚಿತ್ರವನ್ನು ಸುದೀಪ್ ಅವರು ಬೇಗನೇ ಮುಗಿಸಬೇಕಾಗಿದ್ದ ಕಾರಣದಿಂದಲೇ ಈ ಚಿತ್ರದ ಕೆಲಸವನ್ನು ಮುಂದಕ್ಕೆ ಹಾಕಿದ್ದ ಚಿತ್ರತಂಡ ಇದೀಗ ಮತ್ತೆ ಶೂಟಿಂಗ್ ಅಖಾಡಕ್ಕಿಳಿಯಲು ಅಣಿಯಾಗುತ್ತಿದೆ. ಕಿಚ್ಚ ಸುದೀಪ್ ಅಭಿನಯದ ಬಹು ನಿರೀಕ್ಷಿತ ಬಿಲ್ಲ ರಂಗ ಭಾಷ ಚಿತ್ರದ ಬಗ್ಗೆ ಕಿಚ್ಚನ ಅಭಿಮಾನಿಗಳಲ್ಲಿ ದೊಡ್ಡ ಮಟ್ಟದ ಕುತೂಹಲವಂತೂ ಮನೆಮಾಡಿದ್ದು, ಇದೀಗ ಚಿತ್ರದ ಹೊಸ ಅಪ್‌ಡೇಟ್ ಸಿಕ್ಕಿರುವುದು ಖುಷಿ ನೀಡಿದೆ. ಈ ಚಿತ್ರದ ಎರಡನೇ ಹಂತದ ಶೂಟಿಂಗ್ ಮುಂದಿನ ತಿಂಗಳಿಂದಲೇ ಆರಂಭವಾಗುವ ನಿರೀಕ್ಷೆಯಿದೆ. ರಂಗಿತರಂಗ, ರಾಜರಥ ಖ್ಯಾತಿಯ ಅನೂಪ್ ಭಂಡಾರಿ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರಕ್ಕಾಗಿ ಸುಮಾರು ಎಂಟು ಎಕರೆಯಷ್ಟು ಜಾಗದಲ್ಲಿ ವಿದೇಶಿ ಶೈಲಿಯ ಬೃಹತ್ ಸೆಟ್‌ನ್ನು ನಿರ್ಮಾಣ ಮಾಡಲಾಗಿದ್ದು, ಅಲ್ಲಿಯೇ ಬಹುತೇಕ ಚಿತ್ರೀಕರಣ ನಡೆಸಲಾಗುತ್ತಿದೆ. ಕಿಚ್ಚ ಸುದೀಪ್ ಅವರು ಕೂಡ ಈ ಚಿತ್ರಕ್ಕಾಗಿ ತಯಾರಾಗುತ್ತಿದ್ದು, ಸದ್ಯದಲ್ಲೇ ಬಿಲ್ಲ ರಂಗ ಬಾಷಾ ಚಿತ್ರದ ಕೆಲಸಗಳಲ್ಲಿ ತೊಡಗಿಕೊಳ್ಳಲಿದ್ದಾರೆ. ಈ ಚಿತ್ರಕ್ಕೆ ಅನೂಪ್ ಭಂಡಾರಿ ಅವರೇ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ.



ಕಿಚ್ಚ ಸುದೀಪ್ ಹಾಗೂ ಅನೂಪ್ ಭಂಡಾರಿ ಈ ಮೊದಲು ವಿಕ್ರಾಂತ್ ರೋಣ ಚಿತ್ರದಲ್ಲಿ ಒಟ್ಟಾಗಿ ಕೆಲಸ ಮಾಡಿದ್ದರು. ಅದಾದ ನಂತರ ಬಿಲ್ಲ ರಂಗ ಬಾಷಾ ಚಿತ್ರವನ್ನೇ ಮುಗಿಸಬೇಕಿತ್ತು. ಆದರೆ, ಕಾರಣಾಂತರಗಳಿಂದ ಮಾರ್ಕ್ ಮಾಡಬೇಕಾಯಿತು. ಈಗ ಕಿಚ್ಚ ಸುದೀಪ್ ಅವರು ಈ ಚಿತ್ರದ ಚಿತ್ರೀಕರಣದಲ್ಲಿ ಭಾಗವಹಿಸಲು ರೆಡಿಯಾಗುತ್ತಿದ್ದಾರೆ.

ಸುದೀಪ್ ಅವರೇ ಹೇಳುವಂತೆ ಅವರ ಸಿನಿಕರಿಯರ್‌ನಲ್ಲೇ ಬಹುದೊಡ್ಡ ಬಜೆಟ್ ಚಿತ್ರ ಇದಾಗಲಿದೆ. ಟಾಲಿವುಡ್‌ನ ಬ್ಲಾಕ್ ಬಸ್ಟರ್ ಸಿನಿಮಾ ಹನುಮಾನ್ ಚಿತ್ರದ ನಿರ್ಮಾಪಕರಾದ ನಿರಂಜನ್ ರೆಡ್ಡಿ ಹಾಗೂ ಚೈತನ್ಯ ರೆಡ್ಡಿ ಅವರುಗಳು ಬಿಲ್ಲ ರಂಗ ಭಾಷಾ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ತಮ್ಮದೇ ಪ್ರೈಮ್ ಶೋ ಎಂಟರ್‌ಟೈನ್ಮೆಂಟ್ ಬ್ಯಾನರ್ ಅಡಿ ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ.

ಬಿಲ್ಲ ರಂಗ ಬಾಷಾ ಚಿತ್ರದ ಶೇಕಡಾ 70ರಷ್ಟು ಕಥೆ ಸೆಟ್‌ನಲ್ಲೇ ನಡೆಯಲಿದೆ: ವಿಶೇಷವಾಗಿ ಬಿಲ್ಲ ರಂಗ ಬಾಷಾ ಚಿತ್ರದ ಶೇಕಡಾ 70 ರಷ್ಟು ಭಾಗದ ಕಥಾಹಂದರ ವಿಶೇಷವಾಗಿ ನಿರ್ಮಿಸಲಾಗಿರುವ ಸೆಟ್‌ಗಳಲ್ಲೇ ನಡೆಯಲಿದೆ. ಹಾಗಾಗಿ ಈ ಚಿತ್ರಕ್ಕಾಗಿಯೇ ಕಲಾನಿರ್ದೇಶಕ ಶಿವಕುಮಾರ್ ಅವರ ತಂಡ ನಾಲ್ಕರಿಂದ ಐದು ಬಿಗ್ ಬಜೆಟ್‌ನ ಸೆಟ್‌ಗಳನ್ನು ಹಾಕಲಿದೆ. ಅಂದುಕೊಂಡ ಹಾಗೆ ಆದರೆ ಮುಂದಿನ ತಿಂಗಳ ಮೊದಲ ವಾರದಲೇ ಬಿಲ್ಲ ರಂಗ ಬಾಷಾ ಚಿತ್ರದ ಎರಡನೇ ಹಂತದ ಚಿತ್ರೀಕರಣ ಆರಂಭವಾಗಲಿದೆ. ಬಿಲ್ಲ ರಂಗ ಭಾಷಾ ಸಿನಿಮಾ ಬಗ್ಗೆ ಮಾತನಾಡಿರುವ ನಿರ್ದೇಶಕ ಅನೂಪ್ ಭಂಡಾರಿ, ವಿಕ್ರಾಂತ್ ರೋಣ ಸಿನಿಮಾ ನಂತರ ಹನುಮಾನ್ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸದ ಸಮಯದಲ್ಲಿ ನಿರ್ಮಾಪಕರಾದ ನಿರಂಜನ್ ರೆಡ್ಡಿ ಅವರು ನನ್ನನ್ನು ಭೇಟಿಯಾದರು. ಆಗ ನಾನು ಸುದೀಪ್ ಅವರಿಗೆ ಸಿನಿಮಾ ಮಾಡುತ್ತಿರುವುದಾಗಿಯೂ, ಅದಕ್ಕಾಗಿ ಮಾಡಿಕೊಂಡಿದ್ದ ಬಿಲ್ಲ ರಂಗ ಭಾಷಾ ಚಿತ್ರದ ಕಥೆಯನ್ನು ಅವರಿಗೆ ಹೇಳಿದಾಗ ಅವರು ಎಕ್ಸೈಟ್ ಆದರು. ಈ ಚಿತ್ರವನ್ನು ತಮ್ಮ ಬ್ಯಾನರ್‌ನಲ್ಲೇ ಅದ್ದೂರಿಯಾಗಿ ನಿರ್ಮಾಣ ಮಾಡುವುದಾಗಿಯೂ ಅನೂಪ್ ಅವರಿಗೆ ಹೇಳಿದರು. ಹೀಗೆ ಈ ಚಿತ್ರವು ದೊಡ್ಡ ಬ್ಯಾನರ್‌ವೊಂದರ ಕೈಸೇರಿತು, ಸುದೀಪ್ ಅವರ ಜೊತೆ ಕೆಲಸ ಮಾಡುವುದು ನಿಜಕ್ಕೂ ಒಂದು ಅದ್ಭುತ ಅನುಭವವಾಗಿದೆ. ನಮ್ಮ ಜನ ವಿಕ್ರಾಂತ್ ರೋಣ ಚಿತ್ರವನ್ನು ಇಷ್ಟಪಟ್ಟಿದ್ದಾರೆ. ಸುದೀಪ್ ಅವರು ಈ ಚಿತ್ರವನ್ನು ದೊಡ್ಡಚಿತ್ರ ಎಂದಿರುವುದು ನನಗೆ ನನ್ನ ಜವಾಬ್ದಾರಿಯನ್ನು ಇನ್ನೂ ಜಾಸ್ತಿ ಮಾಡಿದೆ ಎಂದು ಹೇಳಿದರು. ಬಿಲ್ಲ ರಂಗ ಭಾಷಾ ಚಿತ್ರವು ಕನ್ನಡ, ತೆಲುಗು, ತಮಿಳು ಸೇರಿದಂತೆ ಬಹುಭಾಷೆಗಳಲ್ಲಿ ನಿರ್ಮಾಣವಾಗುತ್ತಿದೆ.

ಸೆನ್ಸಿಟಿವ್ ಸಸ್ಪೆನ್ಸ್, ಡ್ರಾಮಾ ಕಥಾಹಂದರ ಒಳಗೊಂಡ ಚಿತ್ರ ಪೀಟರ್ ಬಿಡುಗಡೆಗೆ ಸಿದ್ಧವಾಗಿದ್ದು, ಏಪ್ರಿಲ್ 10ಕ್ಕೆ ರಾಜ್ಯಾದ್ಯಂತ ತೆರೆಕಾಣಲಿದೆ. ಕೇರಳದಲ್ಲಿ ಸುಮಾರು 300 ವರ್ಷಗಳಿಗೂ ಹೆಚ್ಚಿನ ಇತಿಹಾಸ ಹೊಂದಿರುವ ಚೆಂಡೆ ಮೇಳವನ್ನು ಪೀಟರ್ ಸಿನಿಮಾದಲ್ಲಿ ಕಟ್ಟಿಕೊಡಲಾಗುತ್ತಿದೆ. ಈ ಚಿತ್ರದ ಪ್ರತಿ ಹಾಡು ಒಂದೊಂದು ವಿಶೇಷತೆಗಳನ್ನು ಒಳಗೊಂಡಿದ್ದು, ಬಾಲಿವುಡ್‌ನ ಹೆಸರಾಂತ ಗಾಯಕ ಅಜಯ್ ಗೋಗವಾಲೆ ಅವರು ಈ ಚಿತ್ರದ ಹಾಡೊಂದಕ್ಕೆ ದನಿಯಾಗಿದ್ದಾರೆ.

ಏಪ್ರಿಲ್ 10ಕ್ಕೆ ಸಸ್ಪೆನ್ಸ್ ಡ್ರಾಮಾ ಪೀಟರ್



ದೂರದರ್ಶನ ಖ್ಯಾತಿಯ ನಿರ್ದೇಶಕ ಸುಕೇಶ್ ಶೆಟ್ಟಿ ಅವರ ಸಾರಥ್ಯದ ಎರಡನೇ ಚಿತ್ರ ಪೀಟರ್ ಬಿಡುಗಡೆಗೆ ಇದೀಗ ಡೇಟ್ ಫಿಕ್ಸ್ ಆಗಿದೆ. ಟೈಟಲ್, ಹಾಡುಗಳ ಮೂಲಕವೇ ಸಿನಿರಸಿಕರಲ್ಲಿ ದೊಡ್ಡ ಕುತೂಹಲ ಹುಟ್ಟು ಹಾಕಿದ್ದ ಪೀಟರ್ ಚಿತ್ರವೀಗ ಪ್ರೇಕ್ಷಕರ ಮುಂದೆ ಬರಲು ಅಣಿಯಾಗಿದ್ದು, ಚಿತ್ರತಂಡವೀಗ ಸಿನಿಮಾದ ರಿಲೀಸ್ ಡೇಟನ್ನು ಅನೌನ್ಸ್ ಮಾಡಿದೆ.

ಕನ್ನಡ ಚಿತ್ರರಂಗದ ಖ್ಯಾತ ಸೌಂಡ್ ಇಂಜಿನಿಯರ ರವಿ ಹಿರೇಮಠ್ ಹಾಗೂ ರಾಕೇಶ್ ಹೆಗಡೆ ವೃದ್ಧಿ ಸ್ಟುಡಿಯೋಸ್ ಬ್ಯಾನರ್‌ನಡಿ ಪೀಟರ್ ಚಿತ್ರವು ಅದ್ದೂರಿಯಾಗಿ ನಿರ್ಮಾಣವಾಗಿದೆ.

ಈ ಚಿತ್ರದ ಪ್ರತಿ ಹಾಡು ಸಹ ತನ್ನದೇ ಆದ ವಿಶೇಷತೆ ಹೊಂದಿದೆ, ಐದು ಭಾಷೆಯಲ್ಲಿ ಬಿಡುಗಡೆಯಾಗಿರುವ ಪೀಟರ್ ಚಿತ್ರದ ತಾಯೇ ತಾಯೇ ಹಾಡು ತಾಯಿ, ಮಗನ ನಡುವಿನ ಬಾಂಧವ್ಯದ ಕಥೆಯನ್ನು ಹೇಳುತ್ತದೆ, ಈ ಹಾಡಿಗೆ ಕನ್ನಡದಲ್ಲಿ ಸುಕೇಶ್ ಶೆಟ್ಟಿ ಸಾಹಿತ್ಯ ಒದಗಿಸಿದ್ದು, ಮಲಯಾಳಂ ಹೊರತುಪಡಿಸಿ ಕನ್ನಡ, ಹಿಂದಿ, ತೆಲುಗು ಹಾಗೂ ತಮಿಳು ಭಾಷೆಯಲ್ಲಿ ರಿತ್ವಿಕ್ ಮುರಳೀಧರ್ ಅವರು ಸಂಗೀತ ನಿರ್ದೇಶನ ಮಾಡುವುದರ ಜೊತೆಗೆ ಹಾಡಿಗೆ ತಾವೇ ಧ್ವನಿಯಾಗಿದ್ದಾರೆ. ಇದಲ್ಲದೆ ಬಾಲಿವುಡ್‌ನ ಹೆಸರಾಂತ ಗಾಯಕ ಅಜಯ್ ಗೋಗವಾಲೆ ಅವರು ಹಾಡಿರುವ ಹಾಡಿನ ವಿಡಿಯೋ ಕೂಡ ಬಿಡುಗಡೆಯಾಗಿ ಎಲ್ಲಾ ಕಡೆಗೂ ಸಹ ವೈರಲ್ ಆಗಿದೆ. ಪಕ್ಕಾ ಮಾಸ್ ಶೈಲಿಯಲ್ಲಿ ಮೂಡಿಬಂದಿರುವ ಈ ಹಾಡು ಸಂಗೀತ ಪ್ರಿಯರನ್ನು ಆಕರ್ಷಿಸುತ್ತಿದೆ,



ಪ್ರತಿಷ್ಠಿತ ಇಷ್ಟರ್ ಮ್ಯೂಸಿಕ್ ಹಿಂದಿ ಹಾಡಿನ ಹಕ್ಕುಗಳನ್ನು ತನ್ನದಾಗಿಸಿಕೊಂಡಿದೆ. ಮಲಯಾಳಂನಲ್ಲಿ ರಿಲೀಸ್ ಆಗಿರುವ ತಾಯೇ ತಾಯೇ ಹಾಡನ್ನು ತುಡುರಮ್ ಖ್ಯಾತಿಯ ಗಾಯಕ ಗೋಕುಲ್ ಗೋಪಕುಮಾರ್ ಅವರು ಹಾಡಿದ್ದಾರೆ. ಗೀತರಚನೆಕಾರ ಸಿಬು ಕುರಾಪ್ಪೂರ್ ಸಾಹಿತ್ಯ ಬರೆದಿದ್ದಾರೆ.

ಪೀಟರ್ ಸಿನಿಮಾದಲ್ಲಿ ರಾಜೇಶ್ ಧ್ರುವ ಅವರು ನಾಯಕ ಪೀಟರ್‌ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ರವೀಕ್ಷಾ ಶೆಟ್ಟಿ ಹಾಗೂ ಜಾನ್ವಿ ರಾಯಲ ಅವರುಗಳು ನಾಯಕಿಯರ ಪಾತ್ರವನ್ನು ನಿರ್ವಹಿಸಿದ್ದಾರೆ, ಪ್ರತಿಮಾ ನಾಯಕ್, ರಘು ಪಾಂಡೇಶ್ವರ್, ರಾಮ ನಾಡಗೌಡ, ವರುಣ್ ಪಟೇಲ್, ದೀಪಾ ಪೂಜಾರಿ, ಭರತ್ ಉಳಿದ ತಾರಾಬಳಗದಲ್ಲಿದ್ದಾರೆ.

ಪೀಟರ್ ಚಿತ್ರವು ಒಂದು ಸೆನ್ಸಿಟಿವ್ ಸಸ್ಪೆನ್ಸ್ ಡ್ರಾಮಾ ಕಥಾಹಂದರ ಹೊಂದಿರೋ ಚಿತ್ರವಾಗಿದ್ದು, ಅದರಲ್ಲಿಯೂ ಮುಖ್ಯವಾಗಿ ಚೆಂಡೆ ಮೇಳದ ಕಂಟೆಂಟ್ ಚಿತ್ರದಲ್ಲಿದೆ. ಕೇರಳದಲ್ಲಿ 300 ವರ್ಷಗಳಿಗೂ ಅಧಿಕ ಕಾಲದ ಇತಿಹಾಸ ಹೊಂದಿರುವ ಚೆಂಡೆ ಮೇಳವನ್ನು ಪೀಟರ್ ಸಿನಿಮಾದಲ್ಲಿ ಕಟ್ಟಿಕೊಡಲಾಗುತ್ತಿದೆ. ಗುರುಪ್ರಸಾದ್ ನರ್ನಾಡ್ ಅವರ ಛಾಯಾಗ್ರಹಣ, ನವೀನ್ ಶೆಟ್ಟಿ ಅವರ ಸಂಕಲನ, ದೇವರಾಜ್ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

ಲವ್ ಮಾಕ್ಟೇಲ್ 3 ಕಥೆ ನನ್ನದು
ರಾಘವೇಂದ್ರ ನಾಯ್ಕ

ಡಾರ್ಲಿಂಗ್ ಕೃಷ್ಣ ನಿರ್ಮಿಸಿ, ನಿರ್ದೇಶಿಸಿ ನಟಿಸಿರುವ ಚಿತ್ರ ಲವ್ ಮಾಕ್ಟೇಲ್ 3 ಯಶಸ್ವೀ ಪ್ರದರ್ಶನ ಕಾಣುತ್ತಿದೆ. ಈ ನಡುವೆ ಅವರ ಮೇಲೆ ಕಥೆ ಕದ್ದ ಆರೋಪ ಕೇಳಿ ಬಂದಿದೆ. ನಿರ್ದೇಶಕ ರಾಘವೇಂದ್ರ ನಾಯ್ಕ್ ಇಂಥಾದ್ದೊಂದು ಗಂಭೀರ ಆರೋಪವನ್ನು ಮಾಡಿದ್ದಾರೆ. 3 ವರ್ಷಗಳ ಹಿಂದೆ ಈ ಕಥೆಯನ್ನು ಡಾರ್ಲಿಂಗ್ ಕೃಷ್ಣ ಅವರಿಗೆ ನಾನು ಹೇಳಿದ್ದೆ, ಅದೇ ಕಥೆಯನ್ನು ಕೊಂಚ ಬದಲಿಸಿ ಲವ್ ಮಾಕ್ಟೇಲ್- 3 ಚಿತ್ರದಲ್ಲಿ ಬಳಸಿದ್ದಾರೆ ಎಂದು ಆರೋಪಿಸಿದ್ದಾರೆ. ಮುಂದಿನ ದಿನಗಳಲ್ಲಿ ಈ ರೀತಿ ಯಾರಿಗೂ ಅನ್ಯಾಯ ಆಗಬಾರದು ಎಂದು ಹೋರಾಟ ನಡೆಸಲು ಮುಂದಾಗಿದ್ದಾರೆ.



ಮಾನಿಗೋಲ್ಡ್ ಚಿತ್ರವನ್ನು ರಾಘವೇಂದ್ರ ನಾಯ್ಕ್ ನಿರ್ದೇಶನ ಮಾಡಿದ್ದರು. ಕಳೆದ 20 ವರ್ಷಗಳಿಂದ ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ಅವರು ಕೆಲ ಸಿನಿಮಾಗಳಿಗೆ ಸಹಾಯಕರಾಗಿ ಕೆಲಸ ಮಾಡಿ, ಚಿತ್ರನಿರ್ದೇಶನ ಮಾಡಲು ಒಂದಷ್ಟು ಕಥೆಗಳನ್ನು ಸಿದ್ಧಪಡಿಸಿಕೊಂಡಿದ್ದಾರೆ. ಅದೇ ರೀತಿ ಸಿದ್ಧಪಡಿಸಿದ್ದ ಕಥೆ, ಚಿತ್ರಕಥೆಯನ್ನು ನಿರ್ದೇಶಕ ಡಾರ್ಲಿಂಗ್ ಕೃಷ್ಣ ಅವರಿಗೆ ಹೇಳಿ ಸಿನಿಮಾ ಮಾಡಲು ಪ್ರಯತ್ನಿಸಿದ್ದರು. ಕಥೆ ಕೇಳಿದ ಬಳಿಕ ಇಂತದ್ದೇ ಕಥೆ ಇರುವ ಚಿತ್ರವನ್ನು ನಾನೀಗ ಮಾಡ್ತಿದ್ದೀನಿ, ಹಾಗಾಗಿ ಸದ್ಯಕ್ಕೆ ಬೇಡ ಎಂದು ಕೃಷ್ಣ ಹೇಳಿಕಳುಹಿಸಿದ್ದರಂತೆ. ಬಳಿಕ ಕೃಷ್ಣ ಅದೇ ಕಥೆಯನ್ನು 'ಲವ್ ಮಾಕ್ಟೇಲ್ 3 ಚಿತ್ರದಲ್ಲಿ ಕಟ್ಟಿಕೊಟ್ಟಿದ್ದಾರೆ ಎನ್ನುವುದು ರಾಘವೇಂದ್ರ ನಾಯ್ಕ್ ಅವರ ಆರೋಪವಾಗಿದೆ. ರಾಘವೇಂದ್ರ ನಾಯ್ಕ ಅವರು ಕಥೆ ರೆಡಿ ಮಾಡಿ ನಿರ್ಮಾಪಕ ಗುರು ದೇಶಪಾಂಡೆ ಅವರಿಗೆ ಕೊಟ್ಟಿದ್ದಾರೆ. ಅದಕ್ಕಾಗಿ ಅಡ್ವಾನ್ಸ್ ಕೂಡ ಪಡೆದಿದ್ದಾರೆ. ಡಾರ್ಲಿಂಗ್ ಕೃಷ್ಣ ಜೊತೆ ಸಿನಿಮಾ ಮಾಡೋಣ ಎಂದು ಸ್ವತಃ ಗುರುದೇಶ್ ದೇಶಪಾಂಡೆ ಅವತ್ತು ಕೃಷ್ಣ ಅವರಿಗೆ ಈ ಕಥೆಯನ್ನು ಹೇಳುವಂತೆ ಸೂಚಿಸಿದ್ದರು. ಹಾಗಾಗಿ ಅವರೇ ಮುಂದಿನ ಕ್ರಮ ಕೈಗೊಳ್ಳುತ್ತಾರೆ ಎಂದು ರಾಘವೇಂದ್ರ ನಾಯ್ಕ ಪ್ರತಿಕ್ರಿಯೆ ನೀಡಿದ್ದಾರೆ.

ತಂದೆ ಮಗನ ಬಾಂಧವ್ಯದ ಸುತ್ತ ನಾನು ಕರುಣಾಕರ



ನಾನು ಕರುಣಾಕರ ಚಿತ್ರದ ಆಡಿಯೋ-ಟ್ರೈಲರ್ ಬಿಡುಗಡೆ

ಮೂಲತಃ ಹಾಸನದವರಾದ ನಿರ್ದೇಶಕ ಕಮ್ ನಟ ಆರ್ಯನ್ ತೇಜಸ್ ಇದೀಗ ನಾನು ಕರುಣಾಕರ ಎಂಬ ತಂದೆ ಮಗನ ನಡುವಿನ ಬಾಂಧವ್ಯದ ಕಥೆಯನ್ನು ಹೊತ್ತು ತರ್‍ತಾ ಇದ್ದಾರೆ. ರಂಗಭೂಮಿಯಿಂದ ಬಂದ ಇವರು ನಟನೆಯ ಜತೆ ನಿರ್ದೇಶನ ಸಹ ಕಲಿತು ಸಿಲ್ಲಿಲಲ್ಲಿ, ಸೇರಿದಂತೆ ಹಲವು ಧಾರಾವಾಹಿಗಳಲ್ಲೂ ನಟಿಸಿದ ಆರ್ಯನ್ ತೇಜಸ್ ಇದೀಗ ನಾನು ಕರುಣಾಕರ ಎಂಬ ಚಿತ್ರದ ನಿರ್ದೇಶನ ಮಾಡುವ ಜತೆಗೆ ಚಿತ್ರದ ನಾಯಕನ ಪಾತ್ರವನ್ನೂ ಸಹ ಕಾಣಿಸಿಕೊಂಡಿದ್ದಾರೆ.

ಈ ಹಿಂದೆ ಶಿಕ್ಷಣ ವ್ಯವಸ್ಥೆಯ ಸುತ್ತ ನಡೆಯುವ ಕಥೆ ಹೊಂದಿದ ಮಾರ್ಕ್ ರೋಡ್ 100 ರೂಪಾಯಿ ಚಿತ್ರ ನಿರ್ದೇಶನ ಮಾಡಿದ್ದ ಆರ್ಯನ್ ತೇಜಸ್, ಕೊರೋನಾಗೂ ಮೊದಲೇ ಈ ಕಥೆಯನ್ನು ರೆಡಿ ಮಾಡಿಕೊಂಡಿದ್ದರು. ನಂತರ ಅದನ್ನು ಸ್ನೇಹಿತ ನಮನ್ ನಾರಾಯಣ್ ಅವರಿಗೆ ಹೇಳಿದಾಗ ಅವರುಗಳು ಇಷ್ಟವಾಗಿ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಕನ್ನಡಕ್ಕೊಂದು ಒಳ್ಳೆಯ ಸಿನಿಮಾ ಕೊಡಬೇಕು ಎಂಬ ನಿಟ್ಟಿನಲ್ಲಿ, ಸ್ನೇಹಿತರಾದ ನಮನ್ ನಾರಾಯಣ್, ವೈಭವ್ ಸುರೇಶ್, ಸಂತೋಷ್ ಮತ್ತು ಶ್ರೀಕಾಂತ ಬಿ. ಬಿ. ಸೇರಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಈ ಚಿತ್ರದ ಟ್ರೈಲರ್ ಮತ್ತು ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು.

ನಾನು ಕರುಣಾಕರ ಪ್ರತಿಯೊಬ್ಬರ ಜೀವನಕ್ಕೂ ತುಂಬಾನೇ ಕನೆಕ್ಟ್ ಆಗುವಂಥ ಚಿತ್ರ. ಅಪ್ಪ ಮಗನ ಬಾಂಧವ್ಯ ಹಾಗೂ ಗಂಡ ಹೆಂಡತಿಯ ಸಂಬಂಧದ ಸುತ್ತ ನಡೆಯೋ ಕಥೆ ಇದಾಗಿದೆ. ಸದ್ಯ ತನ್ನೆಲ್ಲಾ ಕೆಲಸಗಳನ್ನು ಮುಗಿಸಿಕೊಂಡು ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರ ಏಪ್ರಿಲ್ 3ರಂದು ರಾಜ್ಯಾದ್ಯಂತ ರಿಲೀಸಾಗುತ್ತಿದೆ. ಪಾಪ್ ಕಾರ್ನ್ ಸಿನಿಮಾ ಪ್ರೊಡಕ್ಷನ್ ಮೂಲಕ ನಿರ್ಮಾಣವಾಗಿರುವ ನಾನು ಕರುಣಾಕರ ಚಿತ್ರದಲ್ಲಿ, ನಾಯಕನಾಗಿ ಆರ್ಯನ್ ತೇಜಸ್ ಹಾಗೂ ಅವರ ಪತ್ನಿಯಾಗಿ ಭಾರ್ಗವಿ ಎಲ್ ಎಲ್ ಬಿ ಖ್ಯಾತಿಯ ರಾಧಾ ಭಗವತಿ ಹಾಗೂ ಮಗನ ಪಾತ್ರದಲ್ಲಿ ಮಾ ಭವೀಶ್ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಕರಿಸುಬ್ಬು, ಎಂಕೆ ಮಠ, ಬಿ.ಎಂ. ವೆಂಕಟೇಶ, ಅಪೂರ್ವ ಸೇರಿದಂತೆ ಹಲವರು ನಟಿಸಿದ್ದಾರೆ. ನಾಯಕ ನಿರ್ದೇಶಕ ಆರ್ಯನ್ ತೇಜಸ್ ಮಾತನಾಡುತ್ತ ಪ್ರತಿಯೊಬ್ಬರ ಮನೆಯಲ್ಲೂ, ಒಬ್ಬ ಕರುಣಾಕರ ಇರ್‍ತಾನೆ, ಮಧ್ಯಮ ವರ್ಗದ ಎಲ್ಲ ಫ್ಯಾಮಿಲಿಯಲ್ಲೂ ನಡೆವ ಕಥೆ, ಮೈಸೂರು ಮೇಲುಕೋಟೆ, ಹಾಗೂ ಬೆಂಗಳೂರಿನ ಯಲಹಂಕ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ, ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್ ತನ್ನ ಕುಟುಂಬವನ್ನು ಮುನ್ನಡೆಸಿಕೊಂಡು ಹೋಗಲು ಎಷ್ಟೆಲ್ಲ ಕಷ್ಟ ಪಡುತ್ತಾನೆ ಎಂಬುದನ್ನು ಈ ಚಿತ್ರದಲ್ಲಿ ಹೇಳಿದ್ದೇವೆ, ಆ ಕುಟುಂಬದ ಯಜಮಾನನಾಗಿ ನಾನು ನಟಿಸಿದ್ದೇನೆ ಎಂದು ಹೇಳಿದರು.

ನಾಯಕಿ ರಾಧಾ ಭಗವತಿ ಮಾತನಾಡುತ್ತ ಇದು ನನ್ನ 5ನೇ ಚಿತ್ರ, ಮಿಡಲ್ ಕ್ಲಾಸ್ ಫ್ಯಾಮಿಲಿಯ ತಾಯಿಯಾಗಿ ನಾನು ಕಾಣಿಸಿಕೊಂಡಿದ್ದೇನೆ, ಈ ಚಿತ್ರದಲ್ಲಿ ಅಭಿನಯಿಸುವಾಗ ನನ್ನ ಬಾಲ್ಯದ ದಿನಗಳ ನೆನಪಾಯ್ತು. ನನಗೂ ದೊಡ್ಡವಳಾಗಿ ಏನಾದರೂ ಮಾಡಬೇಕೆಂಬ ಆಸೆಯಿರುತ್ತೆ, ಆದರೆ ಗಂಡ, ಮಗನಿಗೋಸ್ಕರ ಕನಸನ್ನು ಬದಿಗೊತ್ತಿ ಅವಿಗೆ ಸಪೋರ್ಟ್ ಮಾಡುತ್ತೇನೆ ಎಂದು ವಿವರಿಸಿದರು.



ನಿರ್ಮಾಪಕ ವೈಭವ್ ಸುರೇಶ್ ಮಾತನಾಡುತ್ತ ಒಂದು ಒಳ್ಳೇ ಸಿನಿಮಾ ಮಾಡಬೇಕೆಂದು ತುಂಬಾ ವರ್ಷಗಳಿಂದ ಕನಸಿತ್ತು, ಅದು ಈ ಸಿನಿಮಾ ಮೂಲಕ ನನಸಾಗಿದೆ. ನಾನು ನಮನ ನಾರಾಯಣ ಸೇರಿ ಈ ಚಿತ್ರ ನಿರ್ಮಾಣ ಮಾಡಿದ್ದೇವೆ, ಚಿಕ್ಕ ಮಕ್ಕಳು ತಂದೆಗೆ ಹೇಗೆ ಕಷ್ಟ ಕೊಡುತ್ತವೆ, ಅದಕ್ಕಾಗಿ ತಂದೆ ಏನು ಮಾಡುತ್ತಾನೆ ಎಂಬುದೇ ಚಿತ್ರದ ಕಥೆ ಎಂದರು.

800 ಕೋಟಿ ಕ್ಲಬ್‌ನತ್ತ ಧುರಂಧರ್ 2



ದೇಶಾದ್ಯಂತ ಯಶಸ್ವಿ ಪ್ರದರ್ಶನ ಮುನ್ನುಗ್ಗುತ್ತಿರುವ ರಣವೀರ್ ಸಿಂಗ್ ಅಭಿನಯದ ಧುರಂಧರ್: ದಿ ರಿವೇಂಜ್ ಚಿತ್ರವು ಒಂದರ ನಂತರ ಒಂದರಂತೆ ದಾಖಲೆಗಳನ್ನು ಮುರಿಯುತ್ತಿದೆ. ಕೇವಲ ನಾಲ್ಕು ದಿನಗಳ ಹಿಂದಷ್ಟೇ ಬಿಡುಗಡೆಯಾದ ಈ ಚಿತ್ರವು ಬಾಕ್ಸ್‌ಆಫೀಸ್‌ನಲ್ಲಿ ನೂರಾರು ಕೋಟಿ ಕ್ಲಬ್ ಸೇರಿದೆ. ಈ ಚಿತ್ರವನ್ನು ನಿರ್ಮಿಸಿದ ನಿರ್ಮಾಣ ಸಂಸ್ಥೆ ಜಿಯೋ ಸ್ಟುಡಿಯೋಸ್ ತನ್ನ ದೇಶೀಯ ಮತ್ತು ವಿಶ್ವಾದ್ಯಂತ ಬಾಕ್ಸ್ಆಫೀಸ್ ಕಲೆಕ್ಷನ್ ವಿವರಗಳನ್ನು ಹಂಚಿಕೊಂಡಿದೆ. ಧುರಂಧರ್ 2 ಈಗ ಜಾಗತಿಕವಾಗಿ 800 ಕೋಟಿ ರೂ. ಕ್ಲಬ್ ಸೇರುವತ್ತ ದಾಪುಗಾಲಿಟ್ಟಿದೆ.

ಮಾರ್ಚ್ 18 ರಂದು ಸಂಜೆ 5 ಗಂಟೆಯ ನಂತರ ನಡೆದ ಪ್ರೀಮಿಯರ್ ಶೋನಲ್ಲೇ ಧುರಂಧರ್ ಚಿತ್ರವು ಭಾರತದಲ್ಲಿ ನಡೆದ 12,700 ಕ್ಕೂ ಹೆಚ್ಚು ಪ್ರದರ್ಶನಗಳಿಂದ 43 ಕೋಟಿ ರೂ.ಗಳನ್ನು ಗಳಿಸಿತ್ತು. ಇದು ಪೂರ್ವವೀಕ್ಷಣೆಯ ದಿನದಲ್ಲಿ ಅತಿಹೆಚ್ಚು ಗಳಿಕೆಯನ್ನು ಕಂಡಂಥ ಚಿತ್ರವಾಗಿದ್ದು, 25 ಕೋಟಿ ರೂ. ಗಳಿಸಿದ್ದ ಪವನ್ ಕಲ್ಯಾಣ್ ಅವರ ದೆ ಕಾಲ್ ಹಿಮ್ ಓಜಿ ಚಿತ್ರವನ್ನು ಹಿಂದಿಕ್ಕಿದೆ.

ಇದೀಗ ಧುರಂಧರ್ 2 ಚಿತ್ರ, ಬಿಡುಗಡೆಯಾದ ಕೇವಲ ನಾಲ್ಕೇ ದಿನಗಳಲ್ಲಿ ವಿಶ್ವಾದ್ಯಂತ 761 ಕೋಟಿ ರೂ.ಗಳನ್ನ ಗಳಿಸಿದೆ. ಇದರಲ್ಲಿ 550 ಕೋಟಿ ರೂ. ಭಾರತೀಯ ಚಿತ್ರರಂಗದ ಮಾರುಕಟ್ಟೆಯಿಂದಲೇ ಬಂದಿದ್ದರೆ, ವಿದೇಶಿ ಕಲೆಕ್ಷನ್ 211 ಕೋಟಿ ರೂ. ಎಂದು ನಿರ್ಮಾಣ ಸಂಸ್ಥೆ ಜಿಯೋ ಸ್ಟುಡಿಯೋಸ್ ತಿಳಿಸಿದೆ.

ಮಾರ್ಚ್ 18ರಂದು ನಡೆದ ಪ್ರೀಮಿಯರ್ ಶೋ ಸೇರಿದಂತೆ ಮೊದಲ ದಿನವೇ ಧುರಂಧರ್ ಚಿತ್ರವು 145 ಕೋಟಿ ರೂ.ಗಳನ್ನು ಗಳಿಸಿದೆ. 2ನೇ ದಿನ 88 ಕೋಟಿ ರೂ. ಗಳಿಸಿದರೆ, ನಂತರ 3ನೇ ದಿನ 117ಕೋಟಿ ರೂ.ಗಳು ಮತ್ತು 4ನೇ ದಿನ 121 ಕೋಟಿ ರೂ.ಗಳನ್ನು ಗಳಿಸಿದೆ. ಒಟ್ಟು ನಾಲ್ಕು ದಿನಗಳಲ್ಲಿ ಭಾರತದಲ್ಲೇ ಒಟ್ಟು 466 ಕೋಟಿ ರೂ.ಗಳ ಕಲೆಕ್ಷನ್ ಆಗಿದೆ.

ಧುರಂಧರ್ 2 ಚಿತ್ರದಲ್ಲಿ ರಣವೀರ್‌ಸಿಂಗ್ ಅವರೊಂದಿಗೆ ಅರ್ಜುನ್ ರಾಂಪಾಲ್, ಆರ್. ಮಾಧವನ್ ಮತ್ತು ಸಂಜಯ್‌ದತ್ ಸೇರಿದಂತೆ ಅತಿರಥ ಮಹಾರಥ ಸ್ಟಾರ್ ನಟರುಗಳೆಲ್ಲ ಅಭಿನಯಿಸಿದ್ದಾರೆ. ಧುರಂಧರ್: ದಿ ರಿವೇಂಜ್ ಚಿತ್ರವು ಕನ್ನಡ ಸೇರಿದಂತೆ ಹಿಂದಿ, ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆಗಳಲ್ಲೂ ರಿಲೀಸ್ ಆಗಿದೆ.

ಹಾರರ್ ಚಿತ್ರಕ್ಕೆ ಕೈಹಾಕಿದ ಯತಿರಾಜ್



ಪತ್ರಕರ್ತ, ನಟ ಯತಿರಾಜ್ ಈಗಾಗಲೇ ಲವ್, ಸೆಂಟಿಮೆಂಟ್ ಹೀಗೆ ಹಲವಾರು ರೀತಿಯ ಚಿತ್ರಗಳನ್ನು ನಿರ್ದೇಶನ ಮಾಡಿ ಗುರುತಿಸಿಕೊಂಡಿದ್ದರೂ ಹಾರರ್ ಚಿತ್ರಕ್ಕೆ ಕೈ ಹಾಕಿರಲಿಲ್ಲ, ಇತ್ತೀಚೆಗೆ ಧಾರಾವಾಹಿಗಳಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿದ್ದ ಅವರು, ಇದೀಗ ತಮ್ಮ ನಿರ್ದೇಶನದಲ್ಲಿ ಹಾರರ್ ಚಿತ್ರವೊಂದನ್ನು ಕೈಗೆತ್ತಿಕೊಂಡಿದ್ದಾರೆ, ಇತ್ತೀಚೆಗಷ್ಟೇ ಈ ಹೊಸ ಚಿತ್ರದ ಸ್ಕ್ರಿಪ್ಟ್ ಪೂಜೆ ನೆರವೇರಿಸಿ ಚಿತ್ರಕಥೆಯಲ್ಲಿ ತೊಡಗಿಕೊಂಡಿದ್ದಾರೆ.



ಯುಗಾದಿ ಹಬ್ಬದ ಶುಭ ದಿನದಂದು ಬೆಂಗಳೂರಿನ ಪ್ರಶಾಂತ ನಗರದ ಪ್ರಶಾಂತ ಗಣಪತಿ ದೇವಾಲಯದಲ್ಲಿ ಈ ಚಿತ್ರದ ಸ್ಕ್ರಿಪ್ಟ್ ಪೂಜೆಯನ್ನು ಸರಳವಾಗಿ ನೆರವೇರಿಸಿಕೊಂಡ ಚಿತ್ರತಂಡ ಇದೀಗ ಕಲಾವಿದರ ಹುಡುಕಾಟದಲ್ಲಿ ತೊಡಗಿಕೊಂಡಿದೆ. ಸುನಿ ಎನಿ ಪ್ರಸ್ತುತ ಪಡಿಸುತ್ತಿರುವ ಈ ಹೊಸ ಚಿತ್ರವು ವೃದ್ಧಿ ಎಂಟರ್‌ಪ್ರೈಸಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗುತ್ತಿದ್ದು, ಟಿ. ಆರ್. ಚೇತನ್ ಅವರು ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ.

ಇದೇ ಮೊದಲಬಾರಿಗೆ ಹಾರರ್ ಕಥಾಹಂದರದ ಹಿಂದೆ ಬಿದ್ದಿರುವ ನಿರ್ದೇಶಕ ಯತಿರಾಜ್, ಇದಕ್ಕಾಗಿ ಹೊಸಬಗೆಯ ಹಾರರ್ ಕಥೆಯನ್ನು ರೆಡಿ ಮಾಡಿಕೊಂಡಿದ್ದಾರಂತೆ. ಹಾರರ್ ಮಿಶ್ರಿತವಾದ ಈ ಕಥೆಯಲ್ಲಿ, ಹಾಸ್ಯ ಹಾಗೂ ಭಾವನಾತ್ಮಕ ಬೆಸುಗೆಯ ತೀವ್ರತೆಗೂ ಹೆಚ್ಚು ಒತ್ತುಕೊಟ್ಟಿದ್ದಾರಂತೆ.

ಇನ್ನೂ ಹೆಸರಿಡದ ಈ ಚಿತ್ರದ ಚಿತ್ರೀಕರಣವನ್ನು ಮೇ ತಿಂಗಳಲ್ಲಿ ಆರಂಭಿಸಲು ಚಿತ್ರತಂಡವು ಸಜ್ಜಾಗಿದ್ದು, ಉತ್ತಮ ಪ್ರತಿಭೆಗಳನ್ನು ಎದುರು ನೋಡುತ್ತಿದೆ. ಈ ಹಿಂದೆ ಯತಿರಾಜ್ ಅವರ ನಿರ್ದೇಶನದ 'ಸಂಜು' ಚಿತ್ರಕ್ಕೆ ಸಂಗೀತ ಸಂಯೋಜಿಸಿದ್ದ ವಿಜಯ್ ಹರಿತ್ಸ ಅವರು ಈ ಚಿತ್ರಕ್ಕಾಗಿ ಮತ್ತೊಮ್ಮೆ ಯತಿರಾಜ್ ಅವರ ಜೊತೆಯಾಗಿದ್ದಾರೆ. ಈ ಚಿತ್ರಕ್ಕೆ ಶ್ರೀಕಾಂತ್ ಅವರು ಸಂಭಾಷಣೆ ಬರೆಯುತ್ತಿದ್ದಾರೆ. ಉಳಿದ ತಂತ್ರಜ್ಞರ ಹಾಗೂ ಕಲಾವಿದರ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26